ಬೀದರ ▪ ಕಲಬುರಗಿ ▪ ಯಾದಗಿರಿ ▪ ರಾಯಚೂರ ▪ ಕೊಪ್ಪಳ ▪ ಬಳ್ಳಾರಿ ▪ ಬಾಗಲಕೋಟೆ ▪ ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ
Postal Registration No :BDR/ 054/2024-2026 ▪ Email:mallammanudi@gmail.com

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

MALLAMMA NUDI REGIONAL NEWSPAPER
ಸಂಪಾದಕರು:ರಮೇಶರೆಡ್ಡಿ
ಪ್ರಾದೇಶಿಕ ಕನ್ನಡ ದಿನಪತ್ರಿಕೆ
ಮೊ.9448604450

VOLUME-ಸಂಪುಟ:12 | ISSUE- ಸಂಚಿಕೆ: 329 | PAGE- ಪುಟ 8 | ರವಿವಾರ – 29–12–2024, ಬೀದರ | RNI NO:KARKAN/2011/48371 | RS.ಬೆಲೆ 2/–

## ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆ ಈಗ ಡಿಜಿಟಲೀಕರಣಗೊಂಡಿದೆ..

ಪ್ರೀಯ ಓದುಗರೇ.......
ಜಾಹಿರಾತುದಾರರೇ...

ತಮ್ಮೆಲ್ಲರ ಒತ್ತಾಸೆಯಂತೆ ನಿಮ್ಮ "ಮಲ್ಲಮ್ಮ ನುಡಿ" ಪ್ರಾದೇಶಿಕ ಕನ್ನಡ ದಿನ ಪತ್ರಿಕೆ ಈಗ ಡಿಜಿಟಲೀಕರಣಗೊಂಡಿದೆ ಎಂಬ ವಿಷಯ ತಿಳಿಸಲು ಹರ್ಷಿಸುತ್ತೇನೆ. ಹನ್ನೆರಡು ವಸಂತಗಳನ್ನು ಯಶಸ್ವಿಯಾಗಿ ಪೂರೈಸಿ, ಹದಿಮೂರನೇ ವಸಂತಕ್ಕೆ ಕಾಲಿಡುತ್ತಿರುವ ಈ ಸುಸಂದರ್ಬದಲ್ಲಿ, ರಾಜ್ಯವೇ ಅಲ್ಲದೇ ದೇಶದ ವಿವಿಧೆಡೆಗಳಿಂದ ಸಹಕಾರ ದೊರೆತ ಹಿನ್ನಲೆಯಲ್ಲಿ ಪತ್ರಿಕೆಯನ್ನು ಡಿಜಿಟಲೀಕರಣಗೊಳಿಸಿ ನೂತನ ವೆಬ್‌ಸೈಟ್ ಲಾಂಚ್ ಮಾಡುವ ಮೂಲಕ onlineನಲ್ಲಿ ಪತ್ರಿಕೆ ವೀಕ್ಷಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಈಗ ಪತ್ರಿಕೆಯನ್ನು ನೈಜ ಸುದ್ದಿಯೊಂದಿಗೆ ಹೊಸ ರೂಪದಲ್ಲಿ ನಿಮ್ಮ ಮುಂದಿಡುವ ಪ್ರಯತ್ನ ಮಾಡಲಾಗಿದೆ. ನಮ್ಮ ಈ ಪ್ರಯತ್ನಕ್ಕೆ. ಓದುಗರು, ಚಂದಾದಾರರು, ಹಾಗೂ ಜಾಹೀರಾತುದಾರರಾದ ತಾವುಗಳು ನಿಮ್ಮ ಮನೆಯ ಮಗನಂತೆ ತಮ್ಮ ಪ್ರೋತ್ಸಾಹ ವನ್ನು ಎಂದಿನಂತೆ ನೀಡುವಿರೆಂದು ನಿರೀಕ್ಷಿಸುತ್ತೇವೆ.



ಇಂತಿ
ರಮೇಶರಡ್ಡಿ
ಸಂಪಾದಕ

www.mallammanudi.in

# ಪಂಚಭೂತಗಳಲ್ಲಿ ಲೀನರಾದ ಮನಮೋಹನ್ ಸಿಂಗ್

# ಅಗ್ನಿ ಸ್ಪರ್ಶ ಮಾಡಿದ ಮಗಳು

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ: ದೇಶಕಂಡ ಅಪರೂಪದ ರಾಜಕಾರಣಿ ಹಾಗೂ ದೇಶದ ಶ್ರೇಷ್ಠ ಅರ್ಥ ಶಾಸ್ತ್ರಜ್ಞಡಾ.ಮನಮೋಹನ್ ಸಿಂಗ್ ಅವರ ಅಂತ್ಯಸಂಸ್ಕಾರ ಇಂದು ದೆಹಲಿಯ ನಿಗಮ ಬೋಧ್ ಘಾಟ್‌ನಲ್ಲಿ ನಡೆದಿದ್ದು, ಸಕಲ ಸರ್ಕಾರಿ ಗೌರವಗಳೊಂದಿಗೆ ಮತ್ತು ಸಿಖ್ ಧರ್ಮದ ಸಂಪ್ರದಾಯದಂತೆ ಸಿಂಗ್ ಅವರ ಅಂತಿಮ ಸಂಸ್ಕಾರ ನಡೆಯಿತು.





ಮನಮೋಹನ್ ಸಿಂಗ್ ಅವರ ಪುತ್ರಿ ತಮ್ಮ ತಂದೆಯ ಚಿತೆಗೆ ಅಗ್ನಿ ಸ್ಪರ್ಶ ಮಾಡುವ ಮೂಲಕ ಅಂತಿಮ ಸಂಸ್ಕಾರ ನೆರವೇರಿಸಿದರು. ಈ ವೇಳೆ ಉಪಸ್ಥಿತರಿದ್ದ ನಾಯಕರು ಅವರಿಗೆ ಅಂತಿಮ ಗೌರವ ಸಲ್ಲಿಕೆ ಮಾಡಿದರು.

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನವದೆಹಲಿಯ ಸ್ವಗೃಹದಿಂದ ಕಾಂಗ್ರೆಸ್‌ನ ಪ್ರಧಾನ ಕಚೇರಿಗೆ ಪಾರ್ಥಿವ ಶರೀರವನ್ನು ಕರೆ ತಂದ ಬಳಿಕ ಅಲ್ಲಿ ಅವರಿಗೆ ಅಂತಿಮ ಗೌರವ ಸಲ್ಲಿಸಲಾಯಿತು. ಆ ಬಳಿಕ ನಿಗಮಬೋಧ್ ಘಾಟ್‌ಗೆ ಅಂತಿಮಯಾತ್ರೆಯನ್ನು ಸಾವಿರಾರು ಮಂದಿಯ ಸಮ್ಮುಖದಲ್ಲಿ ಕರೆತರಲಾಯಿತು. ಪಾರ್ಥಿವ ಶರೀರಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡ ಹೆಗಲು ಕೊಟ್ಟರು.

ಮನಮೋಹನ್ ಸಿಂಗ್ ಅವರಿಗೆ ಅಂತಿಮ ವಿದಾಯ ಹೇಳಲು ದೆಹಲಿಯ ನಿಗಮಬೋಧ್ ಘಾಟ್‌ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಎಐಸಿಸಿ ವರಿಷ್ಠೆ ಸೋನಿಯಾ ಗಾಂಧಿ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿವಿಧ ರಾಜ್ಯಗಳ ಸಿಎಂಗಳು ಸಹಿತ ಕೇಂದ್ರ ಸಚಿವರುಗಳು, ಕಾಂಗ್ರೆಸ್ ನಾಯಕರುಗಳು ಹಾಜರಿದ್ದರು. ಈ ಎಲ್ಲಾ ನಾಯಕರು ಅಗಲಿದ ನಾಯಕನಿಗೆ ಪುಷ್ಪ ನಮನ ಸಲ್ಲಿಸಿದರು.

ರಾಷ್ಟ್ರ ನಾಯಕರುಗಳು ಮನಮೋಹನ್ ಸಿಂಗ್ ಅವರಿಗೆ ಗೌರವ ಸಲ್ಲಿಸಿದ ಬಳಿಕ, ಮೂರು ಸೇನಾ ಪಡೆಗಳಿಂದ ಸರ್ಕಾರಿ ಗೌರವಗಳನ್ನು ಸಲ್ಲಿಸಲಾಯಿತು. ನಂತರ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಹೊದಿಸಲಾಗಿದ್ದ ರಾಷ್ಟ್ರಧ್ವಜವನ್ನು ಮನಮೋಹನ್ ಸಿಂಗ್ ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಯಿತು. ಬಳಿಕ ಸಿಖ್ ಧರ್ಮದ ಧಾರ್ಮಿಕ ಕ್ರಮದಂತೆ ಶ್ಲೋಕಗಳನ್ನು ಪಠಣೆ ಮಾಡಿ, ಮಧ್ಯಾಹ್ನ 12.55 ಕ್ಕೆ ಸರಿಯಾಗಿ ಮನಮೋಹನ್ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಲಾಯಿತು.

## ಬೊಮ್ಮಗೊಂಡೇಶ್ವರ ತತ್ವ ಪಾಲಿಸಿ



ಮಲ್ಲಮ್ಮ ನುಡಿ ವಾರ್ತೆ

ಬೀದರ್:ಡಿ.28: ಬೊಮ್ಮಗೊಂಡೇಶ್ವರ ತತ್ವ, ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದು ಜಹೀರಾಬಾದ್ ತಾಲ್ಲೂಕಿನ ಮಲ್ಲಯ್ಯಗಿರಿ ಹಾಗೂ ದೇಗಲಮಡಿ ಆಶ್ರಮದ ಪೀಠಾಧಿಪತಿ ಡಾ. ಬಸವಲಿಂಗ ಅವಧೂತರು ಹೇಳಿದರು.

ಬೀದರ್ ತಾಲ್ಲೂಕಿನ ಬರಿದಾಬಾದ್ ಗ್ರಾಮದಲ್ಲಿ ಗುರುವಾರ ನೂತನ ಬೊಮ್ಮಗೊಂಡೇಶ್ವರ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಬೊಮ್ಮಗೊಂಡೇಶ್ವರರು ದೈವಿ ಪುರುಷರಾಗಿದ್ದರು. ಕಾಯಕ ನಿಷ್ಠೆಗೆ ಹೆಸರಾಗಿದ್ದರು. ಸಮಾಜದ ಉದ್ಧಾರಕ್ಕೆ ಶ್ರಮಿಸಿದ್ದರು ಎಂದು ತಿಳಿಸಿದರು.

ಜೀವನ ನಶ್ವರ. ಬಹಳ ಕಠಿಣವಲ್ಲ. ಹೀಗಾಗಿ ಸರಳವಾಗಿ ಬದುಕಲು ಕಲಿಯಬೇಕು. ಹೆಚ್ಚು ಸಂಪಾದನೆಯ ಹಪಾಹಪಿತನ ಬಿಡಬೇಕು. ಇದ್ದುದ್ದರಲ್ಲೇ ಸಂತೃಪ್ತಿ ಪಡಬೇಕು ಎಂದು ಹೇಳಿದರು.

ಮಹಾ ಪುರುಷರ ಜೀವನ ಚರಿತ್ರೆ ಪುಸ್ತಕ ಓದಬೇಕು. ಅವರಂತೆ ಬದುಕಲು ಪ್ರಯತ್ನಿಸಬೇಕು. ನಿತ್ಯ ದೇವರ ಸ್ಮರಣೆ, ಜಪ, ತಪ, ಧ್ಯಾನ ಮಾಡಬೇಕು ಎಂದು ತಿಳಿಸಿದರು.


ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬಿತ್ತಬೇಕು. ಸತ್ಪ್ರಜೆಯಾಗಲು ಅವರಿಗೆ ಪ್ರೇರಣೆ ನೀಡಬೇಕು ಎಂದರು.

ಪ್ರಮುಖರಾದ ಚಂದ್ರಕಾಂತ ನದ್ದೆಕರ್, ಗೋಪಾಲ್ ನದ್ದೆಕರ್, ಮಾಣಿಕ ನದ್ದೆಕರ್, ಅಶೋಕ್ ನದ್ದೆಕರ್, ರಾಜಶೇಖರ ಮಾಳಗೊಂಡ, ಪ್ರಭು ಓಲಿ, ರಾಮಶೆಟ್ಟಿ ಮಾಳಗೊಂಡ, ವಿಜಯಕುಮಾರ ಮೇತ್ರೆ, ಹಣಮಂತ ಪಾಟೀಲ ಚಿಟ್ಟಾ ಮತ್ತಿತರರು ಪಾಲ್ಗೊಂಡಿದ್ದರು.

### ಬೆಂಗಳೂರು: ಖಾಸಗಿ ಕಂಪನಿಯ ಡೇಟಾ ಕದ್ದು

## ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ, ನಾಲ್ವರ ಬಂಧನ

ಮಲ್ಲಮ್ಮ ನುಡಿ ವಾರ್ತೆ




ಬೆಂಗಳೂರು: ಖಾಸಗಿ ಕಂಪನಿಯೊಂದರ ಮಾಹಿತಿಯ ಡೇಟಾವನ್ನು ಕಳವು ಮಾಡಿ ವಿವಿಧ ಬ್ಯಾಂಕ್ ಖಾತೆಗಳಿಗೆ ಹಣವನ್ನು ವರ್ಗಾವಣೆ ಮಾಡಿಕೊಂಡಿದ್ದ ಹೊರ ರಾಜ್ಯದ ನಾಲ್ವರು ಸೈಬರ್ ವಂಚಕರನ್ನು ಬಂಧಿಸಿರುವ ಪೂರ್ವ ವಿಭಾಗದ ಸಿಇಎನ್ ಪೊಲೀಸರು ರೂ. 1,83,48,500 ನಗದು, 2 ಮೊಬೈಲ್ ನ್ನು ವಶಕ್ಕೆ ಪಡೆದಿದ್ದಾರೆ.

ಬೆಂಗಳೂರು ಮೂಲದ ಡ್ರೀಮ್ ಪ್ಲಗ್ ಟೆಕ್ ಸೆಲ್ಯೂಶನ್ ಪ್ರೈಲಿ(ಕ್ರೆಡ್) ಕಂಪನಿಯ ನೋಡಲ್ ಮತ್ತು ಕರೆಂಟ್ ಬ್ಯಾಂಕ್ ಖಾತೆಗಳು, ಆಕ್ಸಿಸ್ ಬ್ಯಾಂಕ್ ಇಂದಿರಾನಗರ ಶಾಖೆಯಲ್ಲಿದ್ದು, ಈ ಖಾತೆಗಳಿಗೆ ಲಿಂಕ್ ಇರುವ ಈ ಮೇಲ್ ಮತ್ತು ಮೊಬೈಲ್ ನಂಬರ್ ಗಳನ್ನು ಪಡೆದ ಅಪರಿಚಿತರು ಡೇಟಾವನ್ನು ಕಳವು ಮಾಡಿದ್ದು, ಕಾರ್ಪೊರೇಟ್ ಇಂಟರ್ನೆಟ್ ಬ್ಯಾಂಕಿಂಗ್ ಫಾರ್ಮ್ ಮತ್ತು ಸಹಿ, ಸೀಲುಗಳನ್ನು ನಕಲು ಮಾಡಿ, ಕಂಪನಿಗೆ ಸಂಬಂಧಿಸಿದ (2ನೇ ಪುಟ ನೋಡಿ...)

## ಮನಮೋಹನ್ ಸಿಂಗ್ ಅವರ ಸ್ಮಾರಕಕ್ಕೆ ಭೂಮಿ ನೀಡಲು ಕೇಂದ್ರ ಒಪ್ಪಿಗೆ







ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ,ಡಿ.28– ಮಾಜಿ ಪ್ರಧಾನಮಂತ್ರಿಡಾ.ಮನಮೋಹನ್ ಸಿಂಗ್ ಅವರ ಸಾರಕಕ್ಕೆ ಭೂಮಿ ನೀಡಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಸಾರಕಕ್ಕೆ ಕೇಂದ್ರ ಸರ್ಕಾರ ಶೀಘ್ರವೇ ಸ್ಥಳ ಹಂಚಿಕೆ ಮಾಡಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಕಟಿಸಿದ್ದಾರೆ.

ಕೇಂದ್ರ ಸಂಪುಟ ಸಭೆಯ ಬಳಿಕ ಶನಿವಾರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗೆ ಈ ವಿಷಯವನ್ನು ತಿಳಿಸಿದ್ದಾರೆ. ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ ಈ ಬಗ್ಗೆ ಹೇಳಿಕೆ ನೀಡಿ, ಅಂತ್ಯಕ್ರಿಯೆ ಮತ್ತು ಇತರ ವಿಧಿವಿಧಾನಗಳು ಮುಂದುವರಿಸಬಹುದು. ಏಕೆ–ಂದರೆ ಟ್ರಸ್ಟ್ ರಚನೆ ಮತ್ತು ಜಾಗ ಹಂಚಿಕೆಯಾಗಬೇಕಿದೆ ಎಂದು ಸ್ಪಷ್ಟಪಡಿಸಿದೆ.

ಕಾಂಗ್ರೆಸ್ ಮುಖ್ಯಸ್ಥರಿಂದ ಮನಮೋಹನ್ ಸಿಂಗ್ ಅವರ ಸಾರಕಕ್ಕಾಗಿ ಜಾಗವನ್ನು ಮಂಜೂರು ಮಾಡುವಂತೆ ಮನವಿ ಬಂದಿದ್ದು, ಈ ಮನವಿಯನ್ನು ಸ್ವಿಕರಿಸಲಾಗಿದೆ. ಸಚಿವ ಸಂಪುಟ ಸಭೆಯ ನಂತರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಾರಕ ನಿರ್ಮಾಣಕ್ಕಾಗಿ ಜಾಗವನ್ನು ಮಂಜೂರು ಮಾಡಲಿದ್ದಾರೆಂದು ತಿಳಿಸಿದೆ.


ಸಾರಕಕ್ಕಾಗಿ ಟ್ರಸ್ಟ್ ರಚನೆ ಮತ್ತು ಜಾಗದ ಹಂಚಿಕೆಯನ್ನು ಅಂತಿಮಗೊಳಿಸಿರುವುದರಿಂದ, ಅಂತ್ಯಕ್ರಿಯೆ ಮತ್ತು ಔಪಚಾರಿಕತೆಗಳು ಈ ಮಧ್ಯೆ ಮುಂದುವರಿಯಬಹುದು ಎಂದು ಗೃಹ ಸಚಿವಾಲಯ ಹೇಳಿದೆ.

ಮುಂಜಾನೆ ಮಾಜಿ ಪ್ರಧಾನಿ ದಿವಂಗತ ಡಾ.ಮನಮೋಹನ ಸಿಂಗ್ ಅವರ ಸಾರಕಕ್ಕೆ ಜಾಗ ಹಂಚಿಕೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಕಾಂಗ್ರೆಸ್ ಅಧ್ಯಕ್ಷ–ರಿಂದ ಮನವಿ ಮಾಡಿಕೊಂಡ (2ನೇ ಪುಟ ನೋಡಿ...)

## ಬಿಜೆಪಿ ಅವಧಿಯ ಸಾಲದ ಹೊರೆ ಸಾರಿಗೆ ಸಂಸ್ಥೆಗಳಿಗೆ ಶಾಪವಾಗಿದೆ : ಕಾಂಗ್ರೆಸ್ ಟೀಕೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ‘ಸಾರಿಗೆ ನೌಕರರ ಹಿತಕಾಯುವಲ್ಲಿ ನಾವು ಬದ್ಧತೆ ಹೊಂದಿದ್ದೇವೆ. ತಮ್ಮ ಅವಧಿಯ ಸಾಲದ ಹೊರೆಯಿಂದ ಹೊರಬರಲು ಶತ ಪ್ರಯತ್ನ ಮಾಡುತ್ತಿದ್ದೇವೆ. ನಿಮ್ಮ(ಬಿಜೆಪಿ) ಆಡಳಿತದ ಅವಧಿಯೇ ಸಾರಿಗೆ ಸಂಸ್ಥೆಗಳಿಗೆ ದುರಂತ, ಶಾಪವಾಗಿ ಪರಿಣಮಿಸಿದೆ’ ಎಂದು ಕಾಂಗ್ರೆಸ್, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದೆ. ಶನಿವಾರ ಎಕ್ಸ್‌ನಲ್ಲಿ ಪೋಸ್ಟ್ ಹಾಕಿರುವ ಕಾಂಗ್ರೆಸ್, ‘ಬಿಜೆಪಿಯವರು ಮೂರ್ಖರು, ಲಾಭಕ್ಕೂ ಆದಾಯಕ್ಕೂ ವ್ಯತ್ಯಾಸ ತಿಳಿಯದ ದಡ್ಡ ಶಿಖಾಮಣಿಗಳು ಎಂಬುದನ್ನು ಪ್ರತಿ ಬಾರಿ ದಾಖಲೆ ಸಮೇತ ರುಜುವಾತು



ಮಾಡುತ್ತಿರುತ್ತಾರೆ. ನಾವು ಅಂಕಿ–ಅಂಶಗಳ ಮೂಲಕ ಮಾಹಿತಿ ಒದಗಿಸಿ ಇವರ ಸುಳ್ಳನ್ನು ಬಯಲಿಗೆಳೆದರೂ ಇವರು ಸುಧಾರಣೆ ಹೊಂದುವ ಯಾವುದೇ ಸಣ್ಣ ಕುರುಹು ಕಾಣದಿರುವುದು ವಿಷಾದನೀಯ ಎಂದು ಲೇವಡಿ ಮಾಡಿದೆ. ‘ಬಿಜೆಪಿ ಅವಧಿಯ ಆಡಳಿತದಲ್ಲಿ ಸಾರಿಗೆ ನೌಕರರಿಗೆ ಒಳ್ಳೆಯದನ್ನು ಮಾಡುವ ಯಾವುದೇ ನೀತಿ, ಕಾರ್ಯಕ್ರಮ ಅನುಷ್ಠಾನಗೊಳಿಸದೆ, 15 ದಿವಸ ಸಾರಿಗೆ ಮುಷ್ಕರ ಆಗಲು ಕಾರಣರಾದ ನೀವು ಇಂದು ಪತ್ರಿಕಾಗೋಷ್ಠಿ ನಡೆಸಿ ಅವರ ಪರವಾಗಿ ಮಾತನಾಡುವ ಯಾವ ನೈತಿಕತೆ ನಿಮಗಿದೆ. ಇವತ್ತಿನ (2ನೇ ಪುಟ ನೋಡಿ...)

## ಸಾರ್ವಜನಿಕರೇ ಗಮನಿಸಿ, ಸೈಬರ್ ವಂಚನೆಗೊಳಗಾದರೆ ತಕ್ಷಣ 1039ಗೆ ಕರೆ ಮಾಡಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಡಿ.28–ಸೈಬರ್ ವಂಚನೆಗೆ ಯಾರೇ ಒಳಗಾದರೂ ಕೂಡಲೇ 1039 ಗೆ ದೂರು ನೀಡಿದರೆ ಆ ಕರೆ ಎಲ್ಲಿಂದ ಬಂತು, ಯಾರು ಮಾಡಿದ್ದಾರೆ ಎಂಬುದನ್ನು ಪರಿಶೀಲಿಸಿ, ಸೈಬರ್ ವಂಚನೆಯಿಂದ ನಿಮ್ಮನ್ನು




ರಕ್ಷಿಸಬಹುದು ಎಂದು ನಗರ ಪೊಲೀಸ್ ಆಯುಕ್ತ ದಯಾನಂದ ಅವರು ಸಲಹೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಜಿಟಲ್ ಅರೆಸ್ಟ್, ಹೋಂ ಅರೆಸ್ಟ್ ಎಂದು ಯಾ–ರೇ ಕರೆ ಮಾಡಿದರೆ ತಕ್ಷಣ ಆ ಕರೆಯನ್ನು ಸ್ಥಗಿತಗೊಳಿಸಿ ಸ್ಥಳೀಯ ಪೊಲೀಸರಿಗಾಗಲೀ, ಸೈಬರ್ ಪೊಲೀಸರಿಗಾಗಲೀ (2ನೇ ಪುಟ ನೋಡಿ...)

## ಎ.ಎನ್.ಸಿ.ಸಿ.ಮೈದಾನದಲ್ಲಿ ಪ್ರತೀಕ್ ಲೆವನ್ ಸಿಂಧನೂರ ತಂಡಕ್ಕೆ ಭರ್ಜರಿ ಜಯ




(ಶಿವು ರಾಠೋಡ್)

ಮಲ್ಲಮ್ಮ ನುಡಿ ವಾರ್ತೆ

ಹುಣಸಗಿ: ನಾರಾಯಣಪುರಿನಲ್ಲಿ ನಡೆದ ಎ.ಎನ್.ಸಿ.ಸಿ ಮೈದಾನದಲ್ಲಿ ಶುಕ್ರವಾರ ಸ್ಥಳೀಯ ರಾಜುಗೌಡ ಅಭಿಮಾನಿ ಬಳಗದ ವತಿಯಿಂದ ಮಾಜಿ ಸಚಿವ ರಾಜುಗೌಡ ಹಾಗೂ ಅವರ ಸಹೋದರ ಬಬ್ಲುಗೌಡ ಅವರ ಜನ್ಮ ದಿನ ನಿಮಿತ್ತ ನಡೆದ ಟೂರ್ನಿಯ ಪ್ರಶಸ್ತಿ ಪ್ರಧಾನ ಕಾರ್ಯ ಕ್ರಮದಲ್ಲಿ ಮಾಜಿ ಸಚಿವ ರಾಜುಗೌಡ ಹಾಗೂ ಆಯೋಜಕರು ಆರ್‌ಟಿಜೆ ಚಾಲೆಂಜರ್ಸ್ ವಿನ್ನರ್ಸ್ ಟ್ರೋಫಿ ಹಾಗೆ 2.80.000 ನಗದನ್ನು ಹಣ ಪ್ರತೀಕ್ ಲೆವನ್ ಸಿಂಧನೂರ ತಂಡದ ಪ್ರಾಂಚೈಸಿ ರಾಮನಗೌಡ ಪ್ರಥಮ ಬಹುಮಾನ ಕೊಡಿಗೆ ಎಸ್.ಪಿ. ದಯಾನಂದ ಮಾಲೀಕರು ಡಿ.ಎಸ್. ಮ್ಯಾಕ್ಸ್ ಬೆಂಗರೂರು ನೀಡಿದರು. ಹಾಗೂ ದ್ವಿತೀಯ ಬಹುಮಾನವನ್ನು ಬಿ.ಎಸ್ ಹಳ್ಳಿಕೋಟಿ, 1.40.000 ನೀಡಿದ್ದರು . ಅದನ್ನು ಎಫ್. ಎಂ 11 ಹೊಸಪೇಟೆ ತಂಡದ (2ನೇ ಪುಟ ನೋಡಿ...)

## ಬೆಂಗಳೂರು: ಹೊಸ ವರ್ಷ ಸಂಭ್ರಮಾಚರಣೆ ಹಿನ್ನೆಲೆ; ಎಂಜಿ ರೋಡ್ ಮತ್ತಿತರ ಕಡೆಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: ನೂತನ ವರ್ಷ 2025ಕ್ಕೆ ಕೆಲವೇ ದಿನಗಳು ಬಾಕಿಯಿರುವಂತೆಯೇ ನಗರದ ಪೊಲೀಸರು ಹೊಸ ವರ್ಷ ಸಂಭ್ರಮಾಚರಣೆಗಾಗಿ ಜನರು ಹೆಚ್ಚಾಗಿ ಸೇರುವ ಕಡೆಗಳಲ್ಲಿ ಜನರು ಹಾಗೂ ವಾಹನಗಳ ಸುಗಮ ಸಂಚಾರಕ್ಕಾಗಿ ಬಿಗಿ ಭದ್ರತೆ ನಿಯೋಜನೆಯೊಂದಿಗೆ ವ್ಯಾಪಕವಾದ ಭದ್ರತಾ ವ್ಯವಸ್ಥೆ ಮಾಡಿದ್ದಾರೆ.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ, ಪ್ರತಿ ವರ್ಷದಂತೆ ಬೆಂಗಳೂರು ನಗರದಲ್ಲಿ ಹೊಸವರ್ಷಾಚರಣೆಗೆ ಯಾವುದೇ ಅಹಿತಕರ ಘಟನೆಗಳು ನಡೆ–ಯದಂತೆ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಹಿಂದಿನ ವರ್ಷದ ಘಟನೆಗಳು ಮತ್ತು ಅನುಭವದ ಆಧಾರದ ಮೇಲೆ ಹೆಚ್ಚಿನ ಭದ್ರತೆ ಕೈಗೊಂಡಿದ್ದೇವೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಪ್ರದೇಶಗಳನ್ನು ನಾವು





ಗುರುತಿಸಿದ್ದೇವೆ. ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ ಜಂಕ್ಷನ್, ಕೋರಮಂಗಲ, ಇಂದಿರಾನಗರ ಮತ್ತಿತರ ಕಡೆಗಳಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ಬಿಬಿಎಂಪಿ, ಮೆಟ್ರೋ ಮತ್ತು ಇತರ ಸಂಸ್ಥೆಗಳೊಂದಿಗೆ ಸಭೆ, ಚರ್ಚೆಗಳನ್ನು ನಡೆಸಲಾಗಿದೆ. ರಾತ್ರಿ ಹೊತ್ತಿನಲ್ಲಿ ದೀಪಾಲಂಕಾರ, ಬ್ಯಾರಿಕೇಡ್ ಹಾಕಲು ಹಾಗೂ ಮೆಟ್ರೊ ಸೇವೆಗೆ ಮನವಿ ಮಾಡಲಾಗಿದೆ. ಓಲಾ ಮತ್ತು ಉಬರ್‌ನ ಪ್ರತಿನಿಧಿಗಳೊಂದಿಗೆ ಪ್ರತ್ಯೇಕ ಸಭೆಗಳನ್ನು ನಡೆಸಲಾಗಿದೆ ಮತ್ತು ಪಿಕಪ್ ಸ್ಥಳಗಳನ್ನು ವ್ಯವಸ್ಥೆ ಮಾಡಲಾಗಿದೆ. ಕಾಲ್ತುಳಿತದಂತಹ ಪರಿಸ್ಥಿತಿ ಸಂಭವಿಸದಂತೆ ನೋಡಿಕೊಳ್ಳಲು ಎಂಜಿ ರಸ್ತೆ ಮತ್ತು ಬ್ರಿಗೇಡ್ ರಸ್ತೆಯಲ್ಲಿ ಏಕಮುಖ ಪಾದಚಾರಿ ರಸ್ತೆ ಇರಲಿದೆ. ಜನರು ಕಾವೇರಿ ಎಂಪೋರಿಯಂನಿಂದ ಒಪೆರಾ ಜಂಕ್ಷನ್‌ಗೆ ನಡೆಯಬಹುದು ಆದರೆ, ಎದುರುಗಡೆಯಿಂದ ಬರಲು ಅವಕಾಶವಿಲ್ಲ. ಯಾವುದೇ ರೀತಿಯ ಮುಖವಾಡ ಧರಿಸದಂತೆ ಜನರಲ್ಲಿ ಮನವಿ ಮಾಡಿರುವುದಾಗಿ ಅವರು ತಿಳಿಸಿದರು.

ಹೊಸ ವರ್ಷಾಚರಣೆಗಾಗಿ ಎಂಜಿ ರಸ್ತೆ, ಬ್ರಿಗೇಡ್ ರಸ್ತೆ, ಕೋರಮಂಗಲ, ಇಂದಿರಾನಗರ 100 ಅಡಿ ರಸ್ತೆ ಮತ್ತಿತರ ಕಡೆಗಳಲ್ಲಿ ಜನರು, ಮೋಟಾರು ವಾಹನಗಳು, ಪಾದಚಾರಿಗಳು ಹೆಚ್ಚಾಗಿ ಸೇರುವುದರಿಂದ ಜನರ ಸುರಕ್ಷತೆ ದೃಷ್ಟಿಯಿಂದ ಈ ರಸ್ತೆಗಳಲ್ಲಿ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಬ್ರಿಗೇಡ್ ರಸ್ತೆಯಲ್ಲಿ ಎಂಜಿ ರಸ್ತೆ ಜಂಕ್ಷನ್ ನಿಂದ ಓಪೆರಾ ಜಂಕ್ಷನ್ ವರೆಗೂ ಮಾತ್ರ ಜನರು ಸಂಚರಿಸಬಹುದಾಗಿದೆ. ಎದುರುಗಡೆ ದಿಕ್ಕಿನಲ್ಲಿ ಹೋಗಲು ನಿರ್ಬಂಧಿಸಲಾಗಿದೆ. ಎಂಜಿ ರಸ್ತೆಗೆ ಅವರು ವಾಪಸ್ ಬರಬೇಕಾದರೆ ರೆಸಿಡೆನ್ಸಿ ರಸ್ತೆ (ಶಂಕರನಾಗ್ ಚಿತ್ರಮಂದಿರ) ಮಾರ್ಗವಾಗಿ ಬರಬಹುದು. ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ರೆಸ್ಟ್ ಹೌಸ್ ರಸ್ತೆ, ಚರ್ಚ್ ಸ್ಟ್ರೀಟ್ ಮತ್ತು ರೆಸಿಡೆನ್ಸಿ ರಸ್ತೆ ಮತ್ತು ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ ವಾಹನ ನಿಲುಗಡೆ ಮಾಡುವ ಚಾಲಕರು/ ಮಾಲೀಕರು ಡಿಸೆಂಬರ್ 31ರಂದು ಸಂಜೆ 4 ಗಂಟೆಯೊಳಗೆ ತಮ್ಮ (2ನೇ ಪುಟ ನೋಡಿ...)

## ಒಂದನೆ ಪುಟದಿಂದ...

# ಬಿಜೆಪಿ ಅವಧಿಯ ಸಾಲದ ಹೊರೆ ಸಾರಿಗೆ ಸಂಸ್ಥೆಗಳಿಗೆ ಶಾಪವಾಗಿದೆ : ಕಾಂಗ್ರೆಸ್ ಟೀಕೆ

ಸಾರಿಗೆ ಸಂಸ್ಥೆಗಳ ಅಧೋಗತಿಗೆ ಬಿಜೆಪಿ ಕಾರಣ ಅದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಿ' ಎಂದು ಕಾಂಗ್ರೆಸ್ ಟೀಕಿಸಿದೆ. 'ಬಿಜೆಪಿ ಅಧಿಕಾರದಲ್ಲಿದ್ದಾಗ ಸಾರಿಗೆ ನೌಕರರನ್ನು ಕಣ್ಣೀರು ಹಾಕಿಸಿ ಸುಮಾರು 3 ಸಾವಿರ ನೌಕರರನ್ನು ವಜಾ, ಅಮಾನತ್ತುಗೊಳಿಸಿ ನೌಕರರ ಕುಟುಂಬಗಳನ್ನು ಬೀದಿಗೆ ತಂದದ್ದನ್ನು ಮರೆತುಬಿಟ್ಟಿರಾ?, ಇನ್ನು ಅವರು ಕೋರ್ಟ್, ಕಚೇರಿ ಅಲೆದಾಡುತ್ತಿದ್ದಾರೆ. ಈಗ ಪತ್ರಿಕಾಗೋಷ್ಠಿ ನಡೆಸುವ ಮೂಲಕ ಮೊಸಳೆ ಕಣ್ಣೀರು ಸುರಿಸುವ ನಿಮಗೆ ನಾಚಿಕೆಯಿಲ್ಲವೇ?' ಎಂದು ಕಾಂಗ್ರೆಸ್ ಪ್ರಶ್ನಿಸಿದೆ. 'ಬಿಜೆಪಿ ಸರಕಾರ ಬಿಟ್ಟು ಹೋಗಿದ್ದ 5900ಕೋಟಿ ರೂ.ನಷ್ಟದಿಂದ ಹೊಣೆಗಾರಿಕೆ ಬಾಕಿಗಳಾದ ಡೀಸೆಲ್ ಹಣ, ಸಿಬ್ಬಂದಿಗಳ ಭವಿಷ್ಯ ನಿಧಿ, ಖರೀದಿ ಸಾಮಾಗ್ರಿಗಳ ಹಣ ಸೇರಿ ಎಲ್ಲ ಬಾಕಿಗಳನ್ನು ತೀರಿಸುವ ಹೊಣೆಗಾರಿಕೆ ಹೊತ್ತುಕೊಂಡು ನಾವು ಸಂಸ್ಥೆಗಳನ್ನು ಮುನ್ನಡೆಸಬೇಕಾಗಿದೆ. ತಮ್ಮ ಪಕ್ಷ 2023ರ ಮಾರ್ಚ್‌ನಲ್ಲಿ 38 ತಿಂಗಳುಗಳ ನಂತರ ಸಂಬಳ ಏರಿಕೆ ಮಾಡಿ, ಏರಿಕೆಯಾದ ಸಂಬಳದ 38 ತಿಂಗಳ ಅರಿಯರ್ಸ್ ಸಿಬ್ಬಂದಿಗಳಿಗೆ ನೀಡದೆ, ಅದಕ್ಕೆ ಬೇಕಾದ ಅನುದಾನವನ್ನು ನೀಡದೆ, ನಿವೃತ್ತಿ ಹೊಂದಿದ 11,694 ಸಿಬ್ಬಂದಿಗಳಿಗೆ ಉಪಧನ ಮತ್ತು ಗಳಿಕೆ ರಜೆ ಬಾಕಿ ಹಣವನ್ನು ನೀಡದೆ ನಾವು ಕಳೆದ ವಾರ 224 ಕೋಟಿ ರೂ.ಪಾವತಿಸಿದ್ದೇವೆ ಎಂದು ಕಾಂಗ್ರೆಸ್ ವಿವರಿಸಿದೆ. 'ಶಕ್ತಿ' ಯೋಜನೆಗೆ ಸಂಬಂಧಪಟ್ಟಂತೆ ಸರಕಾರವು ಕೆಎಸ್ಆರ್ಟಿಸಿಗೆ– 2,481 ಕೋಟಿ ರೂ., ಬಿಎಂಟಿಸಿಗೆ– 1,126 ಕೋಟಿ ರೂ., ವಾಯುವ್ಯ ಸಾರಿಗೆಗೆ–1,613 ಕೋಟಿ ರೂ., ಕಲ್ಯಾಣ ಕರ್ನಾಟಕ ಸಾರಿಗೆಗೆ–1,321 ಕೋಟಿ ರೂ.ಅನುದಾನವು ಸೇರಿ ಒಟ್ಟು ನಾಲ್ಕೂ ಸಾರಿಗೆ ಸಂಸ್ಥೆಗಳಿಗೆ 6,543 ಕೋಟಿ ರೂ. ಅನುದಾನವನ್ನು ಸರಕಾರ 2023ರ ಜೂ ನ್‌ನಿಂದ 2024ರ ನವೆಂಬರ್ ವರೆಗೆ ಬಿಡುಗಡೆ ಮಾಡಿದೆ ಎಂದು ಕಾಂಗ್ರೆಸ್ ಅಂಕಿ–ಸಂಖ್ಯೆ ನೀಡಿದೆ. 'ಸಾರಿಗೆ ಸಂಸ್ಥೆಗಳಲ್ಲಿ ಬಿಜೆಪಿ ಬಿಟ್ಟುಹೋಗಿರುವ 5900 ಕೋಟಿ ರೂ.ಸಾಲ, ಭವಿಷ್ಯ ನಿಧಿ ಹಣ ಪಾವತಿ ಬಾಕಿ, ಗ್ರಾಜ್ಯುಟಿ ಹಣ ಬಾಕಿ, ಶೂನ್ಯ ನೇಮಕ, ಶೂನ್ಯ ಹೊಸ ಬಸ್ಸುಗಳ ಸೇರ್ಪಡೆ, ಶೂನ್ಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮತ್ತೊಂದು ಸುದ್ದಿಗೋಷ್ಠಿ ಮಾಡಿ ಚರ್ಚೆಗೆ ಆಹ್ವಾನಿಸಿದರೆ ಮುಖಾಮುಖಿಯಾಗಿ ಮಾತನಾಡೋಣ' ಎಂದು ಕಾಂಗ್ರೆಸ್, ಬಿಜೆಪಿಗೆ ಸವಾಲು ಹಾಕಿದೆ.

# ಮನಮೋಹನ್ ಸಿಂಗ್ ಅವರ ಸ್ಮಾರಕಕ್ಕೆ ಭೂಮಿ ನೀಡಲು ಕೇಂದ್ರ ಒಪ್ಪಿಗೆ

ಹಂಚಿಕೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಕಾಂಗ್ರೆಸ್ ಅಧ್ಯಕ್ಷರಿಂದ ಮನವಿ ಮಾಡಿಕೊಂಡ ಸಂಬಂಧ ಅಮಿತ್ ಶಾ ಅವರು ಮಲ್ಲಿಕಾರ್ಜುನ ಖರ್ಗೆಯವರಿಗೆ ಮತ್ತು ಡಾ.ಮನಮೋಹನ ಸಿಂಗ್ ಅವರ ಕುಟುಂಬಕ್ಕೆ ಮಾಹಿತಿ ನೀಡಿ, ಸಾರಕಕ್ಕೆ ಜಾಗ ಹಂಚಿಕೆ ಮಾಡುವುದಾಗಿ ತಿಳಿಸಿದ್ದಾರೆ.

ಈ ಮಧ್ಯೆ ಟ್ರಸ್ಟ್ ರಚನೆ ಮತ್ತು ಜಾಗ ಹಂಚಿಕೆಯಾಗಬೇಕಿರುವುದರಿಂದ ಅಂತ್ಯಸಂಸ್ಕಾರ ಮತ್ತು ಇತರ ವಿಧಿವಿಧಾನಗಳನ್ನು ನಡೆಸಬಹುದು ಎಂದು ಪ್ರಕಟಣೆ ಹೇಳಿದೆ.

ಇದಕ್ಕೂ ಮುನ್ನ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿ, ನಿಗಮ್ ಬೋಧ್ ನಲ್ಲಿ ಡಾ.ಸಿಂಗ್ ಅವರ ಅಂತ್ಯಸಂಸ್ಕಾರ ನಡೆಸಲು ನಿರ್ಧರಿಸಿರುವ ಕೇಂದ್ರದ ಕ್ರಮ, ಮೊದಲ ಪ್ರಧಾನಿಗೆ ಮಾಡಿದ ಉದ್ದೇಶಪೂರ್ವಕ ಅವಮಾನ ಎಂದು ಹೇಳಿದ್ದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಪ್ರಧಾನಿಗೆ ಪತ್ರ ಬರೆದು, ಡಾ.ಸಿಂಗ್ ಗೌರವಾರ್ಥ ಸಾರಕ ನಿರ್ಮಿಸುವ ಸ್ಥಳದಲ್ಲಿ ಅಂತ್ಯಸಂಸ್ಕಾರ ನಡೆಯಬೇಕು ಎಂದು ಕೋರಿದ್ದಾಗಿ ರಮೇಶ ಎಕ್ಸ್‌ಪೋಸ್ಟ್ ನಲ್ಲಿ ವಿವರಿಸಿದ್ದರು.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ನೇತೃತ್ವ ವಹಿಸಿ, ಆರ್ಥಿಕ ಸುಧಾರಣೆಗಳ ಹರಿಕಾರ ಎಂದು ಗುರುತಿಸಿಕೊಂಡಿರುವ ಸಿಂಗ್ ಅವರು ಗುರುವಾರ 92ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. 2004ರಿಂದ 2014ರ ವರೆಗೆ 10 ವರ್ಷಗಳ ಕಾಲ ಭಾರತದ ಪ್ರಧಾನಿಯಾಗಿ ಡಾ. ಮನಮೋಹನ್ ಸಿಂಗ್ ಅವರು ಗಣನೀಯ ಸೇವೆ ಸಲ್ಲಿಸಿದ್ದರು.

ಅಂತ್ಯಕ್ರಿಯೆಯನ್ನು ಪ್ರತ್ಯೇಕ ಸಾರಕ ಸ್ಥಳದಲ್ಲಿ ನಡೆಸಬೇಕೆಂಬ ಕಾಂಗ್ರೆಸ್ನ ಮನವಿಯನ್ನು ಕೇಂದ್ರ ಸರ್ಕಾರ ಆರಂಭದಲ್ಲಿ ನಿರಾಕರಿಸಿತ್ತು. ಕೇಂದ್ರದ ನಿರ್ಧಾರಕ್ಕೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಭಾರತದ ಮೊದಲ ಸಿಖ್ ಪ್ರಧಾನಿಗೆ ಉದ್ದೇಶಪೂರ್ವಕ ಅವಮಾನ ಎಂದು ಟ್ವಿಟ್ ಮೂಲಕ ಅಸಮಾಧಾನ ವ್ಯಕ್ತಪಡಿಸಿದರು.

## ಬೆಂಗಳೂರು: ಹೊಸ ವರ್ಷ ಸಂಭ್ರಮಾಚರಣೆ ಹಿನ್ನೆಲೆ; ಎಂಜಿ ರೋಡ್ ಮತ್ತಿತರ ಕಡೆಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್

ವಾಹನಗಳನ್ನು ತೆರವುಗೊಳಿಸಬೇಕು.

ಟ್ರಾಫಿಕ್ ಪೊಲೀಸರ ಪ್ರಕಾರ, ಅಪಘಾತಗಳು ಮತ್ತಿತರ ಅಹಿತಕರ ಘಟನೆಯಾಗದಂತೆ ತಡೆಗಟ್ಟಲು ಡಿಸೆಂಬರ್ 31 ರಂದು ರಾತ್ರಿ 11 ರಿಂದ ಜನವರಿ 1, 2025 ರ ಬೆಳಿಗ್ಗೆ 6 ರವರೆಗೆ ನಗರದ ಎಲ್ಲಾ ಫ್ಲೈಓವರ್‌ಗಳಲ್ಲಿ (ಕೆಐಎ ವಿಮಾನ ನಿಲ್ದಾಣಕ್ಕೆ ಹೋಗುವ ಎಲಿವೇಟೆಡ್ ಎಕ್ಸ್‌ಪ್ರೆಸ್‌ವೇ ಹೊರತುಪಡಿಸಿ) ಎಲ್ಲಾ ರೀತಿಯ ವಾಹನಗಳನ್ನು ನಿಷೇಧಿಸಲಾಗಿದೆ. ಏಐಎಂ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಎಲಿವೇಟೆಡ್ ಎಕ್ಸ್‌ಪ್ರೆಸ್‌ವೇಯಲ್ಲಿ, ದ್ವಿಚಕ್ರ ವಾಹನಗಳ ಸಂಚಾರವನ್ನು ಡಿಸೆಂಬರ್ 31, 2024ರ ರಾತ್ರಿ 10 ಗಂಟೆಯಿಂದ ಜನವರಿ 1, 2025ರ ಬೆಳಗ್ಗೆ 6 ಗಂಟೆಯವರೆಗೂ ನಿರ್ಬಂಧಿಸಲಾಗಿದೆ.

ರಾತ್ರಿಯಿಡೀ ಮದ್ಯ ಸೇವಿಸಿ ವಾಹನ ಚಲಾಯಿಸುವ, ಮಾದಕ ದ್ರವ್ಯ ಸೇವಿಸಿದ ಪ್ರಯಾಣಿಕರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲಾಗುವುದು ಮತ್ತು ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ನೋಡಿಕೊಳ್ಳಲು ನಗರದ ವಿವಿಧ ಸ್ಥಳಗಳಲ್ಲಿ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸುವಂತಹ ಎಲ್ಲಾ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

2025 ಹೊಸ ವರ್ಷಾಚರಣೆ: ಓಚಿಟಟಚಿ ಒಜಣಡಿಂ ಸೇವೆ ಅವಧಿ ವಿಸ್ತರಣೆ

ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡುವ, ವೀಲಿಂಗ್/ಡ್ರ್ಯಾಗ್ ರೇಸಿಂಗ್‌ನಲ್ಲಿ ಭಾಗವಹಿಸಿ ಇತರರಿಗೆ ನಾನುಕೂಲತೆ ಮತ್ತು ತೊಂದರೆ ಉಂಟುಮಾಡುವ ದ್ವಿಚಕ್ರವಾಹನ ಸವಾರರ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಪೊಲೀಸರು ಎಚ್ಚರಿಕೆ ನೀಡಿದ್ದಾರೆ. ಅಂತಹ ಘಟನೆಗಳು ಕಂಡುಬಂದಲ್ಲಿ, ಪೊಲೀಸ್ ಸಹಾಯವಾಣಿ ಸಂಖ್ಯೆ: 112 ಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

ನಿಲುಗಡೆ ನಿಷೇಧಿತ ಪ್ರದೇಶಗಳಲ್ಲಿ ನಿಲುಗಡೆ ಮಾಡಿದ ವಾಹನಗಳನ್ನು ಮತ್ತು ಸಂಚಾರಕ್ಕೆ ಅಡ್ಡಿಯುಂಟುಮಾಡುವ ವಾಹನಗಳನ್ನು ತೆಗೆದುಕೊಂಡು ಹೋಗಲಾಗುವುದು, ಹೊಸ ವರ್ಷಾಚರಣೆಗೆ ಸಾರ್ವಜನಿಕ ಸಾರಿಗೆ ಬಳಸುವಂತೆ ಪೊಲೀಸರು ಸೂಚಿಸಿದ್ದಾರೆ.

# ಎ.ಎನ್.ಸಿ.ಸಿ.ಮೈದಾನದಲ್ಲಿ ಪ್ರತೀಕ್ ಲೆವನ್ ಸಿಂಧನೂರ ತಂಡಕ್ಕೆ ಭರ್ಜರಿ ಜಯ

ಪ್ರಾಂಚೈಸಿ ಕ್ಯಾಪ್ಟನ್ ಗೆ ರನ್ನರ್ ಟ್ರೋಫಿ, ಹಾಗೂ ನಗದನ್ನು ಹಣ ವಿತರಿಸುವ ಮೂಲಕ ಉಭಯ ತಂಡಗಳಿಗೆ ಹಾರೈಸಿದರು.

ಇದೇ ವೇಳೆ ಟೂರ್ನಿಯ 3 4ನೇ ಸ್ಥಾನ ಗಳಿಸಿದ ತಂಡಗಳ ಪ್ರಾಂಚೈಸಿ ಗಳಿಗೆ ಟ್ರೋಫಿ ಹಾಗುವ ನಗದು ಹಣ ನೀಡಲಾಯಿತು. ಪಂದ್ಯ ಶೇಷ್ಠ ಸರಣಿ ಶೇಷ್ಠ, ಉತ್ತಮ ಬೌಲರ್, ಬ್ಯಾಟ್ಸಮನ್, ಬೆಸ್ಟ್ ಫಿಲ್ಡರ್, ಹ್ಯಾಟ್ರಿಕ್ ವಿಕೆಟ್ ಸೇರಿ ಉತ್ತಮ ತಂಡಕ್ಕೆ ಆಯೋಜಕರು ಪ್ರಶಸ್ತಿ, ನಗದು ಬಹುಮಾನ ವಿತರಿಸಿದರು.

ಪಂದ್ಯದ ಸಾರಾಂಶ : ಮೊದಲು ಟಾಸ್ ಸೋತು ಬ್ಯಾಟಿಂಗ್ ಇಳಿದ ಸಿಂಧನೂರು ತಂಡ ನಿಗದಿತ 16 ಓವರ್ನ ನಲ್ಲಿ 6 ವಿಕೆಟ್ ಕಳೆದುಕೊಂಡು 135 ರನ್ ಪ್ರೇರಿಸಿತು. ನಂತರ ಬ್ಯಾಟಿಂಗ್ ಇಳಿದ ಹೊಸಪೇಟ್ ತಂಡ 16 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 117 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲೊಪ್ಪಿಕೊಂಡು ರನ್ನರ್ ಟ್ರೋಫಿಗೆ ತೃಪ್ತಿಪಟ್ಟಿತು. ಈ ಮೂಲಕ " ಸತತ ಎರಡನೇ ಬಾರಿಯೂ ಸಿಂಧನೂರ ತಂಡ ಆರ್‌ಟಿಜೆ ಚಾಲೆಂ ಜರ್ಸ್ ವಿನ್ನರ್ಸ್ ಟ್ರೋಫಿ ಗೆದ್ದು ಕೊಂಡಂತಾಗಿದೆ.

ಗ್ರಾಮೀಣ ಭಾಗದಲ್ಲಿ ನಾರಾಯಣಪುರದ ಅಭಿಮಾನಿಗಳು ಯಶಸ್ವಿಯಾಗಿ ಆರ್‌ಟಿಜೆ ಕ್ರಿಕೆಟ್ ಟೂರ್ನಿ ಆಯೋಜಿಸುತ್ತಿರುವುದು ಶ್ಲಾಘನೀಯ. ಈ ಟೂರ್ನಿಯಲ್ಲಿ ದೇಶದ ವಿವಿಧ ರಾಜ್ಯಗಳ ರಾಷ್ಟ್ರಮಟ್ಟದಲ್ಲಿ ಮಿಂಚುವ ಸ್ಟಾರ್ ಕ್ರಿಕೇಟ್ ಆಟಗಾರರು ಪಾಲ್ಗೊಂಡಿರುವುದು ಹೆಮ್ಮೆಯ ವಿಷಯ ಎಂದು ಮಾಜಿ ಸಚಿವರು ನರಸಿಂಹನಾಯಕ (ರಾಜುಗೌಡ) ಮಾತನಾದಿದರು ಜೊತ್ತೆಗೆ ಶ್ರೀ ನರಸಿಂಹ ನಾಯಕ ರಾಜುಗೌಡ ಅಭಿಮಾನಿಗಳ ಸಂಘದಿಂದ 2025ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮುಂಖಂಡರಾದ ರಾಜಾ ಹನುಮಂತನಾಯಕ, ಬಬ್ಲು ಗೌಡ, ರಾಜಾ ಕುಶಾಲನಾಯಕ ಜಹಾಗೀರದಾರ, ಸಿದ್ದನಗೌಡ ಕರಿಭಾವಿ, ಡಾ.ಬಿ.ಎಂ. ಅಳ್ಳಿಕೋಟಿ, ಬಿ. ಎನ್.ಪೊಲೀಸ್ ಪಾಟೀಲ್, ಮಲ್ಲು ನವಲಗುಡ್ಡ, ಸಂಗನಬಸ್ಸು ಚಟ್ಟೇರ್, ಆಂಜನೇಯ ದೊರೆ, ರಮೇಶ ಕೊಳುರ್ , ಶಿವು ಬಿರಾದಾರ, ರಮೇಶ ಗೌಡರ, ಯಂಕಪ್ಪ ರೋಡಲಬಂಡಾ, ಮುತ್ತು ಕಬಡರ, ಗೌಡಪ್ಪ, ಮಂಜು ಹಾದಿಮನಿ, ನರಸಪ್ಪ, ಲಕ್ಷ್ಮಣ ನಾಯಕ, ಗೌಡಪ್ಪ ಗೌಡ, , ದೇಗಲಮಡ್ಡಿ, ಜಟ್ಟೆಪ್ಪ ಗೊಳಸಂಗಿ ಸೇರಿ ವಿವಿಧ ತಂಡಗಳ ಕ್ರಿಕೆಟ್ ಆಟಗಾರರು, ಕ್ರೀಡಾಭಿಮಾನಿಗಳು, ರಾಜುಗೌಡ ಅಭಿಮಾನಿಗಳು ಇದ್ದರು.

ಇದೇ ಸಂದರ್ಭದಲ್ಲಿ ಕಲಾವಿದ ಕರಿಬಸವ ಕನ್ನಡದ ಹಿಟ್ ಚಲನಚಿತ್ರ ಗೀತೆಗಳನ್ನು ಹಾಡಿ ನೆರೆದಿದ್ದ ಕ್ರೀಡಾಭಿಮಾನಿಗಳನ್ನು ರಂಜಿಸಿದರು.

## ಒಂದನೆ ಪುಟದಿಂದ...

### ಬೆಂಗಳೂರು: ಖಾಸಗಿ ಕಂಪನಿಯ ಡೇಟಾ ಕದ್ದು

# ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ, ನಾಲ್ವರ ಬಂಧನ

12,51,13,000 ಹಣವನ್ನು 17 ವಿವಿಧ ಬ್ಯಾಂಕ್ ಖಾತೆಗಳಿಗೆ ಹಣವನ್ನು ವರ್ಗಾವಣೆ ಮಾಡಿಕೊಂಡು ಮೋಸ ಮಾಡಿರುವ ಬಗ್ಗೆ ಕಂಪನಿಯ ನಿರ್ದೇಶಕರು ದೂರು ಸಲ್ಲಿಸಿದ್ದರು.

ಈ ಸಂಬಂಧ ಪ್ರಕರಣ ದಾಖಲಿಸಿ ವಿವಿಧ ಆಯಾಮಗಳಲ್ಲಿ ತನಿಖೆಯನ್ನು ಕೈಗೊಂಡ ಪೊಲೀಸರು, ಗುಜರಾತ್ ರಾಜ್ಯದ ಸೂರತ್, ನವಸಾರಿ, ರಾಜ್‌ಕೋಟ್‌ನಲ್ಲಿ ಒಟ್ಟು ನಾಲ್ವರು ಆರೋಪಿಗಳನ್ನು ಕಳೆದ ಡಿ.20 ರಂದು ಬಂಧಿಸಿ ವಿಚಾರಣೆ ನಡೆಸಿದಾಗ ಪ್ರಕರಣದಲ್ಲಿ ಸೈಬರ್ ವಂಚನೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ.

ಈ ಪ್ರಕರಣದ ಪ್ರಮುಖ ಆರೋಪಿ ಗುಜರಾತ್ ರಾಜ್ಯದ ಅಕ್ಸಿಸ್ ಬ್ಯಾಂಕ್‌ನ ಕಾರ್ಪೋರೇಟ್ ವಿಭಾಗದ ಮ್ಯಾನೇಜರ್ ಆಗಿದ್ದು, ದೂರುದಾರ ಕಂಪನಿಯ ಖಾತೆಗಳ ಡೇಟಾವನ್ನು ಕಳವು ಮಾಡಿ, ಇತರೆ ಆರೋಪಿಗಳೊಂದಿಗೆ ಸೇರಿಕೊಂಡು ನಕಲಿ ಕಾರ್ಪೋರೇಟ್ ಇಂಟರ್ನೆಟ್ ಬ್ಯಾಂಕಿಂಗ್ ಫಾರ್ಮ್ ಹಾಗೂ ಕಂಪನಿಯ ಬೋರ್ಡ್ ರೆಜ್ಯೂಲ್ಯೂಶನ್ ದಾಖಲೆಗಳನ್ನು ಸೃಷ್ಟಿಸಿ, ಗುಜರಾತ್ ರಾಜ್ಯದ ಬರೂಚ್ ಜಿಲ್ಲೆಯ ಅಂಕಲೇಶ್ವರದ ಅಕ್ಸಿಸ್ ಬ್ಯಾಂಕ್‌ನಲ್ಲಿ ಸಲ್ಲಿಸಿ, ಅಲ್ಲಿಂದ ಪಿರ್ಯಾದುದಾರರ ಕಂಪನಿಯ ನೋಡಲ್ ಬ್ಯಾಂಕ್ ಖಾತೆಗಳ ಇಂಟರ್ನೆಟ್ ಬ್ಯಾಂಕಿಂಗ್‌ನ್ನು ವಶಕ್ಕೆ ತೆಗೆದುಕೊಂಡು ಆ ಮೂಲಕ ಗುಜರಾತ್ ಮತ್ತು ರಾಜಸ್ತಾನ ರಾಜ್ಯದ 17 ಬ್ಯಾಂಕ್ ಖಾತೆಗಳಿಗೆ ಒಟ್ಟು ರೂ. 12. 50 ಕೋಟಿ ಹಣವನ್ನು ವರ್ಗಾಯಿಸಿಕೊಂಡು ಮೋಸ ಮಾಡಿರುವುದನ್ನು ತನಿಖೆಯಿಂದ ಪತ್ತೆ ಹಚ್ಚಿದ್ದಾರೆ.

ಸಿಇಎನ್ ಕ್ರೈಮ್ ಪೊಲೀಸರು ವಶಕ್ಕೆ ಪಡೆದ ಬೃಹತ್ ಮೊತ್ತದ ನಗದು

ಸಿಂಡಿಕೇಟ್ ಬ್ಯಾಂಕ್ ವಂಚನೆ ಪ್ರಕರಣ: ಇಬ್ಬರು ಮಾಜಿ ಮ್ಯಾನೇಜರ್ ಸೇರಿ ಮೂವರಿಗೆ ಜೈಲು ಶಿಕ್ಷೆ!

ಆರೋಪಿತರನ್ನು ಸುದೀರ್ಘ ವಿಚಾರಣೆ ನಡೆಸಿ 2 ಮೊಬೈಲ್ ಫೋನ್, ನಕಲಿ ಸಿಐಬಿ ಫಾರಂಗಳು ಹಾಗೂ 1,83,48,500 ನಗದನ್ನು ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ನಗರ ಪೊಲೀಸ್ ಆಯುಕ್ತ ದಯಾನಂದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಕಾರ್ಯಾಚರಣೆಯನ್ನು ಪೂರ್ವ ವಿಭಾಗದ ಉಪ ಪೊಲೀಸ್ ಆಯುಕ್ತ ಡಿ.ದೇವರಾಜ್, ಸಿ.ಇ.ಎನ್ ಪೊಲೀಸ್ ಇನ್ಸ್‌ಪೆಕ್ಟರ್ ಉಮೇಶ್‌ಕುಮಾರ್ ಮತ್ತವರ ಸಿಬ್ಬಂದಿ ಯಶಸ್ವಿಯಾಗಿ ಕೈಗೊಂಡಿದ್ದಾರೆ ಎಂದು ಹೇಳಿದರು.

## ಸಾರ್ವಜನಿಕರೇ ಗಮನಿಸಿ, ಸೈಬರ್ ವಂಚನೆಗೊಳಗಾದರೆ ತಕ್ಷಣ 1039ಗೆ ಕರೆ ಮಾಡಿ

ನೀವು ಒಂದು ವೇಳೆ ಅಂತಹ ಕರೆಯನ್ನು ಸ್ವಿಕರಿಸಿ ವಂಚಕರ ಅಕೌಂಟ್ಗೆ ಹಣ ಏನಾದರೂ ಹಾಕಿದ್ದರೆ ಕೂಡಲೇ 1039 ಗೆ ಕರೆ ನೀಡಿ ಮಾಹಿತಿ ನೀಡಿದರೆ ಆ ಖಾತೆಯನ್ನು ಸ್ಥಗಿತಗೊಳಿಸಲಾಗುತ್ತದೆ ಎಂದರು.

ಸೈಬರ್ ಕ್ರೈಂನ್ನು ವರದಿ ಮಾಡುವ ಏಕೈಕ ರಾಷ್ಟ್ರೀಯ ಸಹಾಯವಾಣಿ ಸಂಖ್ಯೆ : 1930 ಆಗಿರುತ್ತದೆ. ಸಾರ್ವಜನಿಕರು ಯಾವುದೇ ಸೈಬರ್ ಕ್ರೈಂ ವರದಿಗಾಗಿ ಇದೇ ನಂಬರನ್ನು ಸಂಪರ್ಕಿಸಲು ಆಯುಕ್ತರು ಮನವಿ ಮಾಡಿದ್ದಾರೆ.

ಯಾವುದೇ ಪೊಲೀಸರಾಗಲಿ, ಸಿಬಿಐ, ಸಿಐಡಿ, ಇ.ಡಿ. ಅಧಿಕಾರಿಗಳು ನಿಮಗೆ ದೂರವಾಣಿ ಕರೆ ಮಾಡಿ ಡಿಜಿಟಲ್ ಅರೆಸ್ಟ್ ಮಾಡಿದ್ದೇವೆಂದು ಹೇಳುವುದಿಲ್ಲ ಎಂದು ಈಗಾಗಲೇ ಹಲವು ಬಾರಿ ಸ್ಪಷ್ಟಪಡಿಸಿದ್ದರೂ ಪ್ರಜ್ಞಾವಂತರೇ ಸೈಬರ್ ಜಾಲಕ್ಕೆ ಬಿದ್ದು ಕೋಟ್ಯಂತರ ರೂ. ಹಣ ಕಳೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಸಾರ್ವಜನಿಕರು ಜಾಗೃತರಾಗಬೇಕು ಎಂದು ತಿಳಿಸಿದರು.

ಯಾವುದೇ ಅಪರಿಚಿತ ವ್ಯಕ್ತಿ ಕರೆ ಮಾಡಿ ನಿಮ ಖಾಸಗಿ ಮಾಹಿತಿಯನ್ನು ಕೇಳಿದರೆ ಹಂಚಿಕೊಳ್ಳಬೇಡಿ, ಮೋಸದ ಜಾಲಕ್ಕೆ ಬೀಳಿಸಿಕೊಳ್ಳಲು ಯತ್ನಿಸಿದಾಗ ತಕ್ಷಣ ನೀವು ಆ ಬಗ್ಗೆ ಎಚ್ಚೆತ್ತುಕೊಂಡು ಸ್ಥಳೀಯ ಪೊಲೀಸರಿಗೆ ತಿಳಿಸಬೇಕು. ಸೈಬರ್ ವಂಚಕರ ಜಾಲಕ್ಕೆ ಒಳಗಾಗಬೇಡಿ ಎಂದು ಸಲಹೆ ನೀಡಿದರು.

ಒಂದು ವೇಳೆ ನಿಮ ವಿರುದ್ಧ ದೂರು ಇದ್ದರೆ ನಿಮಗೆ ಪೊಲೀಸರು ನೋಟೀಸ್ ಕೊಟ್ಟು, ಠಾಣೆಗೆ ಕರೆಸಿಕೊಂಡು, ವಿಚಾರಣೆ ಮಾಡುತ್ತೇವೆಯೇ ಹೊರತು ಡಿಜಿಟಲ್ ಅರೆಸ್ಟ್, ಹೋಂ ಅರೆಸ್ಟ್ ಅಂತಹ ಕಾನೂನು ನಮಲ್ಲಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ನಗರದಲ್ಲಿ ಒಟ್ಟು 9 ಸೈಬರ್ ಠಾಣೆಗಳಿವೆ. ಈ ಠಾಣೆಗಾಗಲೀ ಅಥವಾ ಸ್ಥಳೀಯ ಪೊಲೀಸ್ ಠಾಣೆಗಾಗಲಿ ಸೈಬರ್ ವಂಚನೆ ಬಗ್ಗೆ ನೀವು ತಕ್ಷಣ ತಿಳಿಸಿದರೆ ತನಿಖೆಗೆ ಸಹಕಾರವಾಗುತ್ತದೆ. ವೈಯಕ್ತಿಕ ಬ್ಯಾಂಕ್ ವಿವರಗಳನ್ನು ಯಾರಿಗೂ ಶೇರ್ ಮಾಡಬೇಡಿ ಎಂದು ಆಯುಕ್ತರು ಸಲಹೆ ಮಾಡಿದ್ದಾರೆ.

# ಚಿಟಗುಪ್ಪ ಪಿಕೆಪಿಎಸ್ ಚುನಾವಣೆಗೆ 46 ಜನ ನಾಮಪಚಿತ್ರ ಸಲ್ಲಿಕೆ

(ರಾಜಕುಮಾರ ಆರ್.ಹಡಪದ)

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ಇಲ್ಲಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆ ಅಂಗವಾಗಿ ಕೊನೆಯ ದಿನ ಶನಿವಾರ ಒಟ್ಟು12 ಸ್ಥಾನಗಳಿಗೆ 46 ನಾಮಪತ್ರ ಅರ್ಜಿ ಸಲ್ಲಿಕೆಯಾಗಿವೆ, ಸಾಮಾನ್ಯ(20) ಪರಿಶಿಷ್ಟ ಜಾತಿ(07) ಪರಿಶಿಷ್ಟ ಪಂಗಡ(03) ಹಿಂದುಳಿದ ವರ್ಗ(ಪ್ರವರ್ಗ ಎ)(05) ಹಿಂದುಳಿದ ವರ್ಗ(ಪ್ರವರ್ಗ ಬಿ) (02) ಮಹಿಳಾ (05) ಸಾಲಗಾರರಲ್ಲದ ಮತ ಕ್ಷೇತ್ರ ಸಾಮಾನ್ಯ(04) ಒಟ್ಟು 12 ಸ್ಥಾನಗಳ ಚುನಾವಣೆ ಪೈಕಿ 46 ನಾಮಪತ್ರ ಅರ್ಜಿ ಸಲ್ಲಿಕೆಯಾಗಿವೆ ಎಂದು ಚುನಾವಣಾಧಿಕಾರಿ ಕೆರೆಸಿದ್ದ ಮೋರಟಗಿ ತಿಳಿಸಿದ್ದಾರೆ.

### ಭಾರತದ ಮಾಜಿ ಪ್ರಧಾನಿ, ಅರ್ಥಶಾಸ್ತ್ರಜ್ಞ ಡಾ.ಮನಮೋಹನ್ ಸಿಂಗ್ ನಿಧನಕ್ಕೆ ಹಲವಾರು ಗಣ್ಯರಿಂದ ಸಂತಾಪ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಡಿಸೆಂಬರ್ 28–ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು ಆರ್ಥಿಕ ತಜ್ಞರಾಗಿ, ಪ್ರಧಾನ ಮಂತ್ರಿಯಾಗಿ ಹತ್ತು ವರ್ಷಗಳ ಕಾಲ ದೇಶವನ್ನು ಮುನ್ನಡೆಸಿದ್ದದರು. ವಿಶ್ವದ ಅತ್ಯುತ್ತಮ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾದ ಡಾ. ಮನಮೋಹನ್ ಸಿಂಗ್ ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿ, ಹಣಕಾಸು ಇಲಾಖೆ ಕಾರ್ಯದರ್ಶಿಯಾಗಿ, ಪ್ರಧಾನಿ ಮಂತ್ರಿಯ ಸಲಹೆಗಾರರಾಗಿ ಕಾರ್ಯನಿರ್ವಹಿಸುವುದರ ಮೂಲಕ ಭಾರತದ ಆರ್ಥಿಕ ವ್ಯವಸ್ಥೆಯನ್ನು ಸದೃಢಗೊಳಿಸಿದವರು. ಶ್ರೀಯುತರ ನಿಧನದಿಂದಾಗಿ ದೇಶಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಅರಣ್ಯ ಸಚಿವರಾದ ಈಶ್ವರ್ ಖಂಡ್ರೆ, ಹಿರಿಯ ಕಾಂಗ್ರೆಸ್ ನಾಯಕರುಗಳಾದ ಸಚಿನ್ ಪೈಲೆಟ್, ಸುಶೀಲ್ ಕುಮಾರ್ ಶಿಂಧೆ, ವಿ. ನಾರಯಣಸ್ವಾಮಿ, ಭೂಪೇಂದ್ರ ಸಿಂಗ್ ಹೂಡಾ, ಸೇರಿದಂತೆ ಹಲವಾರು ಗಣ್ಯರುಗಳು, ಸಚಿವರು ಮತ್ತು ಶಾಸಕರುಗಳು ಕಂಬನಿ ಮಿಡಿದು ಸಂತಾಪ ವ್ಯಕ್ತಪಡಿಸಿದ್ದಾರೆ.

# ಪಿಕೆಪಿಎಸ್ ಚುನಾವಣೆಗೆ 28 ಜನ ನಾಮಪತ್ರ ಸಲ್ಲಿಕೆ




ಮಲ್ಲಮ್ಮ ನುಡಿ ವಾರ್ತೆ

(ರಾಜಕುಮಾರ ಆರ್.ಹಡಪದ)

ಚಿಟಗುಪ್ಪ:– ತಾಲೂಕಿನ ಬೆಳಕೇರಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆ ಅಂಗವಾಗಿ ಕೊನೆಯ ದಿನ ಶನಿವಾರ ಒಟ್ಟು12 ಸ್ಥಾನಗಳಿಗೆ 28 ನಾಮಪತ್ರ ಅರ್ಜಿ ಸಲ್ಲಿಕೆಯಾಗಿವೆ, ಸಾಮಾನ್ಯ(8) ಪರಿಶಿಷ್ಟ ಜಾತಿ(02) ಪರಿಶಿಷ್ಟ ಪಂಗಡ(06) ಹಿಂದುಳಿದ ವರ್ಗ(ಪ್ರವರ್ಗ ಎ)(03) ಹಿಂದುಳಿದ ವರ್ಗ(ಪ್ರವರ್ಗ ಬಿ) (02) ಮಹಿಳಾ (05) ಸಾಲಗಾರರಲ್ಲದ ಮತ ಕ್ಷೇತ್ರ ಸಾಮಾನ್ಯ(02) ಒಟ್ಟು12 ಸ್ಥಾನಗಳ ಚುನಾವಣೆ ಪೈಕಿ 28 ನಾಮಪತ್ರ ಅರ್ಜಿ ಸಲ್ಲಿಕೆಯಾಗಿವೆ ಎಂದು ಚುನಾವಣಾಧಿಕಾರಿ ಸುದರ್ಶನ್ ವಿಶ್ವಕರ್ಮ ತಿಳಿಸಿದ್ದಾರೆ.

# ಆರ್ಥಿಕ ಸ್ವಾವಲಂಬನೆಗೆ ಸಹಕಾರ ಸಂಘ ಅಗತ್ಯ: ಪ್ರಭುದೇವ ಮಹಾಸ್ವಾಮಿಗಳು



(ರಾಜಕುಮಾರ ಆರ್.ಹಡಪದ)

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ಮಾನವನ ಸರ್ವಾಂಗೀಣ ಬೆಳವಣಿಗೆ ಹಾಗೂ ಆರ್ಥಿಕ ಸುಭದ್ರತೆಗೆ ಸಹಕಾರ ಸಂಘಗಳು ಹೆಚ್ಚು ಸಹಕಾರಿಯಾಗಿವೆ ಎಂದು ಲಿಂಗಾಯತ ಮಹಾಮಠ ಗೋರ್ಟ್ (ಬಿ) ಮಹಾಸ್ವಾಮಿಜೀ ಪ್ರಭುದೇವ ಹೇಳಿದರು. ಪಟ್ಟಣದ ಭವಾನಿ ದೇವಸ್ಥಾನ ಮುಖ್ಯ ರಸ್ತೆ ಸಂಗಮೇಶ್ವರ ಡಿಪಾರ್ಟಮೆಂಟಲ್ ಸ್ಟೋರ ಹತ್ತಿರ ಶನಿವಾರ ಬೀರೇಶ್ವರ ಕೋ– ಆಪ ಕ್ರೆಡಿಟ್ ಸೊಸೈಟಿ ಶಾಖೆಯನ್ನು ಉದ್ಘಾಟಿಸಿ, ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಮನುಷ್ಯ ಸಂಘ ಜೀವಿ ಹಾಗೂ ಸಮಾಜ ಜೀವಿ. ಸೌಹಾರ್ದದಿಂದ ಕೂಡಿದ ಸಂಬಂಧಗಳೇ ಆತನಿಗೆ ಜೀವನಾಡಿಯಾಗಿವೆ. ಪರಸ್ಪರರು ನಂಬಿಕೆ, ವಿಶ್ವಾಸಗಳಿಂದ ವ್ಯವಹಾರ ಮಾಡುವ ಮನೋಭಾವನೆಯನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು. ತಮ್ಮ ಆರ್ಥಿಕ ಸಮಸ್ಯೆ ನಿವಾರಿಸಿಕೊಳ್ಳುವ ಜೊತೆಗೆ ಸಂಘದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದ ಮುಖ್ಯ ಅಥಿತಿ ವಹಿಸಿ ಮಾತನಾಡಿದ ಡಿಸಿಸಿ ಬ್ಯಾಂಕ್ ಜಿಲ್ಲಾ ಉಪಾಧ್ಯಕ್ಷ ಅಭಿಷೇಕ ಆರ್. ಪಾಟೀಲ್, ಬೀರೇಶ್ವರ ಕೋ–ಆಪ ಕ್ರೆಡಿ–ಟ್ ಸೋಸೈಟಿಯು ಚಿಟಗುಪ್ಪ ಸೇರಿದಂತೆ 224 ಶಾಖೆಗಳು ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿ ಜನಸೇವೆಯಲ್ಲಿ ತೊಡಗಿವೆ. ಈ ಸೋಸೈಯಟಿಯಲ್ಲಿ ಈಗಾಗಲೇ 3.93 ಲಕ್ಷ ಸದಸ್ಯರಿದ್ದಾರೆ. 3868 ಕೋಟಿಗೂ ಹೆಚ್ಚು ಠೇವಣಿ ಸಂಗ್ರಹವಾಗಿದೆ. 3005 ಕೋಟಿ ರೂ ಸಾಲವನ್ನು ನೀಡಿದೆ. ಈ ಸೋಸೈಯಟಿ ಜನಸ್ನೇಹಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿರುವ ಹಿನ್ನಲೆಯಲ್ಲಿ ತ್ವರಿತ ಗತಿಯಲ್ಲಿ ಬೆಳೆಯುತ್ತಿದೆ ಎಂದರು. ಕೆಎಂಎಫ್ ನಿರ್ದೇಶಕ ರೇವಣ್ಣಸಿದ್ದಪ್ಪ ಪಾಟೀಲ್ ಮಾತನಾಡಿ, ಮುಂಬರುವ ದಿನಗಳಲ್ಲಿ ಶ್ರೀ ಬೀರೇಶ್ವರ ಕೋ–ಅಪ್ ಕೆಡಿಟ್ ಸೂಸೈಟಿ ಪಟ್ಟಣ್ಣ ಅಲ್ಲದೆ ಬೀದರ್ ಜಿಲ್ಲೆಯಲ್ಲಿ ಹೆಮ್ಮರವಾಗಿ ಬೆಳೆಯಲ್ಲಿ ಎಂದರು. ಶಾಖೆಯ ಉಪ ಪ್ರಧಾನ ವ್ಯವಸ್ಥಾಪಕ ಎಂ.ಕೆ. ಮಂಗಾವತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷ ಮುಜಾಫರ್ ಪಟೇಲ್, ಬಿಎಸೆಸ್ಕ ನಿರ್ದೇಶಕ ಮಲ್ಲಿಕಾರ್ಜುನ ಪಾಟೀಲ್, ಪುರಸಭೆ ಮಾಜಿ ಅಧ್ಯಕ್ಷ ದಿಲೀಪಕುಮಾರ್ ಬಗ್ದಲಕರ್, ಸೂರ್ಯಕಾಂತ ಮಠಪತಿ, ಪುರಸಭೆ ಸದಸ್ಯರಾದ ನಸೀರ್ ಖಾನ ಸಾಬ್, ಕ್ರಿಸ್ತನಂದ ಕೆರೂರಕ್ಕರ್, ವಿಶಾಲ ಬೋರಳೆ, ರೇವಣ್ಣಪ್ಪ ಭುತ್ತಾಳೆ, ಬಾಬಾ ಆರ್.ಸಿ.ಸಿ., ಹಬ್ಬಿಬ್, ಪ್ರಮುಖರಾದ ಅಶೋಕ ಸ್ವಾಮಿ, ವಿಠಲರಾವ ಪಟ್ಟಣಕ್ಕರ್, ಖಾದರ್ ಸಾಬ್, ಸಂಜುಕುಮಾರ್ ಭೋಲೆನಾಥ, ರವಿ ಶಿವಪೂಜಿ, ವೀರೇಶ ತುಗಾಂವ, ಭಾಸ್ಕರ್, ಷರೀಫ್, ರಮೇಶ ಪಾರಾ, ಸುನೀಲ ಪಾರಾ, ಮಹಾರುದ್ರಯ್ಯ ಸ್ವಾಮಿ, ಮೋಜೆಸ್ ಮಿತ್ರಾ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಶಾಖೆ ವ್ಯವಸ್ಥಾಪಕ ಪ್ರಭಾಕರ್ ಲಕಶೆಟ್ಟಿ ವಂದಿಸಿದರು.

# ಡಾ. ಮನಮೋಹನ ಸಿಂಗ್ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮೌನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ: ಭಾರತದ ಮಾಜಿ ಪ್ರಧಾನ ಮಂತ್ರಿಗಳಾದ ಡಾ. ಮನಮೋಹನ ಸಿಂಗ್ ರವರ ನಿಧನದ ಪ್ರಯುಕ್ತ ಇಂದು ಹುಮನಾಬಾದ ಪಟ್ಟಣದಲ್ಲಿ ಮಾಜಿ ಸಚಿವರಾದ ಶ್ರೀ ರಾಜಶೇಖರ ಬಿ ಪಾಟೀಲ ರವರ ಗೃಹ ಕಚೇರಿಯಲ್ಲಿ ಬ್ಲಾಕ್ ಕಾಂಗ್ರೇಸ್ ಸಮಿತಿ ಹುಮನಾಬಾದ ರವರ ವತಿಯಿಂದ ಭಾರತದ ಮಾಜಿ ಪ್ರಧಾನ ಮಂತ್ರಿಗಳಾದ ದಿ. ಡಾ. ಮನಮೋಹನ ಸಿಂಗ್ ರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮೌನಾಚರಣೆ ಆಚರಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಂಧರ್ಭದಲ್ಲಿ ಜಿಲ್ಲಾ ಸಹಕಾರ ಬ್ಯಾಂಕ್ ಉಪಾಧ್ಯಕ್ಷರಾದ ಶ್ರೀ ಅಭಿಷೇಕ ಆರ್ ಪಾಟೀಲ, ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರಾದ ಅಫ್ಸರ್‌ಮಿಯ್ಯಾ, ಓಂಕಾರ ತುಂಬಾ, ಯುವ ಕಾಂಗ್ರೇಸ್ ಅಧ್ಯಕ್ಷ ಉಮೇಶ ಜಮಗಿ, ಪುರಸಭೆ ಉಪಾಧ್ಯಕ್ಷರಾದ ಮುಕ್ರಂ ಜಾ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಮಾಶೆಟ್ಟಿ, ಕಂಟ್ಟೇಪ್ಪಾ ದಾನಾ, ಸಿದ್ರಾಮ ವಾಘಮಾರೆ, ಪುರಸಭೆ ಸದಸ್ಯ ದತ್ತು ಲದ್ದಿ, ಸೈಯದ್ ಯಾಶೀನ್, ಸುರೇಶ ಘಾಂಗ್ರೆ, ಹುಲ್ಲೆಪ್ಪಾ ರಟಕಲ್, ಧರಮರೆಡ್ಡಿ, ನರಸಪ್ಪಾ ಪರಸನೋರ, ವಿಜಯಕುಮಾರ ಶಿವಪೂರ, ಅಶೋಕ ಸೊಂಡೆ, ಶಿವಕುಮಾರ ಪರೀಟ, ರಾಖೇಶ ಕೌಡಿಯಾಳ, ರಾಜಕುಮಾರ ಲಗೋಂಡ, ರವಿ ಫವಳಕರ್, ರಾಹುಲ ಉದ್ದಾ, ಯಾಸೀರ್, ವೈಜಿನಾಥ ಡಾಂಗೆ, ಗುಂಡಪ್ಪಾ ಧನಗರಗಡ್ಡ, ಗುಂಡಪ್ಪಾ ಹೊನ್ನಕೇರಿ, ಜೈರಾಜ ಸದಲಾಪೂರೆ, ಖಾಲೀದ್, ಮತ್ತು ಪಕ್ಷದ ಮುಂತಾದ ಪ್ರಮುಖರು ಉಪಸ್ಥಿತರಿದ್ದರು.

## ಆತ್ಮದ ಶುದ್ಧಿಕರಣಕ್ಕೆ ಗಮನಕೊಡಿ:ಜಯೋಗಿನಿ ಬ್ರ.ಕು. ಜಯಂತಿ ಅಕ್ಕ



(ವೀರಯ್ಯ ವಿ ಹಿರೇಮಠ)
ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಯಲಬುರ್ಗಾ ದೇಹದ ತಂದೆ ಹೊಟ್ಟೆ ತುಂಬಿಸಬಹುದು ಆದರೆ

ಆತ್ಮತಂದೆ ಆತ್ಮಶುದ್ಧಿಕರಿಸುತ್ತಾನೆ ಎಂದು ಗದಗ ವಿಭಾಗದ ಸಂಚಾಲಕಿಯರಾದರಾಜಯೋಗಿನಿ ಬ್ರ.ಕು. ಜಯಂತಿ ಅಕ್ಕನವರು ಹೇಳಿದರು.

ಪಟ್ಟಣದ ಈಶ್ವರಿ ವಿ.ವಿ.ದಲ್ಲಿ ಆಯೋಜಿಸಿದ 2025 ರ ಹೊಸ ವರುಷದ ಪ್ಯಾಕೇಟ್ ಕ್ಯಾಲೆಂಡರನ್ನುಬಿಡುಗಡೆಗೊಳಿಸಿ ಮಾತನಾಡಿದ ಅವರು ಕಾಮ . ಕ್ರೋಧ ಲೋಭ ಮದ ಮತ್ಸರವೆಂಬ

ಐದು ವಿಕಾರಗಳನ್ನುತೊರೆದಾಗ ಮಾನವ ಮನುಷ್ಯ ನಾಗಿರಲು ಸಾಧ್ಯವೆಂದರು.ಪ್ರತಿಯೊಬ್ಬರು

ಅಭಿಮಾನ ತೊರೆದು ಸ್ವಮಾನ ಸ್ವಭಾವ ಬೆಳೆಸಿಕೊಳ್ಳಬೇಕು

ಬದುಕಿರವಷ್ಟು ಪ್ರೀತಿ ಪ್ರೇಮ ವಿಶ್ವಾಸ ದಿಂದ ಇರಬೇಕು

ನಾವು ಸಂತೋಷದಿಂದ ಇರಬೇಕು ಮತ್ತೊಬ್ಬರು ಸಂತೋಷದಿಂದ ಇರಬೇಕು.ಆರೋಗ್ಯದ ಬಗ್ಗೆ ಗಮನಕೊಡಿ ಎಂದೆನ್ನುತ್ತಾ

ಮೌನದ ಶಕ್ತಿ ಅಪಾರವಿರುತ್ತದೆ.

ತನು ಮನ ಧನ ದಿಂದ ಮತ್ತೊಬ್ಬರಿಗೆ ಸಹಾಯ ಮಾಡಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಎಂದರು

ಒಳ್ಳೆಕಾರ್ಯ ಮಾಡುವ ಮನಸ್ಸು ಇದ್ದರೆ ಅದು ಈಡೇರುತ್ತದೆ ಆದರೆ ಸಂಕಲ್ಪ ಶಕ್ತಿ ಮುಖ್ಯ ಅದನನ್ನು ರೂಢಿಸಿಕೊಂಡಾಗ ಎಲ್ಲರಿಗೂ ಒಳ್ಳೇಯದಾಗುತ್ತದೆ ಎಂದೆನ್ನುತ್ತಾ ಹೊಸ ವರುಷದಲ್ಲಿ ಏನಾದರೂ ಹೊಸತನದ ಕಾರ್ಯಕ್ಕೆ ಮನಸು ಮಾಡಿ ಹುಟ್ಟಿದ ಜೀವನವನ್ನು ಪಾವನಗೊಳಿಸಿಕೊಳ್ಳಿ ಎಂದರು.

ಸ್ಥಳೀಯ ಸಂಚಾಲಕಿಯರಾದ ಬ್ರ.ಕು.ಉಮಾ ಅಕ್ಕನವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಪ್ರತಿ ವರುಷ ಪಟ್ಟಣದ ವಾಣಿಜ್ಯೋದ್ಯಮಿ ಬಸವಲಿಂಗಪ್ಪ ಭೂತೆ ರವರು ಪಾಕೇಟ್ ಕ್ಯಾಲೆಂಡರನ್ನು ಅಚ್ಚು ಹಾಕಿಸಿ ಉಚಿತವಾಗಿ ಕೊಡುತ್ತಿದ್ದಾರೆ ಈ ವರುಷವು ಸಹಿತ ಅವರು ಕ್ಯಾಲೆಂಡರ್ ನ್ನುಹಾಕಿಸಿಕೊಟ್ಟಿದ್ದಾರೆ ಅವರಿಗೆ ಹಾಗೂ ಅವರ ಕುಟುಂಬಕ್ಕೆ ಭಗವಂತ ಹಾಗೂ ಬಾಬನ ಕರುಣೆ ಸದಾ ಇರಲಿ ಎಂದು ಆಶಿಸಿದರು.

ಸಿದ್ದಯ್ಯ ಕೊಣ್ಣೂರು -ನಿಂಗಪ್ಪ ಯರಾಶಿ -ವೀರಯ್ಯ ಶಿವಪ್ಪಯ್ಯನಮಠ -ಶರಣಪ್ಪ ದಾನಕೈ - ದೊಡ್ಡಬಸಪ್ಪ ಹಕಾರಿ -ವೀರಣ್ಣ ನಿಂಗೋಜಿ ಹಾಗೂ ಹಲವಾರು ಅಕ್ಕಂದಿರು ಪಾಲ್ಗೊಂಡಿದ್ದರು.

## ಇಂದು ಶ್ರೀಶ್ರೀಶ್ರೀ ದತ್ತ ದಿಗಂಬರ ಮಾಣಿಕೇಶ್ವರ ರಥಾಲಯ ನಿರ್ಮಾಣ ಭೂಮಿ ಪೂಜೆ

(ರಾಜಕುಮಾರ ಆರ್.ಹಡಪದ)
ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಕಮಲಾಪುರ್ ತಾಲೂಕಿನ ಸೊಂತ ಗ್ರಾಮದ ಹೊರವಲಯದಲ್ಲಿರುವ ಶರಣ ಶಂಕರಲಿಂಗ ಮಹಾರಾಜರ ಆಶ್ರಮದಲ್ಲಿ ಇಂದು ರವಿವಾರ ದಿನದಂದು ಕಲ್ಯಾಣ ಕರ್ನಾಟಕದಲೇ ಅತ್ಯಂತ ಬೃಹತ ಮಟ್ಟದ 51 ಅಡಿ ಎತ್ತರದ ಶ್ರೀಶ್ರೀಶ್ರೀ ದತ್ತ ದಿಗಂಬರ ಮಾಣಿಕೇಶ್ವರರ ರಥದ ರಥಾಲಯ ನಿರ್ಮಾಣ ಭೂಮಿ



ಪೂಜೆ ಹಾಗೂ ಶಂಕುಸ್ಥಾಪನೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ಶ್ರೀಶ್ರೀಶ್ರೀ ಬಾಲಯೋಗಿ ದತ್ತ ದಿಗಂಬರ ಶರಣ ಶಂಕರಲಿಂಗ ಮಹಾರಾಜರ ವಹಿಸಲಿದ್ದಾರೆ. ಗ್ರಾಮೀಣ ಮತ ಕ್ಷೇತ್ರದ ಶಾಸಕ ಬಸವರಾಜ ಬಿ. ಮತ್ತಿಮುಡ ಅವರ ಧರ್ಮಪತ್ನಿ ಜಯಶ್ರೀ ಬಿ. ಮತ್ತಿಮುಡ ಹಾಗೂ ಅವರ ಕುಟುಂಬದವರ ಘನ ಅಧ್ಯಕ್ಷತೆಯಲ್ಲಿ ಆದ್ದುರಿಯಾಗಿ ಜರುಗಲಿದೆ. ಆದ ಕಾರಣ ಸಮಸ್ತ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೃಷಿ ಪತ್ತಿನ ಅಧ್ಯಕ್ಷರಾಗಿ ಗಿರೀಶ್ ಪಟ್ಟಣಶೆಟ್ಟಿ ಆಯ್ಕೆ



(ವೀರಯ್ಯ ವಿ ಹಿರೇಮಠ)
ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ತಾಲೂಕಿನ ಇಲ್ಕಲಗಡ ಗ್ರಾಮದ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಗಿರೀಶ್ ಪಟ್ಟಣಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಉಪಾಧ್ಯಕ್ಷರಾಗಿ ಸಂಗಮ್ಮ ಬಾಳಪ್ಪ ಕುಂಬಾರ್ ಆಯ್ಕೆಯಾಗಿರುತ್ತಾರೆ ಇತ್ತೀಚಿಗೆ ನಡೆದ ಸಹಕಾರಿ ಸಂಘಕ್ಕೆ 12 ಜನ ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದರು ಇವತ್ತು ನಡೆದ ಅಧ್ಯಕ್ಷರ ಆಯ್ಕೆಯಲ್ಲಿ ಅವಿರೋಧವಾಗಿ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಯನ್ನು ಮಾಡಲಾಯಿತು ಈ ಸಂದರ್ಭದಲ್ಲಿ ಊರಿನ ಹಿರಿಯರಾದ ಸಂಗಮೇಶ್ ಬಾಗವಾಡಗಿ ಗಂಗಾಧರ ಸ್ವಾಮಿ ಹಿರೇಮಠ ವೆಂಕನಗೌಡ ಮೇಟಿ ರವಿ ದೇಸಾಯಿ ರಾಮಚಂದ್ರಪ್ಪ ದೇಸಾಯಿ ದೊಡ್ಡಬಸಪ್ಪ ತಳಕೇರಿ ನಾಗಪ್ಪ ದೇಸಾಯಿ ಬಸವರಾಜ್ ಪಿನ್ನಿ ಗಂಗಣ್ಣ ಕಾಮ್ನೂರ್ ಗ್ರಾಮ ಪಂಚಾಯತಿಯ ಸರ್ವ ಸದಸ್ಯರು ಊರಿನ ಹಿರಿಯರು ಚುನಾವಣಾ ಅಧಿಕಾರಿಗಳು ಉಪಸ್ಥಿತರಿದ್ದರು.

## ಅರ್ಥಪೂರ್ಣ ವಚನ ವಿಜಯೋತ್ಸವಕ್ಕೆ ನಿರ್ಧಾರ

ಮಲ್ಲಮ್ಮ ನುಡಿ ವಾರ್ತೆ

ಬೀದರ್:ಲಿಂಗಾಯತ ಮಹಾ ಮಠದ ವತಿಯಿಂದ ನಗರದ ಬಸವಗಿರಿಯಲ್ಲಿ ಫೆಬ್ರುವರಿ 10 ರಿಂದ 12 ರ ವರೆಗೆ ಅದ್ದೂರಿ ಹಾಗೂ ಅರ್ಥಪೂರ್ಣ ವಚನ ವಿಜಯೋತ್ಸವ ಆಚರಿಸಲು ನಿರ್ಧರಿಸಲಾಗಿದೆ ಎಂದು ಲಿಂಗಾಯತ ಮಹಾ ಮಠದ ಕಾರ್ಯದರ್ಶಿ ಚನ್ನಬಸವ ಹಂಗರಗಿ ತಿಳಿಸಿದ್ದಾರೆ.

ಪ್ರಭುದೇವ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ನಡೆದ ನಾಡಿನ ವಿವಿಧೆಡೆಯ ಅಕ್ಕ ಅನ್ನಪೂರ್ಣತಾಯಿ ಅವರ



ಅನುಯಾಯಿಗಳು ಹಾಗೂ ಬಸವ ಭಕ್ತರ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಈಗಾಗಲೇ ನಾಡಿನ ಮಠಾಧೀಶರು ಹಾಗೂ ಗಣ್ಯರಿಗೆ ವಚನ ವಿಜಯೋತ್ಸವಕ್ಕೆ ಆಹ್ವಾನಿಸಲಾಗಿದೆ. ಜಿಲ್ಲೆಯಾದ್ಯಂತ ವಚನ ವಿಜಯೋತ್ಸವದ ಪ್ರಚಾರ ಕೈಗೊಳ್ಳಲು ಸಮಿತಿ ರಚಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದ್ದಾರೆ.

ವಚನ ವಿಜಯೋತ್ಸವದ ವೈಭವ ಮರುಕಳಿಸಬೇಕು ಎಂಬುದು ಅಕ್ಕ ಅನ್ನಪೂರ್ಣತಾಯಿ ಅವರ ಕೊನೆಯ ಆಸೆಯಾಗಿತ್ತು. ಅವರ ಅಪೇಕ್ಷೆಯಂತೆ ವಿವಿಧ ಗೋಷ್ಠಿಗಳು, ವಚನ ಸಾಹಿತ್ಯದ ಮೆರವಣಿಗೆ ಸೇರಿದಂತೆ ಮಾದರಿ ವಚನ ವಿಜಯೋತ್ಸವ ಸಂಘಟಿಸಲಾಗುವುದು ಎಂದು ಹೇಳಿದ್ದಾರೆ.

## ಅಂಬೇಡ್ಕರವರನ್ನು ಅವಮಾನಿಸಿದ ಗೃಹ ಮಂತ್ರಿ ಅಮಿತ್ ಶಾ ರಾಜೀನಾಮೆಗೆ ಒತ್ತಾಯಿಸಿ ರಾಷ್ಟ್ರಪತಿಗೆ ಮನವಿ.



(ವೀರಯ್ಯವಿ ಹಿರೇಮಠ)
ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಅವಮಾನಿಸಿದ ಕೇಂದ್ರ ಗೃಹ ಮಂತ್ರಿಗಳಾದ ಅಮಿತ್ ಶಾ ರವರು ರಾಜೀನಾಮೆ ನೀಡುವಂತೆ ಒತ್ತಾಯಿಸಿ ಜಿಲ್ಲಾ ಪಾಸ್ಟರ್ಸ್ ಅಸೋಸಿಯೇಷನ್ ನೇತ್ರತ್ವದಲ್ಲಿ ವಿವಿಧ ಸಂಘಟನೆಗಳ ನಾಯಕರು ಜಿಲ್ಲಾಧಿಕಾರಿ ಅವರ ಅನುಪಸ್ಥಿತಿಯಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರ ಮುಖಾಂತರ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಿದರು.

ಮನವಿಯಲ್ಲಿ"ಅಂಬೇಡ್ಕರ್ ಅವರ ಹೆಸರನ್ನು ಪದೇ ಪದೇ ಬಳಸುವುದು ಕೆಲವರಿಗೆ ಶೋಕಿಯಾಗಿಬಿಟ್ಟಿದೆ. ಅಂಬೇಡ್ಕರ್ ಅವರ ಹೆಸರನ್ನು ಬಳಸಿದಷ್ಟು ಏನಾದರೂ ದೇವರ ಹೆಸರನ್ನು ಬಳಸಿದ್ದರೆ ಇಷ್ಟು ಹೊತ್ತಿಗೆ ಏಳು ಜನ್ಮದವರೆಗೆ ಸ್ವರ್ಗ ಸಿಗುತ್ತಿತ್ತು" ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ರಾಜ್ಯ ಸಭೆಯಲ್ಲಿ ಹೇಳಿದ್ದು, ಅವರ ಈ ಅಸೂಕ್ಷ್ಮವಾದ ಹೇಳಿಕೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಭಾರತದ ಇತಿಹಾಸದಲ್ಲಿ ಪರಿಶಿಷ್ಟ ಮತ್ತು ಶೋಷಿತ ಸಮುದಾಯಗಳಿಗೆ ಇದ್ದ ಪರಿಸ್ಥಿತಿಯನ್ನು ನೆನಪಿಸಿಕೊಂಡರೆ ವಿಪರೀತ ಅವಮಾನ ದೌರ್ಜನ್ಯಕ್ಕೆ ಒಳಗಾಗಿದ್ದ ಅವರನ್ನು ಯಾವ ದೇವರೂ ಕೂಡಾ ರಕ್ಷಣೆ ಮಾಡಿದ ಉದಾಹರಣೆ ಇಲ್ಲ. ಆದರೆ ಪರಿಶಿಷ್ಟರ, ಮಹಿಳೆಯರ ಮತ್ತು ಶೋಷಿತರ ಬದುಕನ್ನು ತನ್ನ ತ್ಯಾಗ, ಅಧ್ಯಯನ, ಬದ್ಧತೆ ಮತ್ತು ಮಹಾಲೋಕದೃಷ್ಟಿಯ ಮೂಲಕ ಪ್ರತಿದಿನವೂ ರಕ್ಷಣೆ ಮಾಡುತ್ತಿರುವ ನಿಜವಾದ ಶಕ್ತಿ ಯಾವುದಾದರೂ ಇದ್ದರೆ ಅದು ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತವರ ಸಂವಿಧಾನ ಎಂಬುದನ್ನು ನಾವುಗಳು ಎದೆ ತಟ್ಟಿಕೊಂಡು ಹೇಳುತ್ತೇವೆ, ಭಾರತದಲ್ಲಿ ಅಸ್ಪೃಶ್ಯತೆ ಅನುಭವಿಸಿದ ನಮ್ಮ ಜನರು, ಇಲ್ಲಿನ ಮಹಿಳೆಯರು ಮತ್ತು ಶೋಷಿತ ವರ್ಗಗಳು ಅಂಬೇಡ್ಕರ್ ಅವರನ್ನು ಬಿಟ್ಟು ಅಮಿತ್ ಶಾ ಅವರ ದೇವರ ಹೆಸರನ್ನು ಹೇಳುತ್ತಾ ಕೂತಿದ್ದರೆ ಇಷ್ಟೊತ್ತಿಗೆ ಅವರೆಲ್ಲರೂ ದೇವರ ಪಾದ ಸೇರಬೇಕಾಗಿತ್ತು. ಜೊತೆಗೆ ಯಾವ ಧರ್ಮ ಅಥವಾ ದೇವರು ನಮ್ಮನ್ನು ರಕ್ಷಣೆ ಮಾಡುವುದಿಲ್ಲ, ಬದಲಿಗೆ ಶಿಕ್ಷಣ, ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವವೇ ನಮ್ಮ ಬದುಕನ್ನು ಬದಲಿಸುವ ಕೀಲಿಕೈ" ಎಂಬ ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಮಾತನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತೇವೆ. ಹೀಗಾಗಿ ಪುಣ್ಯ ಗಿಣ್ಯ ಎಂದು ಹೇಳುತ್ತಾ ಸಮಾಜಕ್ಕೆ ಕಂಟಕಪ್ರಾಯವಾದ ಮೌಢ್ಯತೆಯನ್ನು ಆಚರಿಸುವುದಕ್ಕಾಗಿ ಸಂವಿಧಾನ ಶಿಲ್ಪಿ ಡಾ:ಬಿ,ಆರ್,ಅಂಬೇಡ್ಕರ್ ಅವರನ್ನು ಅವಮಾನಿಸುವಂತಹ ಹೀನ ಧೈರ್ಯ ತೋರುತ್ತಿರುವ ಅಮಿತ್ ಷಾ ಅವರು ದೇಶದ ಮುಂದೆ ಸಾರ್ವಜನಿಕವಾಗಿ ಕ್ಷಮೆಯಾಚಿಸಿ ತಮ್ಮ ಕೇಂದ್ರ ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸುತ್ತೇವೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ,

ಪಾಸ್ಟರ್ಸ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಅಪ್ಪಣ್ಣವರ್, ಟಿಂಯುಸಿಐ ಮುಖಂಡ ಕೆ.ಬಿ.ಗೋನಾಳ. ಜನಪರ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಂಚಾಲಕ ಎಸ್.ಎ. ಗಫಾರ್, ಕೆ,ಎಂ,ಆರ್,ವಿ ಅಧ್ಯಕ್ಷ ಮುದುಕಪ್ಪ ಎಮ್.ಹೊಸಮನಿ. ದಲಿತ ಯುವ ವೇದಿಕೆ ಜಿಲ್ಲಾ ಸಂಚಾಲಕ ಸುಂಕಪ್ಪ ಮಿಸಿ, ಅಹಿಂದ ಜಿಲ್ಲಾ ಸಂಚಾಲಕ ರಮೇಶ್ ಸಾಲ್ಮನಿ, ನಮ್ಮ ಕರ್ನಾಟಕ ಸೇನೆ ಜಿಲ್ಲಾ ಅಧ್ಯಕ್ಷ ಬಂದೆನವಾಝ ಮನಿಯಾರ್, ಭೀಮ ಆರ್ಮಿ ಏಕತಾ ಮಿಷನ್ ಜಿಲ್ಲಾ ಕಾರ್ಯದರ್ಶಿ ವೀರೇಶ್ ತೆಗ್ಗಿನಮನಿ, ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಜಿಲ್ಲಾ ಉಪಾಧ್ಯಕ್ಷ ಮೌಲಾ ಹುಸೇನ್ ಹಣಗಿ ಮುಂತಾದವರು ಭಾಗವಹಿಸಿದ್ದರು,

## ಎಚ್.ನರಸಿಂಹಯ್ಯ ಪ್ರಶಸ್ತಿಗೆ ರಾಜಣ್ಣಾ ಬಿ ಹುಡುಗಿಕರ್ ಆಯ್ಕೆ:ಆಹ್ವಾನ



ಮಲ್ಲಮ್ಮ ನುಡಿ ವಾರ್ತೆ

> ಪ್ರಶಸ್ತಿಗೆ ನನ್ನನ್ನು ಆಯ್ಕೆ ಮಾಡಿದಕ್ಕೆ ರಾಜ್ಯಾಧ್ಯಕ್ಷ ಹುಲಿಕಲ್ ನಟರಾಜ್‌ರವರಿಗೆ ತುಂಬುಹೃದಯದ ಅಭಿನಂದನೆಗಳು...
> -ರಾಜಣ್ಣಾ ಹುಡಗಿಕರ್

ಹುಮನಾಬಾದ:ತಾಲೂಕಿನ ನಿವೃತ್ತ ಸರ್ಕಾರಿ ನೌಕರರ ಸಂಘದ ತಾಲೂಕ ಅಧ್ಯಕ್ಷರು ಹಾಗು ರವೀಂದ್ರನಾಥ ಟ್ಯಾಗೋರ್ ಶಿಕ್ಷಣ ಸಂಸ್ಥೆಯ ಮಹಾಪೋಷಕರಾದ ನಿವೃತ್ತ ಶಿಕ್ಷಕ ರಾಜಣ್ಣಾ ಬಿ. ಹುಡುಗಿಕರ್ ರವರು ರಾಜ್ಯಮಟ್ಟದ 2024 ರ ಎಚ್. ನರಸಿಂಹಯ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಕಳೆದ 35 ವರ್ಷಗಳ ಕಾಲ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಗ್ರಾಮೀಣ ಭಾಗದಲ್ಲಿ ಉತ್ತಮ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದ ಇವರನ್ನು ಅಭಿನಂದಿಸಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಹಾಗು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕರ್ನಾಟಕ ಸರ್ಕಾರದ ಸಹಕಾರದೊಂದಿಗೆ ಜನವರಿ 3 ಮತ್ತು 4ನೇ ದಿನಾಂಕದಂದು ಬೆಂಗಳೂರಿನ ಯಲಹಂಕ ತಾಲೂಕಿನ ಬಾಗಲೂರಿನ ವಿ. ಜೆ. ಇಂಟರನ್ಯಾಷನಲ್ ಶಾಲಾ ಮೈದಾನದಲ್ಲಿ ರಾಜ್ಯಮಟ್ಟದ 4ನೇ ವೈಜ್ಞಾನಿಕ ಸಮ್ಮೇಳನ 2024 ನಡೆಯಲಿದೆ. ಈ ಸಮ್ಮೇಳನದಲ್ಲಿ ರಾಜಣ್ಣಾ ಬಿ. ಹುಡುಗಿಕರ್ ರವರಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಈ ಸಮ್ಮೇಳವನ್ನು ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಉದ್ಘಾಟನೆ ಮಾಡಲಿದ್ದಾರೆ ಹಾಗು ಸಚಿವರಾದ ಕೃಷ್ಣಭೈರೇಗೌಡ, ಸತೀಶ್ ಜಾರಕಿಹೊಳಿ, ಎನ್. ಎಸ್ ಬೋಸ್ ರಾಜು, ಪ್ರಿಯಾಂಕ ಖರ್ಗೆ, ಕೆ. ಹೆಚ್ ಮುನಿಯಪ್ಪ, ಬಿ. ವೈ ವಿಜಯೇಂದ್ರ ಮತ್ತು ನಿವೃತ್ತ ನ್ಯಾಯಮೂರ್ತಿ ಜಸ್ಟಿಸ್ ನಾಗಮೋಹನ್ ದಾಸ್ ಹಾಗೂ ಸಮ್ಮೇಳನದ ಅಧ್ಯಕ್ಷರಾಗಿ ನಟಿ ಉಮಾಶ್ರೀ ಅವರು ಭಾಗವಹಿಸಲಿದ್ದಾರೆ.

ರಾಜಣ್ಣಾ ಬಿ. ಹುಡುಗಿಕರ್‌ರವರು ರಾಜ್ಯಮಟ್ಟದ ಪ್ರಶಸ್ತಿಗೆ ಆಯ್ಕೆಯಾಗಿರುವುದಕ್ಕೆ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ರಾಜ್ಯ ಅಧ್ಯಕ್ಷರಾದ ಹುಲಿಕಲ್ ನಟರಾಜ್, ರಾಜ್ಯ ಸಂಚಾಲಕರಾದ ಬಾಬುರಾವ್ ದಾನಿ ರವರ ಆದೇಶದಂತೆ ಬೀದರ್ ಜಿಲ್ಲಾ ಅಧ್ಯಕ್ಷರಾದ ದೇವಿ ಪ್ರಸಾದ್ ಕಲಾಲ್, ಕಾರ್ಯದರ್ಶಿಗಳಾದ ರಫೀಕ್ ತಾಳಿಕೋಟೆ, ಮಲ್ಲಿಕಾರ್ಜುನ ಸ್ವಾಮಿಯವರು ಗೌರವಪೂರ್ವಕವಾಗಿ ಆಹ್ವಾನಿಸಿ ಅಮಂತ್ರಣ ಪತ್ರಿಕೆ ನೀಡಿದರು. ನನಗೆ ಪ್ರಶಸ್ತಿ ಆಯ್ಕೆಗೋಳಿಸಿದಕ್ಕೆ ಸಂತಸ ವ್ಯಕ್ತಪಡಿಸಿ, ಜಿಲ್ಲಾಧ್ಯಕ್ಷ ದೇವಿಪ್ರಸಾದ ಕಲಾಲ್ ಹಾಗೂ ರಫೀಕ್ ತಾಳಿಕೋಟೆ, ಬಾಲಾಜಿ ಇವರನ್ನು ಕೃತಜ್ಞತೆ ಸಲ್ಲಿಸಿದರು. ನಿವೃತ್ತಿಯಾದ ನಂತರ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟ ಮಟ್ಟದ ಶಿಕ್ಷಣವನ್ನು ನೀಡಿ, ಪಟ್ಟಣ ಹಾಗೂ ನಗರದ ವಿದ್ಯಾರ್ಥಿಗಳ ಜೊತೆಗೆ ಪೈಪೋಟಿ ಮಾಡುವಂತೆ ಬೆಳೆಸುವ ಉದ್ದೇಶದಿಂದ ಹುಮನಾಬಾದ ಪಟ್ಟಣದಲ್ಲಿ ಕಳೆದ 16 ವರ್ಷಗಳಿಂದ ರವೀಂದ್ರನಾಥ ಟ್ಯಾಗೋರ ಶಿಕ್ಷಣ ಸಂಸ್ಥೆಯನ್ನು ಶಿಕ್ಷಣ ಪ್ರೇಮಿಯಾಗಿ ಗ್ರಾಮೀಣ ಮಕ್ಕಳಿಗೆ ಶಾಲಾ ವಾಹನಗಳನ್ನು ಕೊಟ್ಟು ಅತಿ ಕಡಿಮೆ ವೆಚ್ಚದಲ್ಲಿ ಶಿಕ್ಷಣವ ನೀಡುವುದು ಹಾಗೂ ಕಡು ಬಡವರಿಗೆ ನಿರ್ಗತಿಕರಿಗೆ, ತಂದೆ ಅಥವಾ ತಾಯಿ ಕಳೆದಕೊಂಡ ಪ್ರತಿಭಾವಂತ ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಾ ಬಂದಿರುವುದನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ಸಾಧನೆಗೆ ಶಾಲೆಯ ಶಿಕ್ಷಕರು, ಶಿಕ್ಷಕಿಯರು, ಸಿಬ್ಬಂದಿ ವರ್ಗದವರು, ಶಾಲೆಯ ಮಕ್ಕಳು ಹಾಗೂ ಆಡಳಿತ ಮಂಡಳಿ ಹರ್ಷ ವ್ಯಕ್ತಡಿಸಿದ್ದಾರೆ. ನಂದಕುಮಾರ ಮರೂರ, ಮಹೇಶ ಚವ್ಹಾಣ, ಸಂಸ್ಥೆಯ ಅಧ್ಯಕ್ಷ ಸುರೇಂದ್ರನಾಥ ಹುಡಗಿಕರ್ ಇದ್ದರು.

## ಕುಕನೂರ ಪಿಎಸ್‌ಐಗೆ ಜಿಲ್ಲಾ ಪೊಲೀಸ್ ಇಲಾಖೆಯಿಂದ ಪ್ರಶಂಸನಾ ಪತ್ರ ವಿತರಣೆ



(ವೀರಯ್ಯ ವಿ ಹಿರೇಮಠ)
ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಕುಕನೂರ ತಾಲೂಕಿನ ಚಂಡೂರು ಗ್ರಾಮ ಸೀಮಾದ ರಸ್ತೆಯಲ್ಲಿ ಮೋಟಾರ್ ಸೈಕಲ್ನಲ್ಲಿ ಹೊರಟಿದ್ದ ವ್ಯಕ್ತಿಯನ್ನು ಕೊಲೆ ಮಾಡುವ ಉದ್ದೇಶದಿಂದ ಯಾರೋ ದುಷ್ಕರ್ಮಿಗಳು ಕುತ್ತಿಗೆಗೆ ಆಯುಧದಿಂದ ಭಾರಿ ಗಾಯಗೊಳಿಸಿದ ಘಟನೆಗೆ ಸಂಬಂಧಿಸಿದಂತೆ, ಕುಕನೂರು ಪೊಲೀಸ್ ಠಾಣಾ ಗುನ್ನೆ ನಂ-142/2024, ಕಲಂ-109 ಸಹಿತ 3(5) ಬಿ.ಎನ್.ಎಸ್ ಕಾಯ್ದೆ ಪ್ರಕರಣದಲ್ಲಿ ಆಪಾದಿತರನ್ನು ಪತ್ತೆ ಮಾಡಿ, ಪ್ರಕರಣ ಭೇದಿಸಿದ ಪ್ರಕರಣಕ್ಕಾಗಿ ಟಿ ಗುರುರಾಜ ಪಿ.ಎಸ್.ಐ ಕುಕನೂರು ಪೊಲೀಸ್ ಠಾಣೆ ರವರಿಗೆ ಪ್ರಶಂಸನಾ ಪತ್ರ ವನ್ನು ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಅರಸಿದ್ದಿ ಅವರು ವಿತರಿಸಿದರು.

## ಮನಸ್ಸು ಶಾಂತವಾಗಿರಬೇಕು



(ವರದಿ. ಡಿ. ಕೆ. ಪ್ರಹ್ಲಾದ.)
ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಇಂದಿನ ಒತ್ತಡದ ಬದುಕಿನಲ್ಲಿ ಮನಸ್ಸಿಗೆ ಶಾಂತಿ ಸಿಗುತ್ತಿಲ್ಲ ಆದರಿಂದ ಮನಸ್ಸಿಗೆ ಶಾಂತಿ ಅವಶ್ಯಕವಾಗಿದೆ ಎಂದು ತಿಪುರಾಂತಿನ ಗವಿಮಠದ ಶ್ರೀ ಪೂಜ್ಯಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದರು. ಇಲ್ಲಿನ ಬಂದವರ ಓಣಿಯ ಬಿ. ಕೆ. ಡಿ. ಬಿ. ಕಲ್ಯಾಣ ಮಂಟಪದಲ್ಲಿ ಬಟಗೇರಾದ ನಿವೃತ್ತ ಉಪನ್ಯಾಸಕಿ ಇಂದುಮತಿ ಹಾಗೂ ಗುರುಲಿಂಗಪ್ಪ ಅಪಗುಡೆ ಯವರ ವಿವಾಹ ಸುವರ್ಣಾ ವಾರ್ಷಿಕ ಮಹೋತ್ಸವ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ಮುಂದಿನ ದಿನಗಳಲ್ಲಿ ರಜತ ಮಹೋತ್ಸವ ಆಚರಿಸಿಕೊಳುವಂತಾಗಲಿ ಎಂದು ಪೂಜ್ಯರು ಶುಭ ಹಾರೈಸಿದರು. ಗುರುಮಠಕಲ್ ಶಾಖಾ ಮಠದ ಪೂಜ್ಯಶ್ರೀ ಶಾಂತವೀರ ಮುರಘಾ ರಾಜೇಂದ್ರ ಮಹಾಸ್ವಾಮಿಗಳು ಮಾತನಾಡಿ ಜೀವನದಲ್ಲಿ ಪ್ರಿತಿ ವಿಶ್ವಾಸ ಸಂಬಂಧಗಳೆ ಬಹಳ ಮುಖ್ಯ ಅಂಥಹ ಸಂಬಂಧ ನಾವು ಅಪಗುಂಡೆ ಪರಿವಾರದಲ್ಲಿ ಕಂಡಿದೆವೆ ಅವರ ಪರಿವಾರ ಸಾತ್ವಿಕದೊಂದಿಗೆ ಶರಣ ಜೀವಿಗಳಾಗಿದ್ದಾರೆ. ನಮ್ಮ ಮಠಕು ಅವರ ಪರಿಹಾರಕ್ಕೂ ಅವಿನಾಭಾವ ಸಂಬಂಧ ಹೊಂದಿದೆ ಎಂದರು. ಮೈಂದರಗಿ ಹಿರೇಮಠದ ಪೂಜ್ಯಶ್ರೀ ಅಭಿನವ ರೇವಣಸಿದ್ದ ಪಟ್ಟದೇವರು ಮಾತನಾಡಿ ಉತ್ತಮ ಸಂಸ್ಕೃತಿ ಹೊಂದಿದ ಪರಿವಾರ ಹೇಗಿರುತ್ತದೆ ಎಂಬುದಕ್ಕೆ ಈ ಅಪಗುಂಡೆ ಪರಿವಾರವೆ ಸಾಕ್ಷಿ ಯಾಗಿದೆ ಎಂದರು. ಯಲ್ಲಾಪುರ ಸಿದ್ದಾರೂಡ ಮಠದ ಮಾತೋಶ್ರೀ ಆನಂದ ಮಯಿ. ಶಾಸಕರಾದ ಶರಣು ಸಲಗರ್. ವಿಧಾನ ಪರಿಷತ್ ಸದಸ್ಯ ಮಾರುತಿರಾವ ಮುಳೆ. ನಿವೃತ್ತ ಉಪನ್ಯಾಸಕಿ ಸರಸ್ವತಿ ಪಾಟೀಲ್. ಸಾಧನಾ ಜೋಶಿ. ಜಗದೇವಿ ತಾಯಿ ಲೀಗಾಡೆ ಪ್ರತಿಷ್ಠಾನದ ಅಧ್ಯಕ್ಷರಾದ ಎಸ್. ಜಿ. ಹುಡೇದ್. ಡಾ. ಜಿ. ಎಸ್. ಭುರಳೆ. ಸೂರ್ಯಕಾಂತ ಅಡಕೆ. ನ್ಯಾಯವಾದಿ ಮನೋಜ ಮುಡಬಿಕರ್. ಸಂತೋಷ ಕವಲಗೆ. ಶಾಂತಪ್ಪಾ ಮೇತ್ರೆ. ಪತ್ರಕರ್ತರಾದ ನಾಗಪ್ಪಾ ನಿಣ್ಣೆ. ವಿದ್ಯಾಸಾಗರ ಅಪಗುಂಡೆ. ಲಕ್ಷ್ಮೀಮಿಕಾಂತ ಚಿಂಚುರೆ. ಅಲ್ಲದೆ ಅವರ ಅಭಿಮಾನಿಗಳು ಬಂದು ಮಿತ್ರರು ಆಗಮಿಸಿ ಅಪಗುಂಡೆ ದಂಪತಿಗಳಿಗೆ ಸನ್ಮಾನಿಸಿ ಶುಭ ಹಾರೈಸಿದ್ದರು ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳು. ಸಾಹಿತಿ ಅನುಪಮ ಅಪಗುಂಡೆ. ಪ್ರಾರ್ಥನೆ ನಿಮಾರಾಣಿ ವಿನಯ ಕೊಡಕುಂದಿ. ಸಂಚಾಲನೆ ನಾಗಲಿಂಗಯ ಶಾಸ್ತ್ರಿಗಳು ನಿರೂಪಿಸಿದರು.



ಬಸವಕಲ್ಯಾಣ :- ಇಲ್ಲಿನ ಬಂದವರ ಓಣಿಯ ಬಿ. ಕೆ. ಡಿ. ಬಿ. ಕಲ್ಯಾಣ ಮಂಟಪದಲ್ಲಿ ಬಟಗೇರಾದ ನಿವೃತ್ತ ಉಪನ್ಯಾಸಕಿ ಇಂದು ಮತಿ ಹಾಗೂ ಗುರುಲಿಂಗಪ್ಪ ಅಪಗುಂಡೆ ಯವರ ವಿವಾಹ ಸುವರ್ಣಾ ವಾರ್ಷಿಕ ಮಹೋತ್ಸವ ಸಮಾರಂಭದಲ್ಲಿ ಮೈಂದರಗಿ ಹಿರೇಮಠದ ಪೂಜ್ಯಶ್ರೀ ಅಭಿನವ ರೇವಣಸಿದ್ದ ಪಟ್ಟದೇವರು ಮಾತನಾಡುತ್ತಿರುವುದು ಕಾಣಬಹುದು ಗುರುಮಠಕಲ್ ಶಾಖಾ ಮಠದ ಪೂಜ್ಯ ಶ್ರೀ ಶಾಂತವೀರ ಮುರಘಾ ರಾಜೇಂದ್ರ ಮಹಾಸ್ವಾಮಿಗಳು. . ತಿಪುರಾಂತಿನ ಗವಿಮಠದ ಪೂಜ್ಯಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಯಲ್ಲಾಪುರ ಸಿದ್ದಾರೂಡ ಮಠದ ಮಾತೋಶ್ರೀ ಆನಂದ ಮಯಿ. ನಿವೃತ್ತ ಉಪನ್ಯಾಸಕಿ ಸರಸ್ವತಿ ಪಾಟೀಲ್. ಸಾಧನಾ ಜೋಶಿ. ಜಗದೇವಿ ತಾಯಿ ಲೀಗಾಡೆ ಪ್ರತಿಷ್ಠಾನದ ಅಧ್ಯಕ್ಷರಾದ ಎಸ್. ಜಿ. ಹುಡೇದ್. ಸ್ವೇತಾ ವಿದ್ಯಾಸಾಗರ ಅಪಗುಂಡೆ. ಅರ್ಚನಾ ಹಾವಗುಂಡೆ. ಅನುಪಮ ಕಾಮಕರ. ಲಕ್ಷ್ಮೀಕಾಂತ ಚಿಂಚುರೆ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

## ರಾಘವೇಂದ್ರ ಹಾರಣಗೇರಿ ರವರಿಗೆ ಪಿಎಚ್‌ಡಿ ಪದವಿಗೆ ಮಲ್ಲಿಕಾರ್ಜುನ್ ಮೂದ್ನೂರ್ ಹರ್ಷ

(ಮಲ್ಲಿಕಾರ್ಜುನ್ ಮಳಿಕೇರಿ)
ಮಲ್ಲಮ್ಮ ನುಡಿ ವಾರ್ತೆ

ಶಹಾಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ಉಪನ್ಯಾಸಕರಾದ ರಾಘವೇಂದ್ರ ಅವರು ಡಾ. ನಿಧಿರಾಣಿ ಅವರ ಮಾರ್ಗದರ್ಶನದಲ್ಲಿ ರಾಜಸ್ಥಾನದ ಸನರೈಸ್ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದಲ್ಲಿದ ಇಸ್ಸಿಯೂ ಆಪ್ ಡಿಪ್ರೆಶ ನ್ಸ್ರಮ್ ಮೊಂಗ್ ಯಂಗರ್ ಪಪಿಲ್ಸ ಆ್ಯನ್ ಎಗ್ಜಾಮಿಶನ್ಸಮ್ ಸೋಸ್ಯೆಲಾಜಿಕಲ್ ಪರ್ಸಪೆಕ್ಟಿವ್ ಎಂಬ ವಿಷಯದ ಮೇಲೆ ಮಹಾಪ್ರಬಂಧ ಮಂಡಿಸಿ ಪಿಎಚ್.ಡಿ ಪದವಿ ಪಡೆದುಕೊಂಡಿದ್ದಾರೆ. ಹಲವು ವರ್ಷಗಳಿಂದ ಪತ್ರಿಕ ಮಾಧ್ಯಮದೊಂದಿಗೆ ತಮ್ಮ ಸೇವೆ ಮಾಡುತ್ತಿದ್ದು. ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವುದರ ಜೊತೆಗೆ ತಮ್ಮ ಪದವಿ ಮುಗಿಸಿಕೊಂಡಿರುವುದು ನಮಗೆಲ್ಲ ಹರ್ಷದ ವಿಚಾರ ಎಂದು ಕಾರ್ಯನಿರತ ಪತ್ರಕರ್ತರ ತಾಲೂಕ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಮೂದ್ನೂರ್ ಹಾಗೂ ಪತ್ರಿಕ ಬಳಗ ಹರ್ಷ ವ್ಯಕ್ತಪಡಿಸಿದೆ.

## ಮಹತ್ವಾಕಾಂಕ್ಷೆ ಜಿಲ್ಲೆ ಮತ್ತು ಬ್ಲಾಕ್ ಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಕ್ರಮ -ಬಂಡಿ ಸಂಜಯ್ ಕುಮಾರ



(ಎಂ.ರಫೀಕ್ ಪಟೇಲ್)

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ,ಡಿ.28-ದೇಶದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆ ಮತ್ತು ಬ್ಲಾಕ್‌ಗಳಲ್ಲಿ ಸುಸ್ಥಿರ ಅಭಿವೃದ್ಧಿಪಡಿಸಿ ಹಿಂದುಳಿವಿಕೆ ಹೋಗಲಾಡಿಸುವುದೇ ನಮ್ಮ ಸರ್ಕಾರದ ಉದ್ದೇಶವಾಗಿದೆ ಎಂದು ಕೇಂದ್ರದ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ ಕುಮಾರ ಹೇಳಿದರು.

ಗುರುವಾರಯಾದಗಿರಿತಾಲೂಕಿನ ಬಳಿಚಕ್ರ ಗ್ರಾಮಕ್ಕೆ ಭೇಟಿ ನೀಡಿ ಇಲ್ಲಿನ ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿಅವರುಮಾತನಾಡಿದರು.

ಕೃಷಿ, ಶಿಕ್ಷಣ, ಆರೋಗ್ಯ, ನೀರಾವರಿ,ಮೂಲಸೌಕರ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕೌಶಲ್ಯ ಕ್ಷೇತ್ರದಲ್ಲಿ ತೀರಾ ಹಿಂದುಳಿದ ದೇಶದ 112 ಜಿಲ್ಲೆ ಮಹತ್ವಾಕಾಂಕ್ಷೆ ಜಿಲ್ಲೆ ಮತ್ತು 500 ತಾಲೂಕುಗಳನ್ನು ಬ್ಲಾಕ್ ಎಂದು ವಿಂಗಡಿಸಿ ಇಲ್ಲಿ ರಾಜ್ಯ-ಕೇಂದ್ರಸರ್ಕಾರದಯೋಜನೆಗಳು ಪರಿಣಾಮಕಾರಿ ಅನುಷ್ಠಾನ ತರುವ ಮೂಲಕ ಸುಸ್ಥಿರ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ ಎಂದರು.

ಇದಕ್ಕುಮುನ್ನನೆರೆದಮಕ್ಕಳನ್ನು ಭವಿಷ್ಯದಲ್ಲಿಏನಾಗುತ್ತಿರಿಎನ್ನುತ್ತಲೆ ಸಚಿವ ಬಂಡಿ ಸಂಜಯ ಕುಮಾರ ಸಂವಾದಆರಂಭಿಸಿದರು.ಕೆಲವರು ಐ.ಎ.ಎಸ್.,ಐ.ಪಿ.ಎಸ್.ಎನ್ನುತ್ತಾ ಕೈ ಎತ್ತಿದರು. 9ನೇ ತರಗತಿಯ ಮಲ್ಲಿಕಾರ್ಜುನ ತಾನು ಮುಂದೆ ಎಂ.ಎಲ್.ಎ. ಆಗಬೇಕೆಂದಾಗ ಪಕ್ಕದಲ್ಲಿ ಕೂತಿದ್ದ ಶಾಸಕ ಶರಣಗೌಡ ಕಂದಕೂರ ಅವರಿಗೆ ಇವರೇ ನಿಮ್ಮ ಮುಂದಿನ ಎದುರಾಳಿ ಎಂದು ಸಚಿವರು ಹಾಸ್ಯ ಚಟಾಕಿ ಹಾರಿಸಿದರು. ಮಧ್ಯಾಹ್ನಬಿಸಿಯೂಟ ಸರಿಯಾಗಿ ನೀಡಲಾಗುತ್ತಿದಿಯೇ? ಎಂದು ಮಕ್ಕಳನ್ನುಪ್ರಶ್ನಿಸಿದಾಗ ಊಟ ಸರಿಯಾಗಿ ಕೊಡತ್ತಾರೆ, ಮೊಟ್ಟೆ ಸಹ ನೀಡಲಾಗುತ್ತದೆ ಎಂದು ಮಕ್ಕಳು ಉತ್ತರಿಸಿದರು.

ನಂತರ ಶಾಲಾ ಮಕ್ಕಳು ತಮ್ಮ ಶಾಲೆಗೆ ಆರ್.ಓ.ಪ್ಲ್ಯಾಂಟ್ ಬೇಕು, ಖಾಯಂ ಶಿಕ್ಷಕರ ಕೊರತೆ ಇದೆ, ಸಂಸ್ಕೃತಿಕ ವೇದಿಕೆ ದೊಡ್ಡದು ಮಾಡಬೇಕು,ನಾಲ್ಕುಕೊಠಡಿಗಳು ಮಳೆಗೆ ಸೋರುತ್ತಿದ್ದು, ದುರಸ್ತಿ ಮಾಡಬೇಕು, ಕಂಪ್ಯೂಟರ್ ಬೇಕು, ಎಸ್.ಎಸ್.ಎಲ್.ಸಿ. ಸೆಂಟರ್ ಇರುವುದರಿಂದ ಎರಡ್ಮೂರು ಕೊಠಡಿ ಹೊಸದಾಗಿ ನಿರ್ಮಿಸಬೇಕು ಎಂಬಿತ್ಯಾದಿ ಬೇಡಿಕೆ ಮುಂದಿಟ್ಟರು. ನಂತರ ಸಾರ್ವಜನಿಕರು ಸಹ ಶಾಲೆಗೆ ಕಂಪೌಂಡ್, ಗ್ರಾಮದಲ್ಲಿ ರಸ್ತೆ, ಚರಂಡಿ, ಆಸ್ಪತ್ರೆ ಸಿಬ್ಬಂದಿ ಸಮಸ್ಯೆ ಬಗ್ಗೆ ಸಚಿವರ ಬಳಿ ಹೇಳಿಕೊಂಡರು.

ನಂತರ ಸಚಿವ ಬಂಡಿ ಸಂಜಯ್ ಕುಮಾರ್ ಮಾತನಾಡಿ ಕೂಡಲೆ ಶಾಲಾ ಕೊಠಡಿ ದುರಸ್ತಿ ಕಾರ್ಯ ಮಾಡಿಸಬೇಕು. ಮುಂದಿನ ಮಾರ್ಚ್ ನಲ್ಲಿ ಮತ್ತೆ ಬರುವೆ ಅಷ್ಟರೊಳಗೆ ಕೆಲಸ ಮುಗಿಸಬೇಕೆಂದ ಅವರು, ಶಾಲೆಯ ಇನ್ನಿತರ ಸಮಸ್ಯೆಗಳನ್ನು ಬಗೆಹರಿಸಲಾಗುವುದೆಂದು ಭರವಸೆ ನೀಡಿದರು.

ಮಕ್ಕಳು ಹೇಳಿಕೊಂಡ ಸಮಸ್ಯೆಗಳಿಗೆ ಶಾಸಕ ಶರಣಗೌಡ ಕಂದಕೂರ ಅವರು ಉತ್ತರಿಸುತ್ತಾ, ಅಕ್ಷರ ಆವಿಷ್ಕಾರ ಯೋಜನೆಯಡಿ ಪ್ರಸಕ್ತ ವರ್ಷ 50 ಶಾಲೆಗಳಲ್ಲಿ ಮೂಲಸೌಕರ್ಯ ಅವೃದ್ಧಿಪಡಿಸಲಾಗುತ್ತಿದ್ದು,ಅದರಲ್ಲಿ ಬಲಿಚಕ್ರ ಶಾಲೆ ಸಹ ಸೇರಿದೆ. ಮುಂದಿನ ಮಾರ್ಚ್-ಏಪ್ರಿಲ್ ವರೆಗೆ ಖಾಯಂ ಶಿಕ್ಷಕರು ಬರಲಿದ್ದಾರೆ. ಶಾಲೆಗೆ ಆರ್.ಓ ಪ್ಲ್ಯಾಂಟ್, ಸಾಂಸ್ಕೃತಿಕ ವೇದಿಕೆ ವಿಸ್ತರಣೆ, ಶಾಲಾ ಕೊಠಡಿ ದುರಸ್ತಿ ಮತ್ತು ಹೊಸದಾಗಿ ನಿರ್ಮಾಣಕ್ಕೆಕೂಡಲೆ ಅಂದಾಜು ಪಟ್ಟಿ ನೀಡುವಂತೆ ಡಿ.ಡಿ.ಪಿ.ಐ ಅವರಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಡಾ.ಸುಶೀಲಾ ಬಿ. ಪ್ರಸ್ತಾವಿಕವಾಗಿ ಮಾತನಾಡಿ,ನೀತಿ ಆಯೋಗದ ಮಹತ್ವಾಕಾಂಕ್ಷೆಯ ಯಾದಗಿರಿ ಜಿಲ್ಲೆಯಲ್ಲಿ 5-6 ಅಂಶಗಳಲ್ಲಿ ರಾಜ್ಯ ಕೇಂದ್ರ ಸರ್ಕಾರದಯೊಜನೆಶೇ.100ರಷ್ಟು ಅನುಷ್ಠಾನಕ್ಕೆ ತರಲಾಗಿದೆ. ವಡಗೇರ ಬ್ಲಾಕ್ ನಲ್ಲಿ 6 ರಲ್ಲಿ 5 ಅಂಶಗಳಲ್ಲಿ ಪ್ರಗತಿ ಸಾಧಿಸಿದ ಪರಿಣಾಮ ಕೇಂದ್ರ ಸರ್ಕಾರದಿಂದ 9 ಕೋಟಿ ರೂ. ಅನುದಾನ ಜಿಲ್ಲೆಗೆ ಬಂದಿದೆ. ಇದನ್ನು ಸಮರ್ಪಕವಾಗಿ ಬಳಸಿಕೊಂಡು ಜಿಲ್ಲೆಯ 94 ಶಾಲೆಗೆ ವಿಜ್ಞಾನ ಮತ್ತು ಗಣಿತ ಪ್ರಯೋಗಶಾಲೆ ಆರಂಭಿಸಿದೆ. ಜಿಲ್ಲೆಯ ಸಾಕ್ಷರತೆ ಶೇ.52 ಇರುವ ಕಾರಣ ಹೆಚ್ಚು ಮಕ್ಕಳಿರುವ ಪ್ರೌಢ ಶಾಲೆಯಲ್ಲಿ ಗ್ರಂಥಾಲಯ ಸ್ಥಾಪಿಸಿ ಮಕ್ಕಳಿಗೆ ಉಚಿತ ಶೈಕ್ಷಣಿಕ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕಗಳನ್ನು ಒದಗಿಸುವ ಮೂಲಕ ಸಾಕ್ಷರತೆ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಗ್ರಂಥಾಲಯ ವೀಕ್ಷಣೆ:ಇದಕ್ಕು ಮುನ್ನ ಶಾಲೆಯ ಗ್ರಂಥಾಲಯವನ್ನು ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಅವರೊಂದಿಗೆ ಸಚಿವ ಬಂಡಿ ಸಂಜಯ ಕುಮಾರ ಅವರು ವೀಕ್ಷಿಸಿ ಅಲ್ಲಿ ಲಭ್ಯವಿರುವ ಪುಸ್ತಕಗಳ ಕುರಿತು ಶಾಲಾ ಮಕ್ಕಳಿಂದಲೆ ಮಾಹಿತಿ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರ ಆಪ್ತ ಕಾರ್ಯದರ್ಶಿ ವಂಶಿ, ಜಿಲ್ಲಾ ಪಂಚಾಯತ್ ಸಿ.ಇ.ಓ ಲವೀಶ್ ಓರಡಿಯಾ, ಎಸ್.ಪಿ.ಪೃತ್ವಿಕ್ ಶಂಕರ್, ಸಹಾಯಕ ಅಯುಕ್ತ ಹಂಪಣ್ಣ ಸಜ್ಜನ್,ಡಿ.ಎಚ್.ಓ ಡಾ.ಮಹೇಶ ಬಿರಾದಾರ,ಡಿ.ಡಿ.ಪಿ.ಐ ಚನ್ನಬಸಪ್ಪ ಮುಧೋಳ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವೀರನಗೌಡ, ಪಶುಪಾಲನಾ ಇಲಾಖೆ ಉಪನಿರ್ದೇಶಕ ಡಾ.ರಾಜು ದೇಶಮುಖ,ಯಾದಗಿರಿ ತಹಶೀಲ್ದಾರ ಸುರೇಶ ಅಂಕಲಗಿ, ಸಹಾಯಕ ಕೃಷಿ ನಿರ್ದೇಶಕ ರಾಜಕುಮಾರ, ತಾಲೂಕಾ ಆರೋಗ್ಯಾಧಿಕಾರಿ ಡಾ.ಹಣಮಂತರೆಡ್ಡಿ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ವಿ.ಪಾಟೀಲ, ಸಿ.ಡಿ.ಪಿ.ಓ ವನಜಾಕ್ಷಿ,ತಾಲೂಕಾ ಪಂಚಾಯತ್ ಮಾಜಿ ಸದಸ್ಯ ಸಣ್ಣ ಹಣಮಂತ ಬೋಯಿನ್, ಎಸ್.ಡಿ.ಎಂ.ಸಿ ಅಧ್ಯಕ್ಷ ಸಿದ್ರಾಮಪ್ಪ ಬೋಯಿನ್, ಪ್ರೌಢ ಶಾಲೆಯ ಮುಖ್ಯಗುರು ಅನ್ನಪೂರ್ಣ ಬಂಡಾರಕರ್, ಸಹ ಶಿಕ್ಷಕರಾದ ಬನ್ನಪ್ಪ ಮೈಲಾಪುರ, ಚಂದ್ರಶೇಖರ, ರಂಗಮ್ಮ, ಅನುಸೂಯಾದೇವಿ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಮಕ್ಕಳಿದ್ದರು. ಶಿಕ್ಷಕ ವಿನೋದ ಕುಮಾರ ಸ್ವಾಗತಿಸಿದರು.

## ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯದಲ್ಲಿ ಗಣಿತಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್ ಜನ್ಮದಿನೋತ್ಸವ

ಮಲ್ಲಮ್ಮ ನುಡಿ ವಾರ್ತೆ

ಬೀದರ : 28ನೇ ಡಿಸೆಂಬರ್ 2024 ನಗರದ ಹೈ.ಕ.ಶಿ. ಸಂಸ್ಥೆಯ ಬಿ.ವಿ. ಭೂಮರಡ್ಡಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಪಿ. ವಿಠ್ಠಲ ರಡ್ಡಿಯವರ ಅಮೃತ ಹಸ್ತದಿಂದಸಸಿಗೆನೀರೆರೇಯುವುದರ ಮುಖಾಂತರ ಕಾರ್ಯಕ್ರಮ ಉದ್ಘಾಟಿಸಿದರು.




ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ. ಹೇಮಾ ಪಾಟೀಲಯವರು ಮಾತನಾಡುತ್ತಾ ವಿಶ್ವದಾದ್ಯಂತ ಗಣಿತದ ಸೂತ್ರಗಳು ಎಲ್ಲಾ ಕ್ಷೇತ್ರಗಳಲ್ಲಿ ವಿಶೇಷವಾಗಿ ಶೇರು ಮಾರುಕಟ್ಟೆಯಲ್ಲಿ ಸಂಖ್ಯೆಗಳ ಮುಖಾಂತರ ಇವತ್ತಿನ ಹಣದ ಮೌಲ್ಯವನ್ನು ಎತ್ತಿಹಿಡಿಯುತ್ತವೆ. ಅನಂತ ಸರಣಿಗಳು, ಸಂಖ್ಯಾ ಸಿದ್ಧಾಂತ, ವಿಭಜನೆಯ ಸಿದ್ಧಾಂತ, ಸಂಕಿರಣ ವಿಶ್ಲೇಷಣೆ ಮುಂತಾದ ಗಣಿತ ಕ್ಷೇತ್ರಗಳಲ್ಲಿ ರಾಮಾನುಜಂ ನೀಡಿದ ಕೊಡುಗೆ ಅಪಾರವಾಗಿದೆ ಎಂದು ಮಾರ್ಮಿಕವಾಗಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದಘನಅಧ್ಯಕ್ಷತೆಯನ್ನು ವಹಿಸಿದ ಮಹಾವಿದ್ಯಾಲಯದ ಉಪ ಪ್ರಾಂಶುಪಾಲರಾದ ಶ್ರೀ ಅನೀಲಕುಮಾರ ಅಣದೂರೆಯವರು ಮಾತನಾಡುತ್ತಾ ದೇಶದ ಖ್ಯಾತಿಯನ್ನು ವಿಶ್ವದ ಎತ್ತರಕ್ಕೆ ಪಸರಿಸಿದ ಹೆಸರಿಗೆ ಪಾತ್ರರಾಗಿರುವ ರಾಮಾನುಜನ್ ತಮ್ಮ ನಿಜಜೀವನದಲ್ಲಿ ಎಷ್ಟೇ ಕಷ್ಟಗಳು ಬಂದರು ಅವುಗಳನ್ನು ಎದುರಿಸಿ ತಮ್ಮ ಜೀವನದಲ್ಲಿ ಸಂಖ್ಯೆಗಳ ಮಹತ್ವದ ಬಗ್ಗೆ ವಿಶ್ವಕ್ಕೆ ತೋರಿಸಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ ಹಾಗೂ ಇವರು ಸಂಖ್ಯೆಗಳ ಸಿದ್ಧಾಂತದ ಸಂಶೋಧನೆಗಳಿಗಾಗಿ ಪ್ರತಿಷ್ಠಿತ ರಾಯ್ ಸೂಸೈಯಿಟಿ ಫೇಲೋ ಆಗಿ ರಾಮಾನುಜಂ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳು ಇವರ ಜೀವನ ಚರಿತ್ರೆಯಿಂದ ಲಾಭ ಪಡೆದುಕೊಂಡು ತಾವು ಸಹ ರಾಮಾನುಜನ್ ಅವರಂತೆ ವಿಶ್ವಕ್ಕೆ ಭಾರತದ ಖ್ಯಾತಿಯನ್ನು ತರಲು ಪ್ರಯತ್ನಿಸಬೇಕೆಂದು ಕರೆಕೊಟ್ಟರು.

ಗಣಿತ ದಿನದ ಅಂಗವಾಗಿ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿತ್ತು ಈ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ಹಾಗೂ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದ ಆರಂಭದಲ್ಲಿ ಪ್ರಾಸ್ತಾವಿಕನುಡಿಯನ್ನು ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಸಾಮ್ರಾಟ ನಡೆಸಿಕೊಟ್ಟರೆ, ವೇದಿಕೆಯ ಮೇಲೆ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗ ಅವರು ಹಾಗೂ ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳಾದ ಡಾ. ಮಲ್ಲಿಕಾರ್ಜುನ ಕೋಟೆ ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಕು: ನಾಗಾಂಬಿಕಾ ಬಿ.ಎಸ್ಸಿ.5ನೇ ಸೆಮಿಸ್ಟರ ಪ್ರಾರ್ಥನೆಗೀತೆ ಹಾಡಿದರೆ, ಸ್ವಾಗತವನ್ನು ಪ್ರಾಧ್ಯಾಪಕರಾದ ಶ್ರೀ ನೀಲಕಂಠ ಶೆಟಕಾರ ನಡೆಸಿಕೊಟ್ಟರೆ, ಕು.ಕಾಜಲ್ ಕಿರಣ ರಾಠೋಡ್ ಬಿ.ಎಸ್ಸಿ. 5ನೇ ಸೆಮಿಸ್ಟರ್ ವಿದ್ಯಾರ್ಥಿನಿ ನಿರೂಪಿಸಿದರೆ, ಶ್ರೀಮತಿ ಸಪ್ನಾ ಪಾಟೀಲ ವಂದಿಸಿದರು.

ಕಾರ್ಯಕ್ರಮದಲ್ಲಿಮಹಾವಿದ್ಯಾಲಯದ ಎನ್.ಎಸ್.ಎಸ್., ಎನ್.ಸಿ.ಸಿ. ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಪ್ರಾಧ್ಯಾಪಕರು ಹಾಗೂ ಬೋಧ-ಕೇತರ ಸಿಬ್ಬಂದಿಗಳು ಹಾಜರಿದ್ದರು.

## ಬಡ ಪ್ರತಿಭಾವಂತ ಮಕ್ಕಳ ಜೀವನ ಸಾಧನೆಗೆ ನಾಗರಿಕರು ಸಹಕರಿಸಬೇಕು:ಕುಂಬಾರ



(ಶಿವಕುಮಾರ ಬಿರಾದಾರ)

ಮಲ್ಲಮ್ಮ ನುಡಿ ವಾರ್ತೆ

ಔರಾದ ತಾಲೂಕಿನ ಎಕಲಾರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಇತ್ತಿಚೆಗೆ ರಿಶೈನ್ ಸಂಸ್ಥೆ ವತಿಯಿಂದ ಶಾಲಾ ಮಕ್ಕಳಿಗೆ ಸ್ವೆಟರ್‌ಗಳು ಹಾಗೂ ಬಟ್ಟೆಗಳು ವಿತರಣೆ ಮಾಡಿ ಮಾತನಾಡಿದರು.

ಜಿಲ್ಲೆಯ ಗಡಿ ಭಾಗದ ಶಾಲೆಯ ಮಕ್ಕಳು ಪ್ರತಿಭಾವಂತರಾಗಿದ್ದು, ಅವರಿಗೆ ನೆರವಿನ ಹಸ್ತ ಬೇಕಾಗಿದೆ. ಪ್ರತಿಭಾವಂತ ಮಕ್ಕಳ ಏಳ್ಗೆಗೆ ಸಮುದಾಯದ ಪ್ರತಿಯೊಬ್ಬ ಜವಾಬ್ದಾರಿ ವ್ಯಕ್ತಿ ಸಹಕಾರ ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು.

ರಿಶೈನ್ ಸಂಸ್ಥೆ ಕಳೆದ ಎಂಟು ವರ್ಷಗಳಿಂದ ನಿರಂತರ ಒಂದಿಲ್ಲೊಂದು ಸಮಾಜಮುಖಿ ಕೆಲಸ ಕಾರ್ಯಗಳು ಮಾಡುತ್ತ ಜನಸಾಮಾನ್ಯರ ಹೃದಯ ಗೆಲ್ಲುವ ಕೆಲಸ ಮಾಡುತ್ತಲಿದೆ. ಸಂಸ್ಥೆಯ ಕೆಲಸ ಕಾರ್ಯ ಅನುಕರಣೀಯ ಎಂದರು. ಸಂಸ್ಥೆ ಅಧ್ಯಕ್ಷ ರೋಹನ ಕುಮಾರ್ ಮಾತನಾಡಿ, ಮಕ್ಕಳು ಇಂದಿನಿಂದಲೆ ಒಳ್ಳೆಯ ನಡತೆ ರೂಢಿಸಿಕೊಂಡು ಬದುಕಬೇಕು. ಇಂದಿನ ಗುಣಗಳೇ ಭವಿಷ್ಯವನ್ನು ರೂಪಿಸಬಲ್ಲ ಮಾರ್ಗದರ್ಶಿ ಸೂತ್ರಗಳಾಗಿವೆ ಎಂದರು.

ಶಾಲೆಯ ಎಲ್‌ಕೆಜಿ, ಯುಕೆಜಿ ಮಕ್ಕಳಿಗೆ ಸ್ವೆಟರ್ ಹಾಗೂ ಇನ್ನುಳಿದ ತರಗತಿ ಮಕ್ಕಳಿಗೆ ಬಟ್ಟೆಗಳನ್ನು ಉಚಿತವಾಗಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ಪ್ರಭುರಾವ ಬಾಳೂರೆ, ಸಂಸ್ಥೆ ಸದಸ್ಯ ಅಜಯಕುಮಾರ್, ಸ್ಟೀಫನ್, ಶಿಕ್ಷಕರಾದ ಬಾಲಾಜಿ ಅಮರವಾಡಿ, ವೀರಶೆಟ್ಟಿ ಗಾದಗೆ, ಅಂಕುಶ ಪಾಟೀಲ್, ರೂಪಾ ಸೇರಿದಂತೆ ಇನ್ನಿತರರಿದ್ದರು.

## ರೇಷ್ಮೆ ಕೃಷಿಯಿಂದ ಉತ್ತಮ ಆದಾಯ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 28 ಮರಕಲ್ (ಜನವಾಡ):-ರೇಷ್ಮೆಕೃಷಿಯಿಂದ ರೈತರು ಉತ್ತಮ ಆದಾಯ ಪಡೆಯಬಹುದು ಎಂದು ರೇಷ್ಮೆ ಇಲಾಖೆಯ ಉಪ ನಿರ್ದೇಶಕ ರಾಜೇಂದ್ರಕುಮಾರ ಬಿ. ದೇವದುರ್ಗ ಹೇಳಿದರು.

ಬೀದರ್ ತಾಲ್ಲೂಕಿನ ಮರಕಲ್ ಗ್ರಾಮದ ರೇಷ್ಮೆ ಬೆಳೆಗಾರ ಮಹಮ್ಮದ್ ಸಲಾವೊದ್ದಿನ್ ಅವರ ಹಿಪ್ಪುನೇರಳೆ ತೋಟದಲ್ಲಿ ಗುರುವಾರ ನಡೆದ ಗುಂಪು ಚರ್ಚೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಎರಡು ಎಕರೆ ಹಿಪ್ಪುನೇರಳೆ ತೋಟ ಸ್ಥಾಪಿಸಿ, ವರ್ಷದಲ್ಲಿ 8 ರಿಂದ 10 ಬೆಳೆ ಬೆಳೆದು ರೂ.6 ಲಕ್ಷದಿಂದ ರೂ.7 ಲಕ್ಷ ಗಳಿಸಬಹುದು ಎಂದು ತಿಳಿಸಿದರು. ರೇಷ್ಮೆ ಬೆಳೆಯಲು ಇಲಾಖೆಯಿಂದ ಸಿಗುವ ಪ್ರೋತ್ಸಾಹ ಧನ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನೆರವಿನ ಬಗ್ಗೆಯೂ ಮಾಹಿತಿ ನೀಡಿದರು.

ರೇಷ್ಮೆ ಸಹಾಯಕ ನಿರ್ದೇಶಕ ಬಿ.ಜಿ. ಶೆಳಕೆ ಮಾತನಾಡಿ, ಬೇರೆ ಬೆಳೆಗಳಿಗೆ ಹೋಲಿಸಿದರೆ ರೇಷ್ಮೆ ಕಡಿಮೆ ಖರ್ಚಿನಲ್ಲಿ ಅಧಿಕ ಆದಾಯ ಪಡೆಯಬಹುದಾದ ಬೆಳೆಯಾಗಿದೆ. ಪ್ರಸ್ತುತ ರೇಷ್ಮೆ ದ್ವಿತಳಿ ಗೂಡಿಗೆ ಕೆ.ಜಿ.ಗೆ.ರೂ.650 ರಿಂದ ರೂ.750 ಧಾರಣೆ ಇದೆ ಎಂದು ತಿಳಿಸಿದರು. ಕೇಂದ್ರ ರೇಷ್ಮೆ ಮಂಡಳಿಯ ಬೀದರ್ ಕಚೇರಿ ವಿಜ್ಞಾನಿಗಳಾದ ಡಾ. ಶ್ರೀನಿವಾಸ್, ನಿರಂಜನ್ ಮೂರ್ತಿ ಅವರು ಹಿಪ್ಪುನೇರಳೆ ತೋಟದ ನಿರ್ವಹಣೆ, ರೋಗ ನಿಯಂತ್ರಣ ಕುರಿತು ವಿವರಿಸಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಈಶ್ವರಮ್ಮ ಬಸವರಾಜ ಅಧ್ಯಕ್ಷತೆ ವಹಿಸಿದ್ದರು. ರೇಷ್ಮೆ ಇಲಾಖೆಯ ಅಧಿಕಾರಿ ಕಿರಣ ಬಲ್ಲೂರೆ, ರೈತ ಸಂಘದ ಜಿಲ್ಲಾ ಘಟಕದ ಉಪಾಧ್ಯಕ್ಷ ಶಂಕರೆಪ್ಪ ಪಾರಾ, ಗ್ರಾಮ ಘಟಕದ ಅಧ್ಯಕ್ಷ ಬಸಪ್ಪ, ಮುಖಂಡ ಎಂ.ಡಿ.ಲೈಕೊದ್ದಿನ್ ಇದ್ದರು.

## ಕಮಲನಗರ:ಗೋಲ್ಡನ ವ್ಯಾಲಿ ಇಂಟರ್ನ್ಯಾಷನಲ ಶಾಲೆಯಲ್ಲಿ ಅಪರಾಧ ತಡೆ ಕಾರ್ಯಕ್ರಮ



(ಪರಮೇಶ ರಾಂಪುರೆ)

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಪಟ್ಟಣದ ಹೊರ ವಲಯದಲ್ಲಿ ಇರುವ ದಿ ಗೋಲ್ಡನ ವ್ಯಾಲಿ ಇಂಟರ್ನ್ಯಾಷನಲ ಸ್ಕೂಲನಲ್ಲಿ ಶನಿವಾರ ಕಮಲನಗರ ಪೋಲಿಷ ಠಾಣೆವತಿಯಿಂದ ಮಕ್ಕಳಿಗೆ ಕಾನೂನು ಅರಿವು ಮತ್ತು ಅಪರಾಧಗಳನ್ನು ಹೇಗೆ ತಡೆಯಬೇಕೆಂದು ಮಾಹಿತಿ ಕಾರ್ಯಕ್ರಮ ನಡೆಯಿತು.

ವೃತ್ತ ಪೊಲೀಸ ನಿರೀಕ್ಷರಾದ (ಸಿ.ಪಿ.ಐ) ಅಮರಪ್ಪ ಶಿವಬಲ್ ಮಾತನಾಡಿ, ಅಪರಿಚಿತರು ಯಾವುದೇ ತಿನ್ನಿಸು ಕೊಟ್ಟರೆ ತೆಗೆದುಕೊಳ್ಳಬಾರದು, ಅವರು ನಿಮ್ಮಗೆ ಕಿಡ್ನಾಪ ಮಾಡುವ ಸಂಭವ ಇರುತ್ತದೆ. ರಸ್ತೆ ಮೇಲೆ ಬೈಕ ಮೇಲೆ ಹೋಗುವಾಗ ನಿಮ್ಮ ಪಾಲಕರಿಗೆ ತಪ್ಪದೇ ಹೆಲ್ಮೆಟ ಧರಿಸಲು ಹೇಳಿ, ಇದರಿಂದ ನಿಮ್ಮ ಜೀವ ಸುರೇಕ್ಷತೆ ಇರಿತ್ತದೆ ಎಂದು ಹೇಳಿದರು.

ಪೊಲೀಸ್ ಸಬ್ ಇನ್ಸ್‌ಪೆಕ್ಟರ (ಪಿ.ಎಸ್.ಐ) ಚಂದ್ರಶೇಖರ ನಿರ್ಣೆ ಅವರು ಮಾತನಾಡಿ, ಪೊಲೀಸ ಅಂದ್ರೇ ಯಾರು ಭಯ ಪಡಬೇಕಾಗಿಲ್ಲ, ಪೊಲೀಸರರು ಸಮಾಜ ರಕ್ಷರು, ಪ್ರತಿ ವರ್ಷ ಡಿಸೆಂಬರ ತಿಂಗಳಲ್ಲಿ ಮಕ್ಕಳಿಗೆ ಈ ತರಹ ಕಾನೂನು ಅರಿವು ಮೂಡಿಸುವ ಕಾರ್ಯಕ್ರಮ ಮಾಡುತ್ತೇವೆ ಎಂದರು.

18 ವರ್ಷ ಆಗದೆ ಚಿಕ್ಕ ಮಕ್ಕಳು ಬೈಕಗಳನ್ನು ಹೊಡಿಸುವಂತಿಲ್ಲ ಒಂದು ವೇಳೆ ನೀವು ಹೀಗೆ ಮಾಡಿದರೆ. ನಿಮ್ಮಗೆ ದಂಡ ಮತ್ತು ಕಾನೂನು ಪ್ರಕಾರ ಶಿಕ್ಷೆಗೆ ಒಳಗಾಗುತ್ತೀರಿ ಎಂದು ಮಕ್ಕಳಿಗೆ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಶಾಲೆಯ ಅಧ್ಯಕ್ಷರಾದ ಜಯಶ್ರೀ ಬಿರಾದಾರ ಮೇಡಂ, ಮುಖ್ಯ ಶಿಕ್ಷಕ ಶರಣು ಸರ, ವಿವೇಕ ಸರ್ , ಲೋಕೇಶ ಸರ್ , ಜಯಕುಮಾರ ಸರ, ಬಸವಅಂಬಿಕಾ ಮೇಡಂ , ವಿಜಯಲಕ್ಷ್ಮಿ ಮೇಡಂ ಸೇರಿದಂತೆ ಶಿಕ್ಷಕರು ಮತ್ತು ಶಾಲೆ ಮಕ್ಕಳ ಇದ್ದರು.

## ಜನವರಿ 5ರವರೆಗೆ ಅಂಗನವಾಡಿ ಕಾರ್ಯಕರ್ತೆ ಹಾಗು ಅಂಗನವಾಡಿ ಸಹಾಯಕಿಯರ ಅಸ್ಪಷ್ಟ ಅರ್ಜಿಗಳು ಪುನ ಸಲ್ಲಿಸಲು ಕೊನೆಯ ಅವಕಾಶ ಸಿಡಿಪಿಓ ಇಮಾಲಪ್ಪ ಡಿ.ಕೆ

(ಶಿವಕುಮಾರ ಬಿರಾದಾರ)

ಮಲ್ಲಮ್ಮ ನುಡಿ ವಾರ್ತೆ

ಔರಾದ ಮತ್ತು ಕಮಲ ನಗರ ತಾಲೂಕಿನ ಸಂತಪೂರ ಶಿಶು ಅಭಿವೃದ್ಧಿ ಕಚೇರಿ ವ್ಯಾಪ್ತಿಯಲ್ಲಿ ವಿವಿಧ ಗ್ರಾಮ ಪಂಚಾಯತಿಯ ಹಳ್ಳಿಗಳಲ್ಲಿ ಮತ್ತು ಪಟ್ಟಣ ಪಂಚಾಯತ್ ಗಳಲ್ಲಿ ವಿವಿಧ ಕಾರಣಗಳಿಂದ ಒಟ್ಟು ಅಂಗನವಾಡಿ ಕಾರ್ಯಕರ್ತೆ ಹುದ್ದೆಗಳು 36 ಸಹಾಯಕ ಹುದ್ದೆಗಳು 44 ಒಟ್ಟು 80 ಹುದ್ದೆಗಳಿಗೆ ದಿನಾಂಕ:12/01/2024 ರಿಂದ 12/02/2024 ರವರೆಗೆ ಅರ್ಜಿ ಸಲ್ಲಿಸಲು ಈ ವೆಬ್‌ಸೈಟ್ ನಲ್ಲಿ https.//karnemakaone.kar.nic.in/abcd/ ನೀಡಲಾಯಿತು. ಅರ್ಜಿ ಸಲ್ಲಿಕೆಗೆ ಒಟ್ಟು 4 ಹಂತಗಳಲ್ಲಿದ್ದು, ಇದರಲ್ಲಿ ಕೆಲವು ಅರ್ಜಿದಾರರಿಗೆ 1ನೇ ಹಂತದಲ್ಲಿಯೇ ಂಠಿಠಿಟುಛಿಚಿ-ಣುಂಟ ಖಣಛಿಛಿಜಜಿಣಟಟಥಿ ಣಠಿಟಂಜಜಜ ಎಂಬ ಸಂದೇಶಗಳು ಅರ್ಜಿದಾರರ ಮೊಬೈಲ್‌ಗೆ ಸ್ವೀಕೃತವಾಗಿರುವುದರಿಂದಅರ್ಜಿಗಳನ್ನು ಪೂರ್ಣಗೊಳಿಸಿರುವುದಿಲ್ಲ. ಇಂತಹ ಅರ್ಜಿದಾರರಿಗೆ



ದಿನಾಂಕ:20/12/2024 ರ ಸರಕಾರದ ಆದೇಶದಲ್ಲಿ ಅರ್ಜಿ ಸಲ್ಲಿಸುವ 4 ಹಂತಗಳನ್ನು ಪೂರ್ಣಗೊಳಿಸದೆ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ದಿನಾಂಕ:26/12/2024 ರಿಂದ 05/01/2025ರ ವರೆಗೆ ႇಣಣಠಿ://ಇಚಿಡಿಟಿಜಟಚಿಇಚಿಂಟಜ. ಇಚಿಡಿ.ಟುಛಿ.ಟಿ/ಚಿಛಛಿಜ/4 ಇಲಾಖಾ ವತಿಯಿಂದ ಅವಕಾಶ ನೀಡಿ ಆದೇಶಿಸಲಾಗಿರುತ್ತದೆ. ಆದರಿಂದ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಪೂರ್ಣಗೊಳಿಸಲು ದಿನಾಂಕ:26/12/2024 ರಿಂದ 05/01/2025ರ ವರೆಗೆ ಕಾಲಾವಕಾಶ ನಿಗಧಿ ಪಡಿಸಿದೆ.

ಅಭ್ಯರ್ಥಿಗಳು ಅರ್ಜಿಯನ್ನು ಈ ಕೆಳಗಿನ 4 ಹಂತಗಳಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ.

ಒಂದನೇ ಹಂತ-ಆನ್‌ಲೈನ್ ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿ ಭರ್ತಿ ಮಾಡುವುದು.2. ಎರಡನೇ ಹಂತ ತಮ್ಮ ಭಾವ ಚಿತ್ರ ಮತ್ತು ಸಹಿಯನ್ನು ಅಪಲೋಡ ಮಾಡುವುದು.3. ಮೂರನೇ ಹಂತ ತಮ್ಮ ದಾಕಲಾತಿಗಳನ್ನು ಅಪ್ ಲೋಡ್ ಮಾಡುವುದು.4. ನಾಲ್ಕನೇ ಹಂತ - ತಮ್ಮ ಆಧಾರ ಸಂಖ್ಯೆ ನಮೂದಿಸಿ ಇ-ಹಸ್ತಾಕ್ಷರ ದೊಂದಿಗೆ ಅರ್ಜಿಯನ್ನು ಪೂರ್ಣಗೊಳಿಸುವುದು.

ಅಪೂರ್ಣ ಅರ್ಜಿಗಳ ಅರ್ಜಿ ಸಂಖ್ಯೆ ಹಾಗೂ ಇತರೆ ವಿವರಗಳನ್ನೊಳಗೊಂಡ ಮಾಹಿತಿಯು ಸಂತಪುರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಸೂಚನಾ ಫಲಕದಲ್ಲಿ ಲಭ್ಯವಿದ್ದು, ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ: 7338035254 ಗೆ ಸಂಪರ್ಕಿಸಬಹುದಾಗಿದೆ.

## ಯಾದಗಿರಿ ತಾಲೂಕಿನ ಅಂಗನವಾಡಿ ಕಾರ್ಯಕರ್ತೆ-ಸಹಾಯಕಿಯರ ನೇಮಕಾತಿ : ಜನವರಿ 5 ರೊಳಗೆ ಪೂರ್ಣ ಅರ್ಜಿ ಸಲ್ಲಿಸಲು ಅವಕಾಶ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಡಿಸೆಂಬರ್ 28- ಯಾದಗಿರಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿನ ಖಾಲಿ ಇರುವ 17 ಅಂಗನವಾಡಿ ಕಾರ್ಯಕರ್ತೆ ಹಾಗೂ 37 ಅಂಗನವಾಡಿ ಸಹಾಯಕಿಯರ ಗೌರವ ಸೇವೆ ಹುದ್ದೆಗಳಿಗೆ ಕಳೆದ ಆಗಸ್ಟ್ 13 ರಂದು ಅಧಿಸೂಚನೆ ಹೊರಡಿಸಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ತಾಂತ್ರಿಕ ಸಮಸ್ಯೆ ಕಾರಣ ಅರ್ಜಿಯ ನಾಲ್ಕು ಹಂತ ಪೂರ್ಣಗೊಳಿಸದ ಅಭ್ಯರ್ಥಿಗಳಿಗೆ ಮಾತ್ರ ಸರ್ಕಾರದ ನಿರ್ದೇಶನದಂತೆ ಪೂರ್ಣವಾಗಿ ಅರ್ಜಿ ಸಲ್ಲಿಸಲು ಇದೀಗ ಅವಕಾಶ ನೀಡಲಾಗಿದೆ ಎಂದು ಯಾದಗಿರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ವನಜಾಕ್ಷಿ ಅವರು ತಿಳಿಸಿದ್ದಾರೆ.

ಆನ್‌ಲೈನ್ ತಂತ್ರಾಂಶದಲ್ಲಿ ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿ ಭರ್ತಿ, ಭಾವಚಿತ್ರ ಮತ್ತು ಸಹಿ, ದಾಖಲಾತಿಗಳನ್ನು ಅಪ್‌ಲೋಡ್ ಮಾಡುವುದು ಹಾಗೂ ಕೊನೆಯದಾಗಿ ಆಧಾರ ಸಂಖ್ಯೆ ನಮೂದಿಸಿ ಇ-ಹಸ್ತಾಕ್ಷರದೊಂದಿಗೆ ಹೀಗೆ 4 ಹಂತದಲ್ಲಿ ಅರ್ಜಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗೆ 231 ಹಾಗೂ ಸಹಾಯಕಿಯರ ಹುದ್ದೆಗೆ 109 ಅಪೂರ್ಣ ಅರ್ಜಿಗಳು ತಾಲೂಕಿನಲ್ಲಿ ಸ್ವೀಕೃತವಾಗಿದ್ದು, ಇಂತಹ ಅಭ್ಯರ್ಥಿಗಳು ಇದೇ ಡಿ.26 ರಿಂದ 2025ರ ಜನವರಿ 5ರ ಸಂಜೆ 5.30 ಗಂಟೆಯೊಳಗೆ https://karnemakaone.kar.nic.in/abcd/ಪೂರ್ಣ ಅರ್ಜಿ ಸಲ್ಲಿಸಬೇಕು, ಅಂಗನವಾಡಿ ಕಾರ್ಯಕರ್ತೆ ಮತ್ತು ಅಂಗನವಾಡಿ ಸಹಾಯಕಿಯರ ನೇಮಕಾತಿಗೆ ಸಂಬಂಧಿಸಿದಂತೆ ಸೆಪ್ಟೆಂಬರ್ 13ಕ್ಕೆ ಕೊನೆಗೊಂಡ ಅರ್ಜಿ ಸಲ್ಲಿಸುವ ಕಾಲಾವಧಿ ಒಳಗೆ ಅರ್ಜಿ ಸಲ್ಲಿಸುವಾಗ ವೆಬ್‌ಸೈಟ್‌ನಲ್ಲಿ ಒಟ್ಟು 4 ಹಂತಗಳ ಪೈಕಿ ಕೆಲವರಿಗೆ ಮೊದಲನೇ ಹಂತದಲ್ಲಿಯೇ "ಅಪ್ಲಿಕೇಶನ್ ಸಕ್ಸಸಫುಲ್ ಅಪ್ಲೋಡೆಡ್" ಎಂಬ ಸಂದೇಶ ಮೊಬೈಲ್‌ಗೆ ಸ್ವೀಕೃತವಾಗಿರುವುದರಿಂದ ಈ ಅರ್ಜಿಗಳು ಪೂರ್ಣವಾಗಿ ಸಲ್ಲಿಕೆಯಾಗಿಲ್ಲ.ಹೆಚ್ಚಿನ ಮಾಹಿತಿಗಾಗಿ ಯಾದಗಿರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಣಕಾಸು ಸಂಸ್ಥೆಗಳ ಲೇವಾದೇವಿಗಾರರು, ಗಿರಿವಿದಾರರು ಲೈಸನ್ಸಗಳನ್ನು ನವೀಕರಣ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಡಿಸೆಂಬರ್ 28- ಯಾದಗಿರಿ ಉಪ ವಿಭಾಗದಲ್ಲಿ 2020-21ರಲ್ಲಿ ನೋಂದಾಣಿಯಾದ ಮತ್ತು ನವೀಕರಿಸಿದ ಎಲ್ಲಾ ಹಣಕಾಸು ಸಂಸ್ಥೆಗಳು ಮತ್ತು ಗಿರಿವಿದಾರರು ಹಾಗೂ ಲೇವದೇವಿಗಾರರು ಲೈಸೆನ್ಸಗಳನ್ನು 2025ರ ಎಪ್ರಿಲ್ 1 ರಿಂದ 2030ರ ಮಾರ್ಚ್ 31ರ ವರೆಗೆ ಅವಧಿಗಾಗಿ ನವೀಕರಣಗೊಳಿಸಲು ಅರ್ಜಿ ಆಹ್ವಾನಿಸಲಾಗಿದೆಎಂದು ಯಾದಗಿರಿ ಉಪ ವಿಭಾಗ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶೀಮಾ ಅವರು ತಿಳಿಸಿದ್ದಾರೆ. ಯಾದಗಿರಿ ಉಪ ವಿಭಾಗದಲ್ಲಿ 2020-21ರಲ್ಲಿ ನೊಂದಣಿಯಾದ ಮತ್ತು ನವೀಕರಿಸಿದ ಎಲ್ಲಾ ಹಣಕಾಸು ಸಂಸ್ಥೆಗಳ ಲೇವಾದೇವಿಗಾರರು ಮತ್ತು ಗಿರಿವಿದಾರರು ಲೈಸನ್ಸಗಳನ್ನು 2025ರ ಎಪ್ರಿಲ್ 1ರಿಂದ 2030ರ ಮಾರ್ಚ್ 31ರ ವರೆಗೆ ಅವಧಿಗಾಗಿ ನವೀಕರಣ ಅರ್ಜಿಗಳನ್ನು ಕರ್ನಾಟಕ ಮನಿಲೆಂಡಿಂಗ್ ಕಾಯ್ದೆ 1961 ನಿಯಮ 5(2) ರನ್ವಯ ಎಲ್ಲಾ ಅಗತ್ಯವಿರುವ ದಾಖಲಾತಿಗಳೊಂದಿಗೆ 2025ರ ಜನವರಿ 31ರ ಒಳಗೆ ಯಾದಗಿರಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ ಇಲ್ಲಿಗೆ ಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಳೆ ಬಳ್ಳಾರಿ ಸೊಸೈಟಿ ಚುನಾವಣೆದೊಡ್ಡನಗೌಡ ಕೆರಕೋಡಪ್ಪ ತಂಡದಿಂದ ಮತಯಾಚನೆ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:ಡಿ,28–ಇಲ್ಲಿನ ಬಳ್ಳಾರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ಸೊಸೈಟಿ)ಯ 8 ನಿರ್ದೇಶಕ ಸ್ಥಾನಗಳಿಗೆ ನಾಳೆ ಸೊಸೈಟಿಯ ಸಭಾಂಗಣದಲ್ಲಿ ಬೆಳಿಗ್ಗೆ 9. ರಿಂದ ಸಂಜೆ ನಾಲ್ಕರವರೆಗೆ ಮತದಾನ ನಡೆಯಲಿದ್ದು ಸಾಲಗಾರರ ಕ್ಷೇತ್ರದಲ್ಲಿ 751 ಮತ್ತು ಸಾಲಗಾರರಲ್ಲದ ಕ್ಷೇತ್ರ–ಕ್ಕೆ 106 ಮತದಾರರಿದ್ದಾರೆ. ಚುನಾವಣೆಯಲ್ಲಿಗೆಲುವುಸಾಧಿಸಲು ಹಾಲಿ ಅಧ್ಯಕ್ಷ ಬಿ.ಕೆ.ಕೆರಕೋಡಪ್ಪ ಮತ್ತು ಮಾಜಿ ಅಧ್ಯಕ್ಷ ಎಸ್. ದೊಡ್ಡನಗೌಡ ನೇತೃತ್ವದ ತಂಡ ಮತದಾರರ ಮನೆ ಮನೆಗಳಿಗೆ ತೆರಳಿ ಬಿರುಸಿನಿಂದ ಮತಯಾಚನೆ ನಡೆದಿದೆ.

**ಅವಿರೋಧ ಆಯ್ಕೆ:**

ಸೊಸೈಟಿಯಲ್ಲಿ ಒಟ್ಟು 12 ಸ್ಥಾನಗಳಿದ್ದು ಅವನ ಗಳ ಪೂಕಿಬ ನಾಲ್ಕು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿ. ಅವುಗಳೆಂದರೆ

ಒಬಿಸಿ ಬಿ) ನ ಒಂದು ಸ್ಥಾನಕ್ಕೆ ಮಾಜಿ ಅಧ್ಯಕ್ಷ ಮಿಂಚೇರಿಯ ಎಸ್. ದೊಡ್ಡನಗೌಡ, ಎಸ್ಸಿ ಮೀಸಲು ಒಂದು ಸ್ಥಾನಕ್ಕೆ ವಿಶ್ವನಾಥಪುರ ಕಾಲೋನಿಯ ಶಾರದಮ್ಮ, ಮಹಿಳೆಯರ ಮೀಸಲಿನ ಎರೆಡು ಸ್ಥಾನಗಳಿಗೆಪಟೇಲ್ ನಗರದ ಬಿ.ಚಂದ್ರಿಕಾ ಮತ್ತು ಕೆ.ಶ್ರಿಕಳಾ ಬೊಜ್ಜಪ್ಪ ಇವರು.

**ಸ್ಪರ್ಧೆ:**

ಸಾಲಗಾರರಲ್ಲದ ಕ್ಷೇತ್ರದಿಂದ ಒಂದುಸ್ಥಾನಕ್ಕೆ ಜ್ಯೋತಿ ಮತ್ತು ಶಿಲ್ಪ ಅವರು ಕಣದಲ್ಲಿದ್ದಾರೆ.

ಸಾಲಗಾರರ ಸಾಮಾನ್ಯಕ್ಷೇತ್ರದ ಐದು ಸ್ಥಾನಗಳಿಗೆ ಹಾಲಿ ಅಧ್ಯಕ್ಷ ಬಿ.ಕೆ.ಕೆರಕೋಡಪ್ಪ,ಜೆ.ಪಂಪಾಪತಿ, ಬೆಳ್ಳಿ ಕಟ್ಟೆಪ್ಪ, ಶ್ರೀನಿವಾಸರೆಡ್ಡಿ, ಬಜ್ಜೆಪ್ಪ,ಎಂ.ದುರ್ಗಾಪ್ರಸಾದ್, ಕೆ.ಫಕ್ಕೀರಪ್ಪ, ಹಂಪವತಿ ಕೆ. ಇವರುಗಳಾಗಿದ್ದಾರೆ.

ಇನ್ನು ಓಬಿಸಿ (ಎ) ಕ್ಷೇತ್ರದ ಒಂದು ಸ್ಥಾನಕ್ಕೆ ಕಲ್ಪನಾ ಕೆ.ಜೆ, ಯು.ಕೆ.ತಿಮ್ಮಪ್ಪಮತ್ತುಬಂಡಿಹಟ್ಟಿಯ ಕೆ.ಹೊನ್ನೂರಸ್ವಾಮಿ,ಎಸ್ಟಿಕ್ಷೇತ್ರದ ಒಂದು ಸ್ಥಾನಕ್ಕೆ ಸುರೇಶ್ ಕಮ್ಮರಚೇಡು, ಆಂಜನೇಯ ಇವರು ಸ್ಪರ್ಧೆ ಮಾಡಿದ್ದಾರೆ.

ಇಡೀ ಕಲ್ಯಾಣ ಕರ್ನಾಟಕ್ ಸೊಸೈಟಿಗಳ ಪೈಕಿ ಈ ಸೊಸೈಟಿ ಲಾಭದಾಯಕ ಮತ್ತು ಹೆಚ್ಚಿನ ವಹಿವಾಟಿನದಾಗಿರುವುದರಿಂದಿದರ ಆಡಳಿತದ ಚುಕ್ಕಾಣಿ ಹಿಡಿಯಲು ಹೆಚ್ಚಿನ ಸ್ಪರ್ಧೆ ಉಂಟಾಗಿದೆ.

# ಬಳ್ಳಾರಿಯಲ್ಲಿ ಎಐಡಿಎಸ್‌ಓ 70ನೇ ಸಂಸ್ಥಾಪನಾ ದಿನಾಚರಣೆ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ,28–ನಗರದ ಆರ್ ವೈಎಂಇಸಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂದು ಎಐಡಿಎಸ್‌ಓನ 70ನೇ ಸಂಸ್ಥಾಪನಾ ದಿನದ ಅಂಗವಾಗಿ ಧ್ಯೇಯದ್ದೇಶ ಕುರಿತು ಚರ್ಚೆ ಹಾಗೂ 'ದಿ ಲೆಜೆಂಡ್ ಆಫ್ ಭಗತ್ ಸಿಂಗ್' ಸಿನಿಮಾ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು

ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷ ಅಪೂರ್ವ ಸಿ.ಎಂ ಮಾತನಾಡುತ್ತಾ . "ಶಿಕ್ಷಣ–ಮಾನವತೆ–ಸಂಸ್ಕೃತಿ" ಉಳಿಸಲು ಹಾಗೂ ಸಾರ್ವಜನಿಕ ಶಿಕ್ಷಣ ಬಲಪಡಿಸಲು ಮಹಾನ್ ವಿಚಾರಧಾರೆಯ ಆಧಾರದ ಮೇಲೆ ತಳಮಟ್ಟದ ಹೋರಾಟ ಬೆಳೆಸಲು 70ನೇ ಎಐಡಿಎಸ್‌ಓ ಸಂಸ್ಥಾಪನಾ ದಿನವನ್ನು ಯೋಗ್ಯ ರೀತಿಯಲ್ಲಿ ಆಚರಿಸಿ!" ಎಂದು ಕರೆ ನೀಡಿದರು.

ಇಂದು, ದೇಶದಾದ್ಯಂತ 30ಕ್ಕೂ ಹೆಚ್ಚು ರಾಜ್ಯಗಳಲ್ಲಿ ಎಐಡಿಎಸ್‌ಓ ಕಾರ್ಯನಿರ್ವಹಿಸುತ್ತಾ ದೇಶದ ಬಹು ದೊಡ್ಡ ಕ್ರಾಂತಿಕಾರಿ ವಿದ್ಯಾರ್ಥಿ ಸಂಘಟನೆಯಾಗಿ ಹೊರಹೊಮ್ಮಿದೆ. ಇಂದು ವಿದ್ಯಾರ್ಥಿಗಳು ಎದುರಿಸುತ್ತಿರುವ ಎಲ್ಲ ಮೂಲಭೂತ ಸಮಸ್ಯೆಗಳ ವಿರುದ್ಧ ಹೋರಾಡಲು, ಮಹಾನ್ ವಿಚಾರಧಾರೆಯ ಆಧಾರದ ಮೇಲೆ ಶಿಕ್ಷಣ–ಮಾನವತೆ–ಸಂಸ್ಕೃತಿಯನ್ನು ಉಳಿಸುವ ಚಳುವಳಿಯನ್ನು ನಾವು ತಳ ಮಟ್ಟದಿಂದ ಆರಂಭಿಸಬೇಕಿದೆ. ದೇಶಾದ್ಯಂತ ಎನ್ ಇಪಿ–2020 ಪ್ರತಿರೋಧಿಸಲು, ಸಾರ್ವಜನಿಕ ಶಿಕ್ಷಣ ಉಳಿಸಲು ನಾವೆಲ್ಲರೂ ಸಜ್ಜಾಗಬೇಕಿದೆ. ಈ ದೇಶದ ಪ್ರತಿಯೊಬ್ಬ ಮಗುವಿಗೂ, ಉನ್ನತ ಶಿಕ್ಷಣದ ವರೆಗೆ ಉಚಿತ ಶಿಕ್ಷಣ ದೊರಕಬೇಕೆಂದು ಹೋರಾಡಿದ ಭಗತ್ ಸಿಂಗ್, ಸುಭಾಸ್ ಚಂದ್ರಬೋಸ್ ರವರ ಕನಸು ಕನಸಾಗಿಯೇ ಉಳಿದಿದೆ. ಅವರು ತಮ್ಮ ಕನಸನ್ನು ನನಸು ಮಾಡುತ್ತಾರೆ ಎಂಬ ಭರವಸೆ ಇರಿಸಿದ್ದು ನಮ್ಮ ಮೇಲೆ! ಈ ನೆಲದ ವಿದ್ಯಾರ್ಥಿ ಸಮುದಾಯದ ಮೇಲೆ! ಆ ಭರವಸೆ ಈಡೇರಿಸುವ ಐತಿಹಾಸಿಕ ಜವಾಬ್ದಾರಿ ನಮ್ಮ ಮೇಲಿದೆ.


ಈ ಜವಾಬ್ದಾರಿಯನ್ನು ಮತ್ತಷ್ಟು ತೀಕ್ಷ್ಣಗೊಳಿಸಲು ಈ ಸಂಸ್ಥಾಪನಾ ದಿನದಂದು ನಾವೆಲ್ಲರೂ ಪ್ರತಿಜ್ಞೆ ತೆಗೆದುಕೊಳ್ಳೋಣ! ಈ ಹಿನ್ನಲೆಯಲ್ಲಿ ಸಂಸ್ಥಾಪನಾ ದಿನದ ಸಂದೇಶವನ್ನು ನಿಮ್ಮ ಎಲ್ಲಾ ಸ್ನೇಹಿತರಿಗೆ, ಎಐಡಿಎಎಸ್‌ಓ ಸಮಿತಿಗಳ ಎಲ್ಲ ಸದಸ್ಯರಿಗೆ ತಲುಪಿಸುವ ಜವಾಬ್ದಾರಿಯನ್ನು ನಿರ್ವಹಿಸೋಣ! ನಮ್ಮ ಜಿಲ್ಲೆಯಲ್ಲಿಯೂ ಬಲಿಷ್ಠ ಸಂಘಟನೆ ಕಟ್ಟುವ ಕಾರ್ಯಕ್ಕೆ ಮುಂದಾಗೋಣ!"ಎಂದರು.

ಎಐಡಿಎಎಸ್‌ಓ ಜಿಲ್ಲಾ ಕಾರ್ಯದರ್ಶಿಗಳಾದ ಕಂಬಳಿ ಮಂಜುನಾಥ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಂದರ್ಭದಲ್ಲಿ ಎಐಡಿಎಎಸ್‌ಓ ಜಿಲ್ಲಾ ಅಧ್ಯಕ್ಷರು ಕೆ.ಈರಣ್ಣ, ಉಪಾಧ್ಯಕ್ಷರು ಎಂ.ಶಾಂತಿ, ಉಮಾ ಮತ್ತು ಕಛೇರಿ ಕಾರ್ಯದರ್ಶಿ ನಿಹಾರಿಕ ಮತ್ತು ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಶ್ರದ್ಧಾಭಕ್ತಿ ಸಂಭ್ರಮದ ಅಯ್ಯಪ್ಪಸ್ವಾಮಿ ಮಂಡಲ ಪೂಜಾ ಮಹೋತ್ಸವ.

ಮಲ್ಲಮ್ಮ ನುಡಿ ವಾರ್ತೆ

ಹೊಸಪೇಟೆ(ವಿಜಯನಗರ) ಡಿ27: ನಗರದ ನೆಹರೂ ಕಾಲೋನಿಯ ಶ್ರೀ ಅಯಪ್ಪ ಸ್ವಾಮಿ ದೇವಾಲಯದಲ್ಲಿ ಗುರುವಾರ ಮಂಡಲ ಪೂಜಾ ವಿಶೇಷ ಕಾರ್ಯಕ್ರಮ ಅತ್ಯಂತ ಶ್ರದ್ಧಾ–ಭಕ್ತಿ ಸಂಭ್ರಮದಿಂದ ನೆರವೇರಿದವು.



ಮಂಡಲ ಪೂಜಾ ವಿಶೇಷ ಕಾರ್ಯಕ್ರಮದಪ್ರಯುಕ್ತದೇಗುಲದ ಶ್ರೀ ಅಯ್ಯಪ್ಪ ಸ್ವಾಮಿ ಮೂರ್ತಿಗೆ ಕಳಾಶಾಭಿಷೇಕ ಅಷ್ಟಾಭಿಷೇಕ, ವಿಶೇಷ ಅಲಂಕಾರ ಗೈದು ಪೂಜೆಯನ್ನು ನೆರವೇರಿಸಲಾಯಿತು.

ಪ್ರಧಾನ ಆರ್ಚಕ ಶಂಕರನ್ ಎನ್.ನಂಬೂದರಿ ಅವರು ವಿಶೇಷ ಪೂಜೆವನ್ನು ನೆರವೇರಿಸಿದರು.

ಅಯ್ಯಪ್ಪ ಮಾಲಾಧಾರಿಗಳು ಸೇರಿದಂತೆ ಸಹಸ್ರಾರು ಭಕ್ತರು, ಬೆಳಿಗ್ಗೆಯಿಂದ ಅಯ್ಯಪ್ಪದೇವಸ್ಥಾನಕ್ಕೆ ಆಗಮಿಸಿ, ದೇವರ ದರ್ಶನ ಪಡೆದರು. ಹೂ–ಹಣ್ಣು, ಕಾಣಿಕೆ ಸಲ್ಲಿಸಿ ಭಕ್ತಿ ಮೆರೆದರು. ಬಳಿಕ ನಡೆದ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಸಹಸ್ರಾರು ಭಕ್ತರು ಪ್ರಸಾದ ಸ್ವೀಕಾರ ಮಾಡಿದರು.

ಮೆರವಣಿಗೆ:

ಮಂಡಲ ಪೂಜಾ ವಿಶೇಷ ಕಾರ್ಯಕ್ರಮದ ಪ್ರಯುಕ್ತ ಅಯ್ಯಪ್ಪಸ್ವಾಮಿಯ ಮೂರ್ತಿಯ ನಗರದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಿತು. ದಾರಿಯುದಕ್ಕೂ ಅಯ್ಯಪ್ಪ ಮಾಲಾಧಾರಿಗಳು, ಭಕ್ತರು ಅಯ್ಯಪ್ಪ ಸ್ವಾಮಿ ಭಜನೆ ಗೀತೆಗಳನ್ನು ಹಾಡಿ ಹೆಜ್ಜೆ ಹಾಕಿದರು.

ನಗರದ ಪಟೇಲ್ ನಗರದಲ್ಲಿರುವ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದಿಂದ ಆರಂಭವಾದ ಮೆರವಣಿಗೆಪುನೀತ್ ರಾಜಕುಮಾರ್ ವೃತ್ತ, ಮದಕರಿನಾಯಕ ವೃತ್ತ, ವಾಲ್ಮೀಕಿ ವೃತ್ತ ಸೇರಿದಂತೆ ಪ್ರಮುಖ ರಸ್ತೆಗಳ ಮೂಲಕ ದೇವಸ್ಥಾನದಲ್ಲಿ ಸಂಪನ್ನಗೊಂಡಿತು.

ರಾತ್ರಿ ಅಯ್ಯಪ್ಪ ಸ್ವಾಮಿಗೆ ಮಹಾಮಂಗಳಾರತಿ, ಭಸ್ಮಾಭಿಷೇಕ ಗೈದು ವಿಶೇಷ ಪೂಜೆ ಸಲ್ಲಿಸಿ, ಹರಿವಾರಸಾನಂ ಗೀತೆ ಹಾಡಿದರು. ದೇವಸ್ಥಾನ ಟ್ರಸ್ಟ್ ಸದಸ್ಯರಾದ ಭೂಪಾಲ್ ಪ್ರಲ್ಹಾದ್, ಡಿ.ವೆಂಕಟೇಶ್, ಮಾಲಾತೇಶ್, ಪ್ರಮುಖರಾದ ಸಂತೋಷ್, ರಾಮಸ್ವಾಮಿ, ಮಂಜುನಾಥ, ರಾಘವೇಂದ್ರ, ಜಗನ್ ಹಾಗೂ ಆನಂದ್ ಇತರರು ಮೆರವಣಿಯಲ್ಲಿ ಪಾಲ್ಗೊಂಡಿದ್ದರು.

# ದೇಶಕ್ಕೆ ಮನಮೋಹನ್ ಸಿಂಗ್‌ರ ಕೊಡುಗೆ ಅಪಾರ:ಮದರಕಲ್ಲ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ದೇಶದ14ನೇ ಪ್ರಧಾನ ಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದ ಡಾ. ಮನಮೋಹನ್ ಸಿಂಗ್ ಅವರು ದೇಶ ಕಂಡ ಧೀಮಂತ, ನಿಷ್ಕಳಂಕ ರಾಜಕಾರಣಿ. ಪ್ರಗತಿಶೀಲ ಆರ್ಥಿಕ ತಜ್ಞ, 90ರ ದಶಕದಲ್ಲಿ ಹದಗೆಟ್ಟ ದೇಶದ ಆರ್ಥಿಕತೆ ಸುಧಾರಿಸಲು ಅವರು ತಂದ ಆರ್ಥಿಕ ಯೋಜನೆಗಳಿಂದಾಗಿ ದೇಶದ ಆರ್ಥಿಕ ವ್ಯವಸ್ಥೆ ಸುಧಾರಿಸಿ ವಿಶ್ವದ ಎದುರು ಮತ್ತೇ ಎದೆ ತಟ್ಟಿ ನಿಲ್ಲುವಂತಾಯಿತು ದೇಶಕ್ಕೆ ಅವರ ಕೊಡುಗೆ ಅಪಾರ ಅವು ಇತಿಹಾಸದಲ್ಲಿ ಸದಾ ಅಜರಾಮವಾಗಿ ಉಳಿಯುತ್ತವೆ ಎಂದು ಮುಖಂಡ ಪ್ರಭುಗೌಡ ಮದರಕಲ್ ಹೇಳಿದರು.ಶನಿವಾರ ಪಟ್ಟಣದ ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಯಾಲಯದಲ್ಲಿ ಡಾ. ಮನಮೋಹನ್ ಸಿಂಗ್ ರ ನಿಧನದ ಹಿನ್ನೆಲೆಯಲ್ಲಿ ಹಮ್ಮಿಕೊಂಡ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು. ಕಾಂಗ್ರೆಸ್ ಮಜ್ದೂರ್ ಘಟಕದ ತಾಲೂಕ ಅಧ್ಯಕ್ಷ ಸಂಗನಗೌಡ ಅಸ್ಕಿ ಮಾತನಾಡಿ ಡಾ.ಮನಮೋಹನ್ ಸಿಂಗ್ ಅವರು ಶ್ರೇಷ್ಠ ಆರ್ಥಿಕ ತಜ್ಞ ರಾಗಿದ್ದು ಯುಪಿಎ ಸರ್ಕಾರವನ್ನು ಎರಡು ಅವಧಿಗಳಿಗೆ ಯಶಸ್ವಿಯಾಗಿ ಮುನ್ನಡೆಸಿದರು. ಅವರು ತಮ್ಮ ಈ ಆಡಳಿತದ ಅವಧಿಯಲ್ಲಿ ತಂದಂತಹ ಹಲವಾರು ಜನಪರ ಯೋಜನೆಗಳು ಸದಾ ಸ್ಮರಣೀಯವಾಗಿವೆ, ಅವರು ಜಾರಿಗೆ ತಂದ ಮನ್ ನರೇಗಾ ಯೋಜನೆಯಿಂದ ಗ್ರಾಮೀಣ ಭಾಗದ ಬಡ ಕೂಲಿ ಕಾರ್ಮಿಕರು ತಮ್ಮ ಜೀವನವನ್ನು ಕಟ್ಟಿ–ಕೊಂಡಿದ್ದಾರೆ ಅವರೊಬ್ಬ ಶ್ರೇಷ್ಠ ರಾಜಕಾರಣಿಯಾಗಿದ್ದರು ಅವರನ್ನು ಕಳೆದುಕೊಂಡು ದೇಶ ಬಡವಾಗಿದೆ ಎಂದರು. ಕಾರ್ಯಕ್ರಮದ ಆರಂಭದಲ್ಲಿ ಒಂದು ನಿಮಿಷದ ಮೌನ ಆಚರಿಸುವುದರೊಂದಿಗೆ ನುಡಿ ನಮನ ಸಲ್ಲಿಸಲಾಯಿತು. ಈ ಸಮಯದಲ್ಲಿ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಸಿದ್ದನಗೌಡ ಪಾಟೀಲ (ನಾವದಗಿ),ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಿಬೂಬ ಚೋರಗಸ್ತಿ,ರಾಜ್ಯ ಅಲ್ಪಸಂಖ್ಯಾತ ವಿಭಾಗದ ಮಾಜಿ ಕಾರ್ಯದರ್ಶಿ ಮಹೆಬೂಬಶಾ ಮಕಾನದಾರ,ಎಂ.ಎ.ಮೇತ್ರಿ, ಮೋದಿನಸಾನಗಾರ್ಚಿ,ಮೆಹಬೂಬ ಕೆಂಭಾವಿ, ಫಯಾಜ್ ಉತ್ನಾಳ, ಸದ್ದಾಮ್ ಹೊನ್ನಳ್ಳಿ, ಆಸೀಫ್ ಕೆಂಭಾವಿ, ರಫೀಕ್ ಬೇಪಾರಿ ಮತ್ತಿತರರು ಇದ್ದರು.

# ಬೊಲೆರೋ ಪಲ್ಟಿ ಇಬ್ಬರ ಸಾವು



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ. 28–ಧೂಂಧಾರಿ (ಫಾಗ್) ನಿಂದಾಗಿ ರಸ್ತೆ ಸರಿಯಾಗಿ ಕಾಣಿಸದೆ ಚಾಲಕನ ನಿಯಂತ್ರಣ ತಪ್ಪಿ ಬೊಲೆರೋ ಸರಕು ಸಾಗಾಣೆ ವಾಹನ ಪಲ್ಟಿಯಾಗಿ ಇಬ್ಬರು ಸಾವನ್ನಪ್ಪಿರುವ ಘಟನೆ ಕುರುಗೋಡು ತಾಲೂಕಿನ ಮದಿರೆ ಕ್ರಾಸ್ ಬಳಿ ಇಂದು ನಸುಕಿನ ಜಾವ 2.30 ರ ಸುಮಾರಿಗೆ ಸಂಭವಿಸಿದೆ.

ಕೋಳೂರು ಕ್ರಾಸ್ ನಿಂದ ಕುರುಗೋಡು ಕಡೆಗೆ ಈ ವಾಹನ ಹೋಗುತ್ತಿತ್ತು. ಅದರಲ್ಲಿದ್ದ ಚಾಲಕರಾದ ಬಾದನಹಟ್ಟಿಯ ರಂಗಪ್ಪ(35) ಮತ್ತು ಕಲ್ಕಂಬದ ಪರಮೇಶ್(32) ಇವರು ಸಾವನ್ನಪ್ಪಿದ್ದಾರೆ.

ಇದರಲ್ಲಿದ್ದ ಕುರುಗೋಡಿನ ಉಮೇಶಗೌಡ ಮತ್ತು ಎರ್ರೆಪ್ಪಗೌಡ ಎಂವುವವರಿಗೆ ಸಣ್ಣಪುಟ್ಟಗಾಯಗಳಾಗಿವೆಯಂತೆ.

ಇವರು ಹಳ್ಳಿಗಳಲ್ಲಿ ಸಂಗ್ರಹಿಸಿದ ಪಡಿತರ ಅಕ್ಕಿಯನ್ನು ಕಳ್ಳಸಾಗಾಣೆ ಮಾಡುತ್ತಿದ್ದರುಎಂದುಹೇಳಲಾಗುತ್ತಿದೆ. ಸ್ಥಳದಲ್ಲಿ ಅಕ್ಕಿ ಬಿದ್ದಿವೆ. ಆದರೆ ಅಕ್ಕಿ ಚೀಲಗಳಿಲ್ಲ. ಪೊಲೀಸರಿಗೆ ಸುದ್ದಿ ಮುಟ್ಟುವ ಮುನ್ನ ಅವನ್ನು ಜೆಸಿಬಿ ಮೂಲಕ ಲೋಡ್ ಮಾಡಿ ಸಾಗಿಸಲಾಗಿದೆ ಎನ್ನಲಾಗುತ್ತಿದೆ.

ಮಧ್ಯಾಹ್ನಒಂದುಗಂಟೆಯಾದರೂ ಈ ಬಗ್ಗೆ ಕುರುಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿರಲಿಲ್ಲ. ಸ್ಥಳಕ್ಕೆ ಎಸ್ಪಿ ಡಾ.ಶೋಭಾರಣಿ ಭೇಟಿ ನೀಡಿದ್ದರಂತೆ.

# ಸರಳವಾಗಿ ಆಚರಿಸಿದ ದಿ, ಅಭಿಷೇಕ ವಿ ದೊಡ್ಡಮನಿ ಅವರ ಹುಟ್ಟುಹಬ್ಬ

( ವೀರಯ್ಯ ವಿ ಹಿರೇಮಠ)

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕುಕುನೂರು ತಾಲೂಕು ರಾಜೂರು ಗ್ರಾಮದಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಸಮಗ್ರ ಗ್ರಾಮೀಣಾಭಿವೃದ್ಧಿ ಸಂಸ್ಥೆ ರಾಜೂರ ಇವರ ವತಿಯಿಂದ ದಿ. ಅಭಿಷೇಕ್ ವಿರೂಪಾಕ್ಷಪ್ಪ ದೊಡ್ಮನಿ ಅವರ ಹುಟ್ಟು ಹಬ್ಬದ ಪ್ರಯುಕ್ತ ಗ್ರಾಮೀಣ ಮಟ್ಟದ ಕ್ಯಾರಮ್ ಬೋರ್ಡ್ ಪಂದ್ಯಾವಳಿಯನ್ನು ಆ ಯೋಜನೆ ಮಾಡಲಾಗಿತ್ತು.

ಕುಕನೂರಿನ ವಿದ್ಯಾನಂದ ಗುರುಕುಲದಲ್ಲಿ ಇರುವ ವೃದ್ಧಾಶ್ರಮದ ಎಲ್ಲಾ ಹಿರಿಯ ಜೀವಿಗಳಿಗೂ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಆತನ ಸೋದರರು ಗೆಳೆಯರ ಬಳಗದಿಂದ ನೆರವೇರಿಸಲಾಯಿತು.



ಈ ಸಂದರ್ಭದಲ್ಲಿ ಮಾತನಾಡಿದ ಕುಕುನೂರು ಪಟ್ಟಣ ಪಂಚಾಯಿತಿ ಸದಸ್ಯರಾದ ಗಗನ ನೋಟಗಾರ ಮಾತನಾಡುತ್ತಾ ಮನುಷ್ಯನಿಗೆ ಹುಟ್ಟು ಮತ್ತು ಸಾವಿನ ನಡುವೆ ಹೇಗೆ ಜೀವನ ಮಾಡುತ್ತೇವೆ ಅದೇ ನಮಗೆ ನೆನಪಲ್ಲಿರುವಂತ ಅಮೂಲ್ಯವಾದ ದಿನಗಳು ಮತ್ತು ಬದುಕಿನಲ್ಲಿ ಎಲ್ಲಾ ಜಾತಿ ಧರ್ಮದವರು ಜೊತೆಗೆ ಇರುವಷ್ಟು ದಿವಸ ಸಂತೋಷದಿಂದ ಜೀವನ ಮಾಡೋಣ ಎಂದು ಹೇಳಿದರು.

ಅಭಿಷೇಕ ದೊಡ್ಡಮನಿ ಮತ್ತೆ ಅವರ ಕುಟುಂಬದಲ್ಲಿ ಹುಟ್ಟಿ ಬರಲಿ ಮತ್ತೆ ಇಂಥ ಕಾರ್ಯಕ್ರಮಗಳು ಅವರ ಹೆಸರಿನಲ್ಲಿ ಮತ್ತೊಮ್ಮೆ ಮಗದೊಮ್ಮೆ ಪ್ರತಿ ವರ್ಷ ಕೂಡ ಹೀಗೆ ನೆಡಸಿ ಕೊಡುವಂತ ಶಕ್ತಿಯನ್ನು ಆ ಭಗವಂತ ದೊಡ್ಡಮನಿ ಕುಟುಂಬಕ್ಕೆ ಕರುಣಿಸಿ ಅವರ ಕುಟುಂಬಕ್ಕೆ ದುಃಖ ತಡೆದುಕೊಳ್ಳುವ ಶಕ್ತಿ ಆ ಭಗವಂತ ಕರುಣಿಸಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಉಪಾಧ್ಯಕ್ಷರಾದ ಪ್ರಶಾಂತ್ ಆರಬೆರಳಿನ, ವಿರೂಪಾಕ್ಷಪ್ಪ ದೊಡ್ಮನಿ, ದೇವಿಂದ್ರಪ್ಪ ಬಡಿಗೇರ, ಸಿರಾಜ್ ಕರ್ಮುಡಿ, ಭೀಮರೆಡ್ಡಿ ಶೆಡ್ಲಿಗೇರಿ, ಪಕೀರ ಸಾಬ್ ರಾಜೂರ, ಪ್ರಕಾಶ್ ಹಿರೇಮನಿ, ಶಂಕರ್ ಭಂಡಾರಿ, ಶಿವರಾಜ್ ದೊಡ್ಮನಿ, ಪ್ರಕಾಶ್ ಅರಿಕೇರಿ, ಜಗದೀಶ್ ತೊಂಡಿಹಾಳ, ದೇವರಾಜ ಕುದುರೆಮೋತಿ, ನವೀನ್ ಹಿರೇಮನಿ, ತಾಯಪ್ಪ ನಿರ್ಲಿಗಿ, ಮಂಜು ಹಿರೇಮನಿ, ಚೇತನ್ ಹಿರೇಮನಿ, ವಿಜಯ್ ದೊಡ್ಡಮನಿ, ಸುನಿಲ್ ಗೊರ್ಲೆಕೊಪ್ಪ ಹಾಗೂ ಇತರರು ಪಾಲ್ಗೊಂಡಿದ್ದರು.

# ದೇಶಕ್ಕೆ ಮನಮೋಹನ್ ಸಿಂಗ್ ರ ಕೊಡುಗೆ ಅಪಾರ:ಮದರಕಲ್ಲ

ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ದೇಶದ14ನೇ ಪ್ರಧಾನ ಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದ ಡಾ. ಮನಮೋಹನ್ ಸಿಂಗ್ ಅವರು ದೇಶ ಕಂಡ ಧೀಮಂತ, ನಿಷ್ಕಳಂಕ ರಾಜಕಾರಣಿ. ಪ್ರಗತಿಶೀಲ ಆರ್ಥಿಕ ತಜ್ಞ, 90ರ ದಶಕದಲ್ಲಿ ಹದಗೆಟ್ಟ ದೇಶದ ಆರ್ಥಿಕತೆ ಸುಧಾರಿಸಲು ಅವರು ತಂದ ಆರ್ಥಿಕ ಯೋಜನೆಗಳಿಂದಾಗಿ ದೇಶದ ಆರ್ಥಿಕ ವ್ಯವಸ್ಥೆ ಸುಧಾರಿಸಿ ವಿಶ್ವದ ಎದುರು ಮತ್ತೇ ಎದೆ ತಟ್ಟಿ ನಿಲ್ಲುವಂತಾಯಿತು ದೇಶಕ್ಕೆ ಅವರ ಕೊಡುಗೆ ಅಪಾರ ಅವು ಇತಿಹಾಸದಲ್ಲಿ ಸದಾ ಅಜರಾಮವಾಗಿ ಉಳಿಯುತ್ತವೆ ಎಂದು ಮುಖಂಡ ಪ್ರಭುಗೌಡ ಮದರಕಲ್ ಹೇಳಿದರು.ಶನಿವಾರ ಪಟ್ಟಣದ ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಯಾಲಯದಲ್ಲಿ ಡಾ. ಮನಮೋಹನ್ ಸಿಂಗ್ ರ ನಿಧನದ ಹಿನ್ನೆಲೆಯಲ್ಲಿ ಹಮ್ಮಿಕೊಂಡ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು. ಕಾಂಗ್ರೆಸ್ ಮಜ್ದೂರ್ ಘಟಕದ ತಾಲೂಕ ಅಧ್ಯಕ್ಷ ಸಂಗನಗೌಡ ಅಸ್ಕಿ ಮಾತನಾಡಿ ಡಾ.ಮನಮೋಹನ್ ಸಿಂಗ್ ಅವರು ಶ್ರೇಷ್ಠ ಆರ್ಥಿಕ ತಜ್ಞ ರಾಗಿದ್ದು ಯುಪಿಎ ಸರ್ಕಾರವನ್ನು ಎರಡು ಅವಧಿಗಳಿಗೆ ಯಶಸ್ವಿಯಾಗಿ ಮುನ್ನಡೆಸಿದರು. ಅವರು ತಮ್ಮ ಈ ಆಡಳಿತದ ಅವಧಿಯಲ್ಲಿ ತಂದಂತಹ ಹಲವಾರು ಜನಪರ ಯೋಜನೆಗಳು ಸದಾ ಸ್ಮರಣೀಯವಾಗಿವೆ, ಅವರು ಜಾರಿಗೆ ತಂದ ಮನ್ ನರೇಗಾ ಯೋಜನೆಯಿಂದ ಗ್ರಾಮೀಣ ಭಾಗದ ಬಡ ಕೂಲಿ ಕಾರ್ಮಿಕರು ತಮ್ಮ ಜೀವನವನ್ನು ಕಟ್ಟಿ–ಕೊಂಡಿದ್ದಾರೆ ಅವರೊಬ್ಬ ಶ್ರೇಷ್ಠ ರಾಜಕಾರಣಿಯಾಗಿದ್ದರು ಅವರನ್ನು ಕಳೆದುಕೊಂಡು ದೇಶ ಬಡವಾಗಿದೆ ಎಂದರು. ಕಾರ್ಯಕ್ರಮದ ಆರಂಭದಲ್ಲಿ ಒಂದು ನಿಮಿಷದ ಮೌನ ಆಚರಿಸುವುದರೊಂದಿಗೆ ನುಡಿ ನಮನ ಸಲ್ಲಿಸಲಾಯಿತು. ಈ ಸಮಯದಲ್ಲಿ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಸಿದ್ದನಗೌಡ ಪಾಟೀಲ (ನಾವದಗಿ),ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಿಬೂಬ ಚೋರಗಸ್ತಿ,ರಾಜ್ಯ ಅಲ್ಪಸಂಖ್ಯಾತ ವಿಭಾಗದ ಮಾಜಿ ಕಾರ್ಯದರ್ಶಿ ಮಹೆಬೂಬಶಾ ಮಕಾನದಾರ,ಎಂ.ಎ.ಮೇತ್ರಿ, ಮೋದಿನಸಾನಗಾರ್ಚಿ,ಮೆಹಬೂಬ ಕೆಂಭಾವಿ, ಫಯಾಜ್ ಉತ್ನಾಳ, ಸದ್ದಾಮ್ ಹೊನ್ನಳ್ಳಿ, ಆಸೀಫ್ ಕೆಂಭಾವಿ, ರಫೀಕ್ ಬೇಪಾರಿ ಮತ್ತಿತರರು ಇದ್ದರು.

# ಆಲಮಟ್ಟಿ ಜಲಾಶಯದಿಂದ ರೈತರ ಬದುಕ ಹಸನು



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ, ಡಿ,28– ಉತ್ತರ ಕರ್ನಾಟಕಜನರ,ರೈತರಬದುಕನ್ನು ಬದಲಿಸುವ ಉದ್ದೇಶದೊಂದಿಗೆ ನಿರ್ಮಾಣಗೊಂಡ ಜಲಾಶಯ ಆಲಮಟ್ಟಿ ಜಲಾಶಯ ಎಂದು ಕರ್ನಾಟಕ ರಾಜ್ಯ ಕ್ರಿಯಾಶೀಲ ಶಿಕ್ಷಕರ ವೇದಿಕೆ ಬಳ್ಳಾರಿ ಜಿಲ್ಲಾ ಘಟಕದ ಅಧ್ಯಕ್ಷರ ವಿಚೇಳ್ಳಗುರ್ಕಿ ಹೇಳಿದರು.

ಅವರು ಇಂದು ತಾಲೂಕಿನ ಸಂಜೀವರಾಯನಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಚೇತನ ಕಾರ್ಯಕ್ರಮದಡಿ ಏಳನೇ ತರಗತಿ ವಿದ್ಯಾರ್ಥಿಗಳು ಆಲಮಟ್ಟಿ ಹಾಗೂ ತುಂಗಭದ್ರಾ ಜಲಾಶಯಗಳ ಕುರಿತು ಮಂಡಿಸಿದ ವಿಷಯ ಆಲಿಸಿ ನಂತರ ಮಾತನಾಡಿದ ಅವರು ನೀರಾವರಿ ಹಾಗೂ ಜಲವಿದ್ಯುತ್ ಉತ್ಪಾದನೆ ಮಾಡುವ ಗುರಿ ಇಟ್ಟುಕೊಂಡು 1964ರಲ್ಲಿ ಅಂದಿನ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಇದರ ಅಡಿಗಲ್ಲು ಪೂಜೆ ನೆರವೇರಿಸಿದರು.

ಇದು160 ಅಡಿ ಎತ್ತರ ಹಾಗೂ130 ಟಿ.ಎಂ.ಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ.

ಇದರ ಕೆಲಸ 2005ರಲ್ಲಿ ಪೂರ್ಣಗೊಂಡಿತು. ಇದು ಬಿಜಾಪುರ ಜಿಲ್ಲೆಯ ಆಲಮಟ್ಟಿ ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ.

2010ರಲ್ಲಿ ಅಂದಿನ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರು ಉದ್ಘಾಟಿಸಿ ಲೋಕಾರ್ಪಣೆ ಗೊಳಿಸಿದರು. ಇಲ್ಲಿ ಏಳು ತಾರಸಿ ಉದ್ಯಾನವನ ಹಾಗೂ ರಾಕ್ ಹಿಲ್ ಎಂಬ ಕೃತಕ ಅರಣ್ಯ ನಿರ್ಮಿಸಲಾಗಿದೆ. ವರ್ಷದಿಂದ ವರ್ಷಕ್ಕೆ ದೇಶ ವಿದೇನದಿಂದ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದೆ.

ಆದ್ದರಿಂದ ವಿದ್ಯಾರ್ಥಿಗಳು ಕರ್ನಾಟಕದ ಜಲಾಶಯ ಹಾಗೂ ನದಿಗಳ ಕುರಿತು, ಅವುಗಳ ಸಂಗಮ ಸ್ಥಳಗಳ ಕುರಿತು ಮಾಹಿತಿ ಸಂಗ್ರಹ ಮಾಡಿ ಅಧ್ಯಯನ ಶೀಲರಾಗಬೇಕೆಂದು ಹೇಳಿದರು.

ಪ್ರತಿಭಾವಂತ ವಿದ್ಯಾರ್ಥಿನಿ ಏಳನೇ ತರಗತಿ ಕೆ.ಮಾನ್ಯಗೆ ಬಹುಮಾನ ವಿತರಿಸಲಾಯಿತು.

ಶಿಕ್ಷಕರಾದ ದಿಲ್ಷಾದ್ ಬೇಗಂ, ಚನ್ನಮ್ಮ, ಶ್ವೇತಾ, ಉಮ್ಮೇಹಾನಿ, ಶಶಮ್ಮ, ರಾಮಾಂಜಿನೇಯ, ಗುರುಪ್ರಸಾದ್, ವಿಜಯ ಮುಂಡ್ರಿಗಿ ಮುಂತಾದವರು ಉಪಸ್ಥಿತರಿದ್ದರು.

# ಮಂಗಳ ಗೌರಿ ಮಹಿಳಾ ಸಂಘದಿಂದಉಚಿತ ಆರೋಗ್ಯ ತಪಾಸಣಾ ಶಿಬಿರ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:ಡಿ,28– ನಗರದ ಶ್ರೀ ಮಂಗಳ ಗೌರಿ ಮಹಿಳಾ ಸಂಘ ಬಳ್ಳಾರಿ ಜಿಲ್ಲಾ ಆಸ್ಪತ್ರೆ ಸಹಕಾರದಿಂದ ಇಲ್ಲಿನ ರೇಣುಕಾಚಾರ್ಯ ನಗರದ ಕಿಡ್ಸ್ ವಿಲಿನೆಯಂ ಶಾಲೆಯಲ್ಲಿ " ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು " ಡಿ.25 ರಂದು ಹಮ್ಮಿಕೊಂಡಿತ್ತು.

ಶಿಬಿರದಲ್ಲಿ 180ಕ್ಕೂ ಹೆಚ್ಚು ಜನತೆ ತಪಾಸಣೆಗೆ ಒಳಗಾದರು. ಇವರಲ್ಲಿ ಎಂಟು ಜನರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ರೆಫರ್ ಮಾಡಲಾಗಿದೆ. 60ಕ್ಕೂ ಹೆಚ್ಚು ಜನರಿಗೆ ಕಣ್ಣಿನ ತೆ–ಊಂದರೆ ಇದ್ದರಿಂದ ಅವರಿಗೆ ಉಚಿತವಾಗಿ ಆಪರೇಷನ್ ಮಾಡಿ ಕನ್ನಡ ನೀಡಲು ನಿರ್ಧರಿಸಿದೆ. ಎಂದು ಶ್ರೀ ಶಿವಗೌರಿ ಮಂಗಳ ಮಹಿಳಾ ಸಂಘದ ಅಧ್ಯಕ್ಷೆ ಜೆ. ಬಿ. ಸುಮಂಗಳಮ್ಮ ತಿಳಿಸಿದ್ದಾರೆ.

ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಬಿಜೆಪಿಯ ಮುಖಂಡ ಕೆ.ಎ.ರಾಮಲಿಂಗಪ್ಪ, ಪಾಲಿಕೆ ಸದಸ್ಯೆ ಸುರೇಖಾ ಮಲ್ಲನಗೌಡ, ನಗರಸಭೆ ಮಾಜಿ ಸದಸ್ಯ ಗುರುಸಿದ್ದಪ್ಪ ಮೊದಲಾದವರು ಪಾಲ್ಗೊಂಡಿದ್ದರು.

# ಅಲ್ಲಮನ ಆಧ್ಯಾತ್ಮ ಅಂತರಾಳದ್ದು: ಡಾ. ಶ್ರೀಧರ್ ಹೆಗಡೆ ಭದ್ರನ್



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.28-ವಚನ ಚಳುವಳಿ ಮತ್ತು ವಚನ ಸಾಹಿತ್ಯ ಕನ್ನಡದ ಆಸ್ತಿ ಇದ್ದಂತೆ. 21ನೇ ಶತಮಾನದಲ್ಲಿ ವಚನವು ಶುದ್ಧಿಕರಣವಾಯಿತು. ಆನಂದದ ಅಭಿವ್ಯಕ್ತಿಯಲ್ಲೇ ಸಂತೋಷವನ್ನು ಕಾಣಬೇಕು ಎಂದು ಧಾರವಾಡದ ಹಿರಿಯ ವಿದ್ವಾಂಸ ಡಾ. ಶ್ರೀಧರ್ ಹೆಗಡೆ ಭದ್ರನ್ ಹೇಳಿದರು.

ನಗರದ ಬಿವಿವಿ ಸಂಘದ ಬಸವೇಶ್ವರಕಲಾಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಘಟಕ, ಕನ್ನಡ ಸ್ನಾತ-ಕೋತ್ತರ ವಿಭಾಗ, ತಾಲೂಕು ಶರಣ ಸಾಹಿತ್ಯ ಪರಿಷತ್ತು, ತಾಲೂಕು ಕದಳಿ ಮಹಿಳಾ ವೇದಿಕೆ ಅವರ ಸಹಯೋಗದಲ್ಲಿ ಕನ್ನಡ ನುಡಿ ವೇದಿಕೆ ಉದ್ಘಾಟನೆ ಮತ್ತು ಎಂ.ಎ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ, ಲಿಂ. ಎಸ್.ಟಿ ಬುಳ್ಳಾ ಶರಣ ದಂಪತಿಗಳ ಮತ್ತು ಲಿಂ.ಸಿದ್ರಾಮಪ್ಪ ಶೆಟ್ಟರ ಶರಣ ದಂಪತಿಗಳ ಸ್ಮರಣಾರ್ಥ ದತ್ತಿ ಉಪನ್ಯಾಸಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಚನಕಾರರಲ್ಲಿವೈವಿಧ್ಯವನ್ನುಕಾಣುತ್ತೇವೆ. ಸಮಾಜಮುಖಿಯಾಗಿರುವುದಕ್ಕಿಂತ ಹೆಚ್ಚುಅಂತರ್ಮುಖಿಯಾಗಿದ್ದವರು ಅಲ್ಲಮಪ್ರಭುಗಳು. ಅಲ್ಲಮನ ಆಧ್ಯಾತ್ಮವು ಪರಿಸರದಲ್ಲಿ ಭಿನ್ನವಾಗಿದೆ. ಮನಸ್ಸಿನ ಪ್ರಕೃತಿ ಹಲವು ವೇಷ ರೂಪಗಳನ್ನು ಹೊಂದಿದೆ. ಆಧ್ಯಾತ್ಮಿಕ ತೃಷೆ ಪಾರಲೌಕಿಕ ಅಲ್ಲ. ಆಧ್ಯಾತ್ಮಿಕತೆ ಕಣ್ಣೊಳಗಿನ ರೂಪವಾಗಿದೆ. ಅಲ್ಲಮಪ್ರಭು ಅವರು ಹೊಸ ಸಂಗತಿಗಳನ್ನು ಕಟ್ಟಿಕೊಟ್ಟಿದ್ದಾರೆ ಎಂದರು.

ಅದ್ವೈತ ಎಂಬುದು ಇವರ ಕಾಲಘಟ್ಟದಲ್ಲಿ ಚರ್ಚೆಗೆ ಗು-ರಿಯಾಗಿತ್ತು. ಅಲ್ಲಮಪ್ರಭು ತೀವ್ರ ಸ್ವರೂಪದ ಕವಿಯಾಗಿದ್ದರು. ಎರಡು ಅನ್ನುವುದನ್ನು ಅಳಿದು ಏಕತ್ವವನ್ನುಗುರುತಿಸುವುದು. ವಾಕ್ ಆಡಂಬರಗಳಾಗಿರದೆ ಅದ್ವೈತದ ನೆಲೆಯನ್ನು ತಲುಪಬೇಕು . ಅಲ್ಲಮಪ್ರಭು ಹೇಳಿದ ಮಾತು, ಕೊಟ್ಟ ಕುದರೆಯನ್ನು ಏರದವನು ಶೂರನು, ಧೀರನು ಅಲ್ಲ, ಎಂಬ ಮಾತು ನಿಜಕ್ಕೂ ಮಾರ್ಮಿಕವಾಗಿದೆ ಎಂದರು.

ಪ್ರಾಚಾರ್ಯ ಎಸ್.ಆರ್. ಮುಗನೂರಮಠ ಮಾತನಾಡಿ, ಧರ್ಮದ ನೆಲೆಗಟ್ಟಿನಲ್ಲಿ ವಚನಗಳನ್ನು ನೋಡಬಾರದು. ಹೊಸ ಆಲೋಚನೆಗಳಿಂದ ತಿಳಿದರೆ ಮನಸ್ಸುಗಳನ್ನು ಸ್ಪರ್ಶ ಮಾಡುವಂತವು ವಚನಗಳು. ಅಲ್ಲಮನ ಚರಿತ್ರೆ ತಿಳಿಯಲು ಸಂಸ್ಕೃತವಂತವರಾಗಬೇಕು ಧ್ಯಾನದಿಂದ ಆಧ್ಯಾತ್ಮದಲ್ಲಿ ಸಾಧನೆ ಮಾಡಬಹುದು. ಸ್ನಾತಕೋತ್ತರ ವಿದ್ಯಾರ್ಥಿಗಳು ಆಳವಾಗಿ ತಿಳಿದುಕೊಳ್ಳಬೇಕು. ಸಮಾಜದಲ್ಲಿ ಉತ್ತಮ ನಾಯಕರಾಗಬೇಕು. ಪ್ರತಿಯೊಬ್ಬರನ್ನು ಗೌರವಿಸಿ, ಎಲ್ಲರಲ್ಲಿಯೂ ಪ್ರಾಮಾಣಿಕತೆಯಿಂದ ಇರಬೇಕು ಎಂದರು.

ಎ.ಎಸ್.ಪಾವಟೆ ಪ್ರಾಸ್ತವಿಕವಾಗಿ ಮಾತನಾಡಿದರು. ಚಂದ್ರಶೇಖರ ಶೆಟ್ಟರ, ಅಶೋಕ ಬುಳ್ಳಾ, ಎಚ್. ಎಸ್.ಶೆಟ್ಟರ, ಡಾ.ವೀಣಾ ಕಲ್ಮಠ, ಡಾ.ಬಿ.ಪಿ.ಕುಂಬಾರ ಸೇರಿದಂತೆ ಬೋಧಕ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶರಣಬಸವ ಪಲ್ಲೇದ ಪ್ರಾರ್ಥಿಸಿದರು. ಬಸವರಾಜ ಮುಕ್ಕುಪ್ಪಿ ವಂದಿಸಿದರು.

# ಅಮಿತ ಶಾ ವಜಾಕ್ಕೆ ಡಿಎಸ್‌ಎಸ್ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.28-ಡಾ.ಅಂಬೇಡ್ಕರ ಅವರನ್ನು ಅವಮಾನಿಸುವರೀತಿಯಲ್ಲಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ ಶಾ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ ವಾದ)ಆಗ್ರಹಿಸಿದೆ.

ಶುಕ್ರವಾರ ನಗರದಲ್ಲಿ ಪಂಜಿನ ಮೆರವಣಿಗೆ ಮೂಲಕ ಪ್ರತಿಭಟನೆ ನಡೆಸಿದ ಡಿಎಸ್ ಎಸ್ ಕೇಂದ್ರ ಗೃಹ ಸಚಿವರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿಯ ಜಿಲ್ಲಾಧ್ಯಕ್ಷ ಯುವರಾಜ್ ಬಂಡಿ, ಅಂಬೇಡ್ಕರ ಅವರನ್ನು ಅವಮಾನಿಸಿರುವ ಗೃಹ ಮಂತ್ರಿಗಳು ಸಂವಿಧಾನ ವಿರೋಧಿಯಾಗಿರುವ ತಮ್ಮ ಮನೋಭಾವ ಹೊರಹಾಕಿದ್ದಾರೆ. ತಕ್ಷಣ ರಾಷ್ಟ್ರಪತಿಗಳು ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು ಎಂದು ಅಗ್ರಹಿಸಿದರು.

ಬಿಹಾರದ ಜೆಡಿಯು ಮತ್ತು ಆಂದ್ರದ ಟಿಡಿಪಿ ಪಕ್ಷಗಳು ಅಮಿತ ಶಾ ಹೇಳಿಕೆಯನ್ನು ಬೆಂಬಲಿಸುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಬರುವ ದಿನಗಳಲ್ಲಿ ಎರಡೂ ಪಕ್ಷಗಳಿಗೆ ಜನ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಬಂಡಿ ಹೇಳಿದರು. ಸುರೇಶ ನಂದಿ,ಪ್ರಕಾಶ್, ಎಲ್. ಡಬ್ಲ್ಯು., ದೇವರಾಜ ರಾಠೋಡ, ಖಾಜಾ ಅಮನ್, ಅಲ್ತಾಪ ಬೆಣ್ಣೂರ ಮತ್ತಿತರರು ಇದ್ದರು.

ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ, ಡೆತ್‌ನೋಟ್‌ನಲ್ಲಿ ಬಿಜೆಪಿ ನಾಯಕರ ಕೊಲೆ ಸಂಚು ಬಹಿರಂಗ

# ಪ್ರಕರಣ ಕುರಿತು ಸಿಬಿಐ ತನಿಖೆಯಾಗಲಿ: ಈಶ್ವರಸಿಂಗ್ ಠಾಕೂರ್



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 28 :- ಬೀದರ ಜಿಲ್ಲೆಯಭಾಲ್ಕಿತಾಲೂಕಿನಕಟ್ಟಿತೂಗಾಂವ ಗ್ರಾಮದ ಗುತ್ತಿಗೆದಾರ ಸಚಿನ್ ಪಾಂಚಾಳ ಸಚಿವ ಪ್ರಿಯಾಂಕ್ ಖರ್ಗೆ ಆಪ್ತನ ಹೆಸರೇಳಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಚಿನ್ ಅವರು ಸುಮಾರು 7 ಪುಟಗಳ ಡೆತ್‌ನೋಟ್‌ನಲ್ಲಿ ಸಚಿವರ ಆಪ್ತ ಸೇರಿದಂತೆ 8 ಜನರ ಹೆಸರುಗಳನ್ನು ಮರಣಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ. ಆದ್ದರಿಂದ ಈ ಪ್ರಕರಣ ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಭಾರತೀಯ ಜನತಾ ಪಕ್ಷದ ವಿಭಾಗೀಯ ಸಹಪ್ರಭಾರಿ ಹಾಗೂ ಬೀದರ ಉತ್ತರ ಕ್ಷೇತ್ರದ ನಾಯಕ ಈಶ್ವರಸಿಂಗ್ ಠಾಕೂರ್ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು ಯುವ ಗುತ್ತಿಗೆದಾರ ಸಚಿನ್ ರೈಲಿಗೆ ಕೊರಳೊಡ್ಡಿ ಆತ್ಮಹತ್ಯೆ ಮಾಡಿಕೊಂಡಿರುವುದು ನಿಜಕ್ಕೂ ನೋವಿನ ಸಂಗತಿ. ಡೆತ್‌ನೋಟ್‌ನಲ್ಲಿ ಸಚಿವ ಪ್ರಿಯಾಂಕ್ ಹೆಸರು ಕೇಳಿಬಂದಿರುವುದರಿಂದ ಅವರು ಕೂಡಲೇ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಮೃತ ಸಚಿನ ಪಾಂಚಾಳ ಕುಟುಂಬಕ್ಕೆ ಸರ್ಕಾರ ಸೂಕ್ತ ಪರಿಹಾರ ಒದಗಿಸಬೇಕೆಂದು ಠಾ-ಕೂರ್ ಒತ್ತಾಯಿಸಿದ್ದಾರೆ. ಅಲ್ಲದೇ ಪೂಜ್ಯ ಆಂದೋಲಾ ಶ್ರೀಗಳು, ಶಾಸಕ ಬಸವರಾಜ ಮತ್ತಿಮೂಡ್ ಸೇರಿದಂತೆ ಬಿಜೆಪಿ ಮುಖಂಡರ ಹತ್ಯೆಗೆ ರಾಜು ಕಪನೂರ ಸಂಚು ರೂಪಿಸಿದ್ದಾರೆ ಎಂದು ಮೃತ ಸಚಿನ ಪಾಂಚಾಳ್ ತಮ್ಮ ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿದ್ದು, ಈ ಕುರಿತೂ ಸಿಬಿಐ ತನಿಖೆಯಾಗಬೇಕೆಂದು ಠಾಕೂರ್ ಒತ್ತಾಯಿಸಿದ್ದಾರೆ.

ಜಾಹೀರಾತಿಗಾಗಿ ಇಂದೇ
ಸಂಪರ್ಕಿಸಿ:9964206170

# ಮನಮೋಹನ ಸಿಂಗ್‌ರವರ ಸಾಧನೆಯ ಮನಮೋಹಕವಾಗಿತ್ತು: ಭಗವಂತ ಖೂಬಾ

ಮಲ್ಲಮ್ಮ ನುಡಿ ವಾರ್ತೆ



ಬೀದರ: ಮಾಜಿ ಪ್ರಧಾನಿಗಳು, ಆರ್ಥಿಕ ತಜ್ಞರಾಗಿದ್ದ ದಿ. ಮನಮೋಹನ ಸಿಂಗ್‌ರವರು, ಹಲವಾರು ಹುದ್ದೆಗಳನ್ನು ಅಲಂಕರಿಸಿ, ಯಶಸ್ವಿಯಾಗಿ ನಿಭಾಯಿಸಿ, ಈ ದೇಶಕ್ಕೆ ಅವರು ನೀಡಿದ ಕೊಡುಗೆ, ಅವರ ಸಾಧನೆ ಅವರ ಹೆಸರಿನಂತ ಮನಮೋಹಕವಾಗಿಯೇ ಇದೆ, ಎಂದಿಗೂ ಅಮರವಾಗಿರಲಿದೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ, ಮನಮೋಹನ ಸಿಂಗ್ ರವರ ಅಗಲಿಕೆಗೆ ಕಂಬನಿ ಮೀಡಿದಿದ್ದಾರೆ.

ಅಟಲ್ ಬಿಹಾರಿ ವಾಜಪೇಯಿ ನಂತರ ಈ ದೇಶಕ್ಕೆ ಮನಮೋಹನ್ ಸಿಂಗ್ ರವರು ಪ್ರಧಾನಿಯಾಗಿದ್ದರಿಂದಲೆ ಈ ದೇಶದ ಅರ್ಥವ್ಯವಸ್ಥೆ ಸಧೃಡಗೊಂಡಿತ್ತು, ಯಾಕೆ-ಂದರೆ ಅಟಲ್‌ಜಿಯವರಂತೆ, ನಿಸ್ವಾರ್ಥದಿಂದ ದೇಶದ ಒಳಿತಿಗಾಗಿ ನಿರ್ಧಾರಗಳು ತೆಗೆದುಕೊಂಡ ಕೀರ್ತಿ ಮನಮೋಹನಸಿಂಗ್‌ರವರಿಗೆ ಸಲ್ಲುತ್ತದೆ.

ಆಹಾರ ಭದ್ರತಾ ಕಾಯಿದೆ, ಆರ್.ಟಿ.ಐ, ಆಧಾರ್ ಮುಂತಾದ ಜನಪರ ಯೋಜನೆಗಳಿಗೆ ಮನಮೋಹನ್ ಸಿಂಗ್‌ರವರು ಎಂದಿಗೂ ಭಾರತಿಯರ ಮನದಲ್ಲಿ ಉಳಿಯಲಿದ್ದಾರೆ ಎಂದು ತಿಳಿಸಿದ್ದಾರೆ.

ಯುವ ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆಗೆ ಖಂಡನೆ:

ಸಚಿವ ಪ್ರಿಯಾಂಕ ಖರ್ಗೆಯವರ ಆಪ್ತನ ಕೊಲೆ ಬೆದರಿಕೆಯಿಂದ, ನಮ್ಮ ಜಿಲ್ಲೆಯ ಭಾಲ್ಕಿ ತಾಲೂಕಿನ ಕಟ್ಟಿ ತೂಗಾಂವ ಗ್ರಾಮದ ಸಚಿನ ಪಂಚಾಳ ಎನ್ನುವ ಯುವ ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ ತಿಳಿದು ತುಂಬಾ ನೋವಾಗುತ್ತಿದೆ. ಬದುಕಿ ಬಾಳಬೇಕಿದ್ದ ಒಂದು ಜೀವ, ದೊಡ್ಡವರ ಗೊಡ್ಡು ಬೆದರಿಕೆಗೆ ಬಲಿಯಾಗಿರುವುದು ಅತ್ಯಂತ ದುಃಖಕರ. ದೇವರು ಮೃತ ಯುವಕನ ಆತ್ಮಕ್ಕೆ ಶಾಂತಿ ನೀಡಿ, ಅವರ ಕುಟುಂಬ ವರ್ಗಕ್ಕೆ ಈ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವುದಾಗಿ ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ದುಃಖವನ್ನು ವ್ಯಕ್ತಪಡಿಸಿದ್ದಾರೆ.

ಡೆತ್‌ನೋಟ್ ಉಲ್ಲೇಖವಾಗಿರುವ ಪ್ರಿಯಾಂಕಾ ಖರ್ಗೆಯವರ ಆಪ್ತನಿಗೆ ಮತ್ತು ಸಹಚರರಿಗೆ ಪೊಲೀಸರು ಇಲ್ಲಿಯವರೆಗೆ ಬಂಧಿಸದೆ, ರಕ್ಷಣೆ ನೀಡುತ್ತಿರುವುದು ಖಂಡನೀಯ, ಈ ಸರ್ಕಾರ ಕೊಲೆಗಡುಕರಿಗೆ, ಪುಂಡರಿಗೆ ರಕ್ಷಿಸಲು ಇದೆಯಾ ಎಂದು ಪ್ರಶ್ನಿಸಿದ್ದಾರೆ. ಕೂಡಲೇ ಆರೋಪಿಗಳನನ್ನು ಬಂಧಿಸಿ, ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು, ನಮ್ಮ ಯುವಕನ ಸಾವಿಗೆ ನ್ಯಾಯ ಕೊಡಬೇಕು ಮತ್ತು ಸರ್ಕಾರದಿಂದ ಈ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದಾರೆ. ಇಲ್ಲವಾದಲ್ಲಿ ಈ ಸರ್ಕಾರದ ವಿರುದ್ಧ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಸಚಿವ ಪ್ರೀಯಾಂಕ ಖರ್ಗೆಯವರು ರಾಜೀನಾಮೆ ನೀಡಬೇಕು, ತನಿಖೆಗೆ ಸಹಕಾರ ನೀಡಬೇಕೆಂದು ಒತ್ತಾಯಿಸಿದ್ದಾರೆ. ಉಸ್ತುವಾರಿ ಮಂತ್ರಿ ಈಶ್ವರ ಖಂಡ್ರೆ ಈ ವಿಷಯದ ಬಗ್ಗೆ ಮೌನವಹಿಸಿರುವುದು ನಿಜಕ್ಕೂ ನಾಚಿಕೆಗೇಡಿತನ, ಎಲ್ಲದಕ್ಕೂ ಪ್ರತಿಕ್ರೀಯಿಸುವ ಈಶ್ವರ ಖಂಡ್ರೆ ಇಲ್ಲಿಯವರೆಗೆ ಇದರ ಬಗ್ಗೆ ಒಂದೆ ಒಂದು ಮಾತನಾಡಿಲ್ಲಾ, 4 ಬಾರಿ ಭಾಲ್ಕಿ ಕ್ಷೇತ್ರದಿಂದ ಗೆದ್ದು, ಅದೇ ಕ್ಷೇತ್ರದ ಯುವಕನ ಸಾವಿಗೆ ಖಂಡಿಸದಿರುವುದರಿಂದ ತಾವೊಬ್ಬ ಸಮಯ ಸಾಧಕ ಎಂಬುದು ಗೊತ್ತಾಗುತ್ತದೆ ಎಂದು ತಿಳಿಸಿದ್ದಾರೆ.

ಈ ಕಾಂಗ್ರೆಸ್ ಸರ್ಕಾರದಲ್ಲಿ ಅಭಿವೃದ್ಧಿಗೂ ದುಡ್ಡಿಲ್ಲಾ, ಅಮಾಯಕರ ಜೀವಕ್ಕೂ ಬೆಲೆಯಿಲ್ಲಾ, ಇದ-ರಿಂದ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ, ಬಡವರ ಮಕ್ಕಳ ಶಾಪ ತಟ್ಟದೇ ಬಿಡದು ಈ ದರಿದ್ರ ಸರ್ಕಾರಕ್ಕೆ ಹಾಗೂ ಎಲ್ಲಾ ಸಚಿವರುಗಳಿಗೆ ಎಂದು ಮಾಜಿ ಸಚಿವ ಭಗವಂತ ಖೂಬಾ ಆಕ್ರೋಷ ಹೊರಹಾಕಿದ್ದಾರೆ.

ಈ ವಿಷಯಗಳು ತಮ್ಮೆಲ್ಲರ ಗಮನಕ್ಕೆ ತರಲು ಮಾನ್ಯ ಮಾಜಿ ಕೇಂದ್ರ ಸಚಿವರಿಂದ ನಿರ್ದೇಶಿಸಲ್ಪಟ್ಟಿರುತ್ತೇನೆ.

# ಆರ್‌ಟಿಓ ಕಚೇರಿಯಲ್ಲಿ ದುರ್ವರ್ತನೆ ಆರೋಪ: ಜಿಲ್ಲಾಧಿಕಾರಿಗೆ ಮನವಿ ಪತ್ರ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 28 :- ನಗರದ ಆರ್‌ಟಿಓ ಕಚೇರಿಯ ಸಿಬ್ಬಂದಿ ಮೋಟಾರ್ ವಾಹನ ತರಬೇತಿ ಶಾಲೆಯವರೊಂದಿಗೆ ದುರ್ವರ್ತನೆ ತೋರುತ್ತಿದ್ದಾರೆ ಎಂದು ಬೀದರ್ ಮೋಟಾರ ವಾಹನ ತರಬೇತಿ ಶಾಲೆಯ ಸಂಘ ಆರೋಪಿಸಿದೆ.

ಈ ಸಂಬಂಧ ಸಂಘದ ಪದಾಧಿಕಾರಿಗಳು ನಗರದಲ್ಲಿ ಶುಕ್ರವಾರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಮೂಲಕ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಿದರು.

ಮೋಟಾರ್ ವಾಹನ ತರಬೇತಿ ಶಾಲೆಯ ಸಂಘದವರು ತಮ್ಮ ಕಡತಗಳನ್ನು ಆರ್‌ಟಿಓ ಕಚೇರಿಗೆ ತೆಗೆದುಕೊಂಡು ಹೋದರೆ ಅವುಗಳನ್ನು ನೋಡಲು ನಿರಾಕರಿಸಿ ಅವಾಚ್ಯ ಪದಗಳಿಂದ ನಿಂದಿಸುತ್ತಿದ್ದಾರೆ. ಮೂರನೇ ವ್ಯಕ್ತಿಗಳ ಮೂಲಕ ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ. ಇಂತಹವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ಸಂಘದ ಜಿಲ್ಲಾ ಅಧ್ಯಕ್ಷ ಪ್ರಕಾಶ ಗುಮ್ಮೆ, ಕಾರ್ಯದರ್ಶಿ ರಾಜಕುಮಾರ ಬಿರಾದಾರ, ರಾಜ್ಯ ಸಂಘಟನೆ ಕಾರ್ಯದರ್ಶಿ ಶಿವರಾಜ ಜಮಾದಾರ, ಸುಧಾಕರ್ ಬಿರಾದಾರ, ಎಂ.ಡಿ. ಮಕ್ಸೂದ್ ಅಲಿ, ಹರೀಶ, ಅಭಿಷೇಕ್ ಹೊನ್ನಾ ಮತ್ತಿತರರು ಹಾಜರಿದ್ದರು.

# ಜಿಲ್ಲಾ ಕಾರ್ಯದರ್ಶಿಯಾಗಿ ನಾಗಲಿಂಗಯ್ಯ ಆಯ್ಕೆ

ಮಲ್ಲಮ್ಮ ನುಡಿ ವಾರ್ತೆ



ಕಲಬುರಗಿ : ಡಿ.28:ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕಲಬುರಗಿ ಜಿಲ್ಲಾ ಘಟಕದ ಕಾರ್ಯದರ್ಶಿಯಾಗಿ ನಾಗಲಿಂಗಯ್ಯ ಮಠಪತಿಯವರನ್ನು ನೇಮಿಸಿ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಶರಣಕುಮಾರ ಮೋದಿಯವರು ಆದೇಶ ಹೊರಡಿಸಿದ್ದಾರೆ.

ಕಲಬುರಗಿ ಜಿಲ್ಲೆಯಲ್ಲಿ ವೀರಶೈವ ಲಿಂಗಾಯತ ಸಮುದಾಯದ ಸಂಘಟನೆ ಮತ್ತು ಒಗ್ಗಟ್ಟಿಗಾಗಿ ಮತ್ತು ಮಹಾಸಭಾದ ಚಟುವಟಿಕೆಗಳಿಗೆ ವೇಗ ನೀಡುವ ನಿಟ್ಟಿನಲ್ಲಿ ಸಂಘಟನೆ ಮಾಡುವಂತೆ ಮೋದಿಯವರು ತಿಳಿಸಿದ್ದಾರೆ.

# ಹಳ್ಳೂರಿನಲ್ಲಿ ಸಮಗ್ರ ಆರೋಗ್ಯ ತಪಾಸಣಾ ಶಿಬಿರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.28-ಸಮಗ್ರ ಆರೋಗ್ಯ ತಪಾಸಣಾ ಶಿಬಿರಗಳಲ್ಲಿ ಗ್ರಾಮೀಣ ಜನ ತಮಗಿರುವ ಆರೋಗ್ಯ ಸಮಸ್ಯೆಗಳನ್ನು ತಪಾಸಣೆ ಮಾಡಿಸಿಕೊಂಡು ವೈದ್ಯರ ಸಲಹೆ ಪಡೆದು ಆರೋಗ್ಯವಂತರಾಗಿರುವಂತೆ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯ ಆಪ್ತ ಸಮಾಲೋಚಕಿ ಸಾವಿತ್ರಿ ಕೊನ್ನೂರ ಹೇಳಿದರು.

ಸಮೀಪದ ಹಳ್ಳೂರ ಗ್ರಾಮದಲ್ಲಿ ಬಸವಣ್ಣನ ಜಾತ್ರಾ ಮಹೋತ್ಸವದ ಅಂಗವಾಗಿ ಬಾಗಲಕೋಟೆ ಜಿಲ್ಲಾ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಬೇವೂರ, ಗ್ರಾಮ ಪಂಚಾಯತಿ ಹಳ್ಳೂರ, ಚೈತನ್ಯ ಮಹಿಳಾ ಸಂಘ ಮುಧೋಳ ಹಾಗೂ ಮಿಲನ್ ಸಂಘ ಎಲ್ ಡಬ್ಲ್ಯು ಎಸ್ ಬಾಗಲಕೋಟೆ ಇವರ ಸಹಯೋಗದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಸಮಗ್ರ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

ವಯೋವೃದ್ಧರು, ಮಕ್ಕಳು, ಮಹಿಳೆಯರು ಇಂತಹ ಶಿಬಿರಗಳಲ್ಲಿ ತಮಗಿರುವ ಆರೋಗ್ಯ ತೊಂದರೆಗಳನ್ನು ವೈದ್ಯರ ಗಮನಕ್ಕೆ ತಂದು ತಪಾಸಣೆ ಮಾಡಿಸಿಕೊಳ್ಳಬೇಕು. ವೈದ್ಯರ ಸಲಹೆ ಪಡೆದು ಆರೋಗ್ಯವಂತರಾಗಿ ಜೀವನ ಸಾಗಿಸಬೇಕು ಎಂದು ಸಾವಿತ್ರಿ ಹೇಳಿದರು.

ಶಿಬಿರನ್ನು ಸಸಿಗೆ ನೀರುಣಿಸುವ ಮೂಲಕ ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಮಹಾಂತೇಶ ಮಣಿನಾಗರ ಉದ್ಘಾಟಿಸಿದರು. ನಾಗನಗೌಡ ದೊಡ್ಡನಗೌಡರ, ಶರಣಯ್ಯ ಜುಕ್ತಿಮಠ, ಶರಣಪ್ಪಗೌಡ ಮೇಟಿ, ಉಮೇಶಗೌಡ ಪಾಟೀಲ, ರಾಮನಗೌಡ ಪಾಟೀಲ, ಬಸವರಾಜ ಅಥಣಿ, ಶಂಕರಲಿಂಗಪ್ಪ ಸಜ್ಜನ, ಸಿಎಚ್‌ಓ ವೀಣಾ ಕಾತರಕಿ, ಪ್ರಯೋಗಶಾಲಾ ತಂತ್ರಜ್ಞರಾದ ಸಂತೋಷ ಸುತಗುಂಡಾರ ಹಾಗೂ ಸಿ.ವೈ.ಸದಪ್ಪಗೌಡ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಶಿಬಿರದಲ್ಲಿ ಬಿಪಿ, ಶುಗರ್, ಕಣ್ಣು, ಕಿವಿ, ಮೊಣಕಾಲು ನೋವು, ರಕ್ತ ತಪಾಸಣೆ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳನ್ನು ಹೊಂದಿದ 500 ಕ್ಕೂ ಹೆಚ್ಚು ಜನರ ತಪಾಸಣೆ ನಡೆಸಲಾಯಿತು.

# ಮನಮೋಹನ್ ಸಿಂಗ್ ಸ್ಮಾರಕಕ್ಕೆ ಜಾಗ ನೀಡದೆ ಇರುವುದು ತಪ್ಪು, ಕೇಂದ್ರ ಸರ್ಕಾರ ಹೃದಯ ಶ್ರೀಮಂತಿಕೆ ತೋರಿಸಬೇಕಾಗಿತ್ತು: ಡಿಕೆಶಿ





ಮಲ್ಲಮ್ಮ ನುಡಿ ವಾರ್ತೆ

ಹೊಸದಿಲ್ಲಿ: ಮಲ್ಲಿಕಾರ್ಜುನ ಖರ್ಗೆ ಅವರು ದೆಹಲಿಯಲ್ಲಿ ಮನಮೋಹನ್ ಸಿಂಗ್ ಸ್ಮಾರಕ ನಿರ್ಮಾಣಕ್ಕೆ ಜಾಗ ನೀಡುವಂತೆ ಮನವಿ ಬಗ್ಗೆ ಕೇಳಿದಾಗ, ಸ್ಮಾರಕ ನಿರ್ಮಾಣಕ್ಕೆ ಅವಕಾಶ ನೀಡದೆ ಇರುವುದು ಕೇಂದ್ರ ಸರ್ಕಾರದ ತಪ್ಪು ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದರು.

ಗುರುವಾರ ರಾತ್ರಿ ತುರ್ತು ಸುದ್ದಿಗೋಷ್ಠಿ ನಡೆಸಿದ ಡಿಕೆ ಶಿವಕುಮಾರ್, 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಕಾರ್ಯಕ್ರಮ ರದ್ದು

ದೆಹಲಿಯಲ್ಲಿ ಶನಿವಾರ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ಕೇಳಿದ್ದರಲ್ಲಿ ತಪ್ಪಿಲ್ಲ. ಕೇಂದ್ರ ಸರ್ಕಾರ ಹೃದಯ ಶ್ರೀಮಂತಿಕೆಯನ್ನು ತೋರಿಸಬೇಕಾಗಿತ್ತು. ಒಳ್ಳೆಯ ಮನಸುಗಳು ಈ ಕೆಲಸಕ್ಕೆ ಹೃದಯ ಶ್ರೀಮಂತಿಕೆಯನ್ನು ತೋರಿಸಲಿ ಎಂದು ನಂಬಿದ್ದೇವೆ. ಈಗಲೂ ಕಾಂಗ್ರೆಸ್ ಪಕ್ಷದ ಬೇಡಿಕೆಗೆ ಮನ್ನಣೆ ದೊರೆಯುತ್ತದೆ ಎನ್ನುವ ವಿಶ್ವಾಸವಿದೆ" ಎಂದರು.

ಇತಿಹಾಸ ನನ್ನನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತದೆ ಎನ್ನುವ ಮನಮೋಹನ್ ಸಿಂಗ್ ಅವರ ಮಾತಿನ ಬಗ್ಗೆ ಕೇಳಿದಾಗ, "ನೀವು (ಮಾಧ್ಯಮದವರು), ವಿರೋಧ ಪಕ್ಷದವರು ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ ಎಂದು ಹೇಳುತ್ತಾ ಇದ್ದರು. ಅದು ಇಂದು ಆಗುತ್ತಿದೆ" ಎಂದರು.

ಜನಪರ ಕಾಯ್ದೆಗಳ ಮೂಲಕ ಭಾರತದ ಭವಿಷ್ಯವನ್ನು ಬದಲಾಯಿಸಿದವರು


"ಅರಣ್ಯ ಭೂಮಿ ಹಕ್ಕು ಕಾಯ್ದೆ, ಆಹಾರ ಭದ್ರತಾ ಕಾಯ್ದೆ, ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆ, ಶಿಕ್ಷಣದ ಹಕ್ಕು ಕಾಯ್ದೆಗಳು ಗ್ರಾಮೀಣ ಭಾಗದ ಜನರ ಏಳಿಗೆಗೆ ಕಾರಣವಾಯಿತು. ಮಾಹಿತಿ ಹಕ್ಕು ಸೇರಿದಂತೆ ಹಲವಾರು ಯೋಜನೆಗಳು ಆಡಳಿತದಲ್ಲಿ ಪಾರದರ್ಶಕತೆ ತಂದವು. ಆರೋಗ್ಯ ಕ್ಷೇತ್ರದಲ್ಲಿ ಆಶಾ ಕಾರ್ಯಕರ್ತರ ಯೋಜನೆ ಜಾರಿಗೆ ತಂದರು. ತಾವು ಜಾರಿಗೊಳಿಸಿದ ಅನೇಕ ಕಾಯ್ದೆಗಳ ಮೂಲಕ ಮನಮೋಹನ್ ಸಿಂಗ್ ಅವರು ಜನ ಸಾಮಾನ್ಯರ ನಡುವೆ ಇಂದಿಗೂ ಜೀವಂತವಾಗಿದ್ದಾರೆ. ಸಿಂಗ್ ಅವರು ಜನಸಾಮಾನ್ಯರ ಬದುಕಿನಲ್ಲಿ ಬದಲಾವಣೆ ತಂದವರು" ಎಂದು ಹೇಳಿದರು.


"ಭೂಸ್ವಾಧೀನವಾದ ನಂತರ ಅನೇಕ ರೈತರಿಗೆ ತಕ್ಕನಾದ ಪರಿಹಾರ ಸಿಗುತ್ತಿರಲಿಲ್ಲ. ರೈತರ ಭೂಮಿಗೆ ನ್ಯಾಯಯುತವಾದ ಪರಿಹಾರ ನೀಡಿದರು. ಸಮಾಜದ ಎಲ್ಲಾ ವರ್ಗದ ಜನರನ್ನು ಗಮನದಲ್ಲಿಟ್ಟುಕೊಂಡು ಆಡಳಿತ ನಡೆಸಿದರು. ಮಾಧ್ಯಮಗಳು ಹಾಗೂ ವಿರೋಧ ಪಕ್ಷಗಳು ಮನಮೋಹನ್ ಸಿಂಗ್ ಅವರ ಕೆಲಸಗಳನ್ನು ಈಗ ನೆನಪಿಸಿಕೊಳ್ಳುತ್ತಿವೆ" ಎಂದರು.

"ಸಂವಿಧಾನ ಹಾಗೂ ನಮ್ಮ ನೆಲದ ಕಾನೂನುಗಳನ್ನು ರಕ್ಷಣೆ ಮಾಡಿದವರು ಮನಮೋಹನ್ ಸಿಂಗ್. ಆರ್ಥಿಕ ಸಚಿವರಾಗಿದ್ದ ಕಾಲದಿಂದ ಇಲ್ಲಿಯತನಕ ಈ ದೇಶದ ಆರ್ಥಿಕತೆಯನ್ನು ಸುಭದ್ರವಾಗಿ ಇಡಲು ಶ್ರಮಿಸಿದರು. ಇದನ್ನು ವಿರೋಧ ಪಕ್ಷದವರು ಕೂಡ ಒಪ್ಪಿದ್ದಾರೆ" ಎಂದರು.

"ಸೋನಿಯಾ ಗಾಂಧಿ ಅವರು ತಮಗೆ ದೊರೆತ ಪ್ರಧಾನಿಯಾಗುವ ಅವಕಾಶವನ್ನು ನಿರಾಕರಿಸಿ, ಈ ದೇಶಕ್ಕೆ ಉತ್ತಮ ಆರ್ಥಿಕ ತಜ್ಞನ ಅವಶ್ಯಕತೆಯಿದೆ ಎಂದು ಅಧಿಕಾರ ತ್ಯಾಗ ಮಾಡಿದರು. ನೆಹರು-ಗಾಂಧಿ ಕುಟುಂಬದ ತ್ಯಾಗವನ್ನು ಈ ದೇಶದ ಇತಿಹಾಸ ಮರೆಯುವುದಿಲ್ಲ" ಎಂದು ತಿಳಿಸಿದರು.

# ಮೃತ ಕಾರ್ಮಿಕನ ಕುಟುಂಬದ ನೆರವಿಗೆ ನಿಂತ ಅಶ್ವಥ್ ಮರೀಗೌಡ್ರು.





(ಶಿವು ರಾಠೋಡ)

ಮಲ್ಲಮ್ಮ ನುಡಿ ವಾರ್ತೆ

ಹುಣಸಗಿ:ಬೆಂಗಳೂರಿನ ಸರ್ಜಾಪುರ ರಸ್ತೆಯ ವರ್ತೂರಿನ ಕಂಪನಿಯಲ್ಲಿ ರಾತ್ರಿ ಸಮಯದಲ್ಲಿ ಗದಗ ಜಿಲ್ಲೆಯ ಕಾರ್ಮಿಕ ಸಹಜ ಮರಣವನ್ನು ಹೊಂದಿದ್ದು ನೆರವು ಕಟ್ಟಡ ಕಾರ್ಮಿಕ ಮತ್ತು ಅಸಂಘಟಿತ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷರಾದ ಅಶ್ವಥ್ ಮರಿಗೌಡ್ರು ಮತ್ತು ಗದಗ ಜಿಲ್ಲೆಯ ಶ್ರೀ ಸಿದ್ದರಾಮೇಶ್ವರ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷರಾದ ಬಸವರಾಜ ವಡ್ಡರ್ ರವರು ಸಂಸ್ಥೆಯ ಗುತ್ತಿಗೆದಾರರಿಂದ ಮೃತರ ಕುಟುಂಬದವರಿಗೆ ಮೂರು ಲಕ್ಷ ಪರಿಹಾರವನ್ನು ಕೊಡಿಸಲಾಯಿತು.

ಇದೇ ಸಂಧರ್ಭದಲ್ಲಿ ದೇವರು ಮೃತರ ಕುಟುಂಬದವರಿಗೆ ದುಃಖವನ್ನು ತಡೆಯುವಂತಹ ಶಕ್ತಿಯನ್ನು ನೀಡಲಿ ಹಾಗೂ ಮೃತರ ಆತ್ಮ-ಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವುದರೊಂದಿಗೆ ಮೃತರ ಕುಟುಂಬದವರ ಜೊತೆಗೂಡಿ ಸಂತಾಪ ಸೂಚಿಸಿದರು.

# ಕಾಂಗ್ರೆಸ್‌ನಿಂದ ಮಾಜಿ ಪ್ರಧಾನಿಗೆ ಶ್ರದ್ಧಾಂಜಲಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 28 :- ಕಾಂಗ್ರೆಸ್ ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಶನಿವಾರ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಶಿವನಗರದ ಪಕ್ಷದ ಜಿಲ್ಲಾ ಘಟಕದ ಕಚೇರಿಯಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಅವರು ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಿದರು. ಅವರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ಮಾಡಲಾಯಿತು.

ಪ್ರಧಾನಿ ಸೇರಿ ವಿವಿಧ ಹುದ್ದೆಗಳಲ್ಲಿ ಮನಮೋಹನ್ ಸಿಂಗ್ ಅವರು ದೇಶಕ್ಕೆ ನೀಡಿರುವ ಕೊಡುಗೆಯನ್ನು ಪಕ್ಷದ ಮುಖಂಡರು ಕೊಂಡಾಡಿದರು.

ಮಾಜಿ ಸಂಸದ ನರಸಿಂಗರಾವ್ ಸೂರ್ಯವಂಶಿ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಅರವಿಂದಕುಮಾರ ಅರಳಿ, ಕೆ. ಪುಂಡಲೀಕರಾವ್, ಕೆಪಿಸಿಸಿ ಉಪಾಧ್ಯಕ್ಷ ಜಾನ್ ವೆಸ್ಲಿ, ಪ್ರಧಾನ ಕಾರ್ಯದರ್ಶಿ ಸಂಜಯ್ ಜಾಗೀರದಾರ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಗೀತಾ ಪಂಡಿತ ಚಿದ್ರಿ, ನಗರಸಭೆ ಸ್ಥಾಯಿ ಸಮಿತಿಯ ಅಧ್ಯಕ್ಷ ಪ್ರಶಾಂತ ದೊಡ್ಡಿ, ಸದಸ್ಯ ಹಣಮಂತ ಮಲ್ಕಾಪುರೆ, ಮಾಜಿ ಸದಸ್ಯ ಧನರಾಜ ಹಂಗರಗಿ, ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ದತ್ತಾತ್ರಿ ಮೂಲಗೆ, ಅಹಸನ್ ಕಮಲ್ ಪರ್ವೇಜ್, ಮುಖಂಡರಾದ ಲಿಯಾಖತ್ ಉಲ್ಲಾ ಖಾನ್(ಶಾಕೀರ್), ಸುನೀಲ್ ಬಚ್ಚನ್, ವಿಶಾಲ್ ದೊಡ್ಡಿ, ಶಂಕರ ರೆಡ್ಡಿ, ಡಿ.ಕೆ. ಸಂಜುಕುಮಾರ, ರಾಕೇಶ ಕುರುಬಖೇಳಗಿ, ಚಂದ್ರಕಾಂತ, ಸಚಿನ್ ಮಲ್ಕಾಪುರ, ಸಂಗಮೇಶ ಮೂಲಗೆ, ರವೀಂದ್ರ, ಡಾ. ಫಯಾಜ್ ಪಟೇಲ್, ಮಾರುತಿ ಶಾಖಾ, ಲೋಕೇಶ್ ಮಂಗಲಗಿ, ಪೂಜಾ ಜಾರ್ಜ್, ತೇಜಮ್ಮ, ವಿಜಯಲಕ್ಷ್ಮಿ, ಶಾಹೀನ್ ಬೇಗಂ, ಜ್ಯೋತಿ, ಲಕ್ಷ್ಮಿ, ಪ್ರೇಮಾ ಪಾಲ್ಗೊಂಡಿದ್ದರು.

# ಬದುಕಿನ ಚಿತ್ರಣದ ಪ್ರತಿ ಗೆರೆಯೂ ಕಲಾತ್ಮಕವಾಗಿರಲಿ – ಹಾರಕೂಡ ಶ್ರೀ



(ವರದಿ.ಡಿ.ಕೆ. ಪ್ರಹ್ಲಾದ.)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:-ಅಮೂಲ್ಯವಾದ ಬದುಕಿನ ಚಿತ್ರಣ ರೂಪಿಸಿಕೊಳ್ಳುವಲ್ಲಿ ಪ್ರತಿ ಗೆರೆಯು ಕಲಾತ್ಮಕವಾಗಿಯೂ, ತರ್ಕ ಬದ್ಧವಾಗಿಯೂ ಮೂಡಿಸಬೇಕಾಗಿರುವುದು ಹಾಗೂ ವಿವೇಕಪ್ರಜ್ಞೆಯಿಂದ ಕೂಡಿರಬೇಕಾಗಿರುವುದು ಅವಶ್ಯ ಎಂದು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು. ತಾಲೂಕಿನ ಕೋಹಿನೂರ ಗ್ರಾಮಸ್ಥರಿಂದ ಶ್ರೀ ಚನ್ನಮಲ್ಲೇಶ್ವರ ದೇವಸ್ಥಾನದಲ್ಲಿ ಆಯೋಜಿಸಿದ ಪ್ರಶಸ್ತಿ ಸಮರ್ಪಣೆ ಗುರುವಂದನೆ ಹಾಗೂ 750ನೇ ತುಲಾಭಾರ ಸೇವೆ ಸಮಾರಂಭದ ದಿವ್ಯ ಸನ್ನಿಧಾನ ವಹಿಸಿದ ಶ್ರೀಗಳು ಗುರುಭಕ್ತಿ, ದೈವಭಕ್ತಿಯಿಂದ ಹೃದಯದಲ್ಲಿ ಸತ್ ಚಿಂತನೆಯ ಗಂಗೋತ್ರಿ ಉದ್ಭವಿಸಿ ಸಮಾಜದಲ್ಲಿ ಶಾಂತಿ ಸಹಬಾಳ್ವೆ ನೆಲೆಗೊಳ್ಳುತ್ತದೆ.

ಸಮಾಜಮುಖಿಯಾದ ಸತ್ಕಾರ್ಯಗಳನ್ನು ಮಾಡುವುದರಿಂದ, ಎಲ್ಲೆಡೆ ಜ್ಞಾನದ ಬೆಳಕು ಹರಡಿ ವಿಶ್ವವೇ ಒಂದು ಪರಂಧಾಮವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ.

ಬಸವಾದಿ ಶರಣರ ಶ್ರೇಷ್ಠ ಮೌಲ್ಯಗಳಿಗೆ ಧಕ್ಕೆ ಬಾರದಂತೆ ಶುಭ್ರವಾದ, ಸರಳವಾದ ಜೀವನ ಸಾಗಿಸುವುದೇ ದೈವತ್ವದ ನೈಜ ಗುಟ್ಟು ಎಂದು ಹೇಳಿದರು.

ಸಹ ಬಾಳ್ವಿಗೆ ಹೆಸರಾದ ಭಕ್ತಿ ಪ್ರಧಾನವಾದ ಕೋಹಿನೂರ ಗ್ರಾಮ ಕಲೆ, ಸಾಹಿತ್ಯ, ಸಂಗೀತ, ಶಿಕ್ಷಣ ಕ್ಷೇತ್ರಗಳಲ್ಲಿ ಸಾಧನೆ ಮೆರೆದಿರುವುದು ಹೆಮ್ಮೆಯ ವಿಷಯ.

ಇಂತಹ ಸಾತ್ವಿಕ ಗ್ರಾಮ ಕೋಹಿನೂರಿನ ಭಕ್ತರೆಲ್ಲರೂ ಸೇರಿ ನಮಗೆ ಸಮರ್ಪಿಸಿದ "ಸಮನ್ವಯ ಸಂತ" ಪ್ರಶಸ್ತಿಯನ್ನು ಸಂತೋಷದಿಂದ ಸ್ವೀಕರಿಸಿ, ಗುರುವಂದನೆ ಹಾಗೂ ತುಲಾಭಾರ ಸೇವೆಯಿಂದ ಹಾರಕೂಡ ಲಿಂಗೈಕ್ಯ ಚನ್ನಬಸವ ಶಿವಯೋಗಿಗಳು ತೃಪ್ತರಾಗಿದ್ದು, ಸದ್ಗುರುವಿನ ಕೃಪಾಧಾರೆ ಕೋಹಿನೂರಿನತ್ತ ಹರಿದು ಬರಲಿ ಹಾಗೂ ಸರ್ವರಿಗೂ ಸನ್ಮಂಗಳವಾಗಲೆಂದು ಶುಭ ಹಾರೈಸಿದರು. ಅಂಬರಾಯ ಉಗಾಜಿ ಹಾರಕೂಡ ಶ್ರೀಗಳ ದಿವ್ಯ ವಾಣಿ ಸಂದೇಶವಾಚನ ಮಾಡಿದರು.

ಓಂಕಾರ ಪಾಟೀಲ ಅನಿಸಿಕೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವೀರಣ್ಣ ಮೂಲಗೆ, ಮೇಘರಾಜ ನಾಗರಾಳೆ, ರಾಜಶ್ರೀ ಹಿತವಂತ, ಮಲ್ಲಿನಾಥ ಹಿರೇಮಠ ಹಾರಕೂಡ, ಚಂದ್ರಕಾಂತ ಹುಸಗೆ, ಶಿವಾನಂದ ಪಾಟೀಲ, ಶಿವು ಸೆಟಗಾರ, ಸಂಜು ಸೂಗರೆ.

ಆನಂದ ಪಾಟೀಲ, ಶಿವಾ ಕಲೋಜಿ, ಅಂಬರೀಶ ಮೂಲಗೆ, ಸಂತೋಷ ಲಾಡುವಂತೆ, ಶಾಂತಲಿಂಗ ಬಿರಬಿಟ್ಟೆ, ಅನಿಲ ಮಣಕೋಜಿ, ಪರಶುರಾಮ ಜಡಗೆ, ಮಲ್ಲಿಕಾರ್ಜುನ ಹಡಪದ, ಬಲಭೀಮ ಅಣಕಲ್, ಬಸವರಾಜ ನಿಂಬಾಳೆ, ಅಂಬಾದಾಸ ಸಜ್ಜನ್, ನರಸಪ್ಪ ಜಮಾದಾರ, ಪ್ರಶಾಂತ ಲಕಮಾಜಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ರತಿಕಾಂತ ಕೋಹಿನೂರ ಸ್ವಾಗತಿಸಿದರು. ಪ್ರಭು ಕಲೊಜಿ ಹಾಗೂ ಪವಾಡಶೆಟ್ಟಿ ನಿರೂಪಿಸಿದರು. ಕರಬಸಯ್ ಸ್ವಾಮಿ ಪ್ರಾರ್ಥನಾ ಗೀತೆ ನಡೆಸಿಕೊಟ್ಟರು. ಕಾರ್ತಿಕ ಸ್ವಾಮಿ ಎಲ್ಲದಗುಂಡಿ. ಶರಣಪ್ಪ ಜಮಾದಾರ್ ಸಂಗೀತ ಸೇವೆ ಸಲ್ಲಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಅಲಂಕೃತ ಸಾರೋಟಿನಲ್ಲಿ ಹಾರಕೂಡ ಪೂಜ್ಯರ ಅದ್ದೂರಿ ಮೆರವಣಿಗೆ ಜರುಗಿತು.

# ಹುಲಕುಂಟಿ ಮಠದಲ್ಲಿ ಅಯ್ಯಪ್ಪ ಸ್ವಾಮಿ ಪೂಜೆ

(ಮಲ್ಲಪ್ಪಾ ಟಿ ಹಾಸಗೊಂಡ)



ಭಾಲ್ಕಿ: ಖಟಕಚಿಂಚೋಳಿ ಗ್ರಾಮದ ಹುಲಕುಂಟಿ ಶಾಂತಲಿಂಗೇಶ್ವರ ಮಠದಲ್ಲಿ ಅಯ್ಯಪ್ಪ ಸ್ವಾಮಿ ಪಡಿಪೂಜೆ ನಡೆಯಿತು. ಪಡಿಪೂಜೆ ನಿಮಿತ್ಯ ವಿನಾಯಕ, ಕಾರ್ತಿಕೇಯ, ಅಯ್ಯಪ್ಪ ಸ್ವಾಮಿ ಮೂರ್ತಿಗೆ ಪೂಜೆ ಸಲ್ಲಿಸಿ, ಅಭಿಷೇಕ ನೆರವೇರಿಸಿದರು ನಂತರ ಭಜನೆ ಪ್ರಸಾದ ವ್ಯವಸ್ಥೆ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಮಾಲಾಧಾರಿ ಗುರುಸ್ವಾಮಿ ಡಾ. ಶೈಲೇಶ್ ಅಷ್ಟೂರೆ ಪ್ರತಿ ವರ್ಷದಂತೆ ಈ ವರ್ಷವೂ ಕಾರ್ತಿಕ ಮಾಸದಲ್ಲಿ 48 ದಿನಗಳವರೆಗೆ ವಿಶೇಷ ಪೂಜೆ ಸಲ್ಲಿಸಿ ಸಂಕ್ರಾಂತಿ ಹಬ್ಬದಂದು ಶಬರಿಗೆ ಹೋಗಿ ದರ್ಶನ ಪಡುತ್ತೇವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪ್ರಮುಖರಾದ ಚಂದ್ರಶೇಖರ್ ರೆಡ್ಡಿ, ಸೋಮಶೇಖರ್ ಕೋರಿ, ಲೋಕೇಶ್, ಲೋಕೇಶ್ ಪವಾರ್, ಶಿವಕುಮಾರ ಸ್ವಾಮೀ, ರಾಜು ಅಟ್ಟೂರು, ಸಂಜು ಚಮರೆಡ್ಡಿ, ಭದ್ರೇಶ್ ಸ್ವಾಮಿ, ಅಮರ್, ಮೃತ್ಯುಂಜಯ ಮಠ, ಅಭಿಷೇಕ್, ಕಾಶಿನಾಥ್, ಸಂಗಮೇಶ್, ಮಾಲಧಾರಿಗಳು ಉಪಸ್ಥಿತರಿದ್ದರು, ಉದ್ಯಮಿ ರಾಹುಲ್ ಸುಂಟೆ ಪ್ರಸಾದ ವ್ಯವಸ್ಥೆ ನೆರವೇರಿಸಿದರು.

### ಇಂದು ಗೆಜೆಟೆಡ್ ಪ್ರೋಬೇಷನರ್ಸ್ ಹುದ್ದೆಗಳ ಮರುಪರೀಕ್ಷೆ:

# ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಿ ಎಸಿ ಆದೇಶ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಡಿಸೆಂಬರ್.28- 2023-24ನೇ ಸಾಲಿನ ಗೆಜೆಟೆಡ್ ಪ್ರೋಬೇಷನರ್ಸ್ ಗ್ರೂಪ್ 'ಎ' ಮತ್ತು 'ಬಿ' ವೃಂದದ ಒಟ್ಟು 384 ಹುದ್ದೆಗಳ ಪೂರ್ವಭಾವಿ ಮರುಪರೀಕ್ಷೆಗಳು ಡಿಸೆಂಬರ್.29 ರಂದು ಬೀದರ ಜಿಲ್ಲೆಯ ಒಟ್ಟು 19 ಪರೀಕ್ಷಾ ಕೇಮದ್ರಗಳಲ್ಲಿ ನಡೆಯುತ್ತಿದ್ದು, ಸದರಿ ಮರುಪರೀಕ್ಷೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ದೋಷರಹಿತವಾಗಿ ನಡೆಸಲು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ-2023ರ ಕಲಂ 163 (1) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜಿಲ್ಲೆಯ 19 ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯ ಪ್ರದೇಶದಲ್ಲಿ ನಿಷೇದಾಜ್ಞೆಯನ್ನು ಜಾರಿಗೊಳಿಸಿ ಬೀದರ ಸಹಾಯಕ ಆಯುಕ್ತರು ಹಾಗೂ ಉಪ ವಿಭಾಗಾಧಿಕಾರಿಗಳಾದ ಮೊಹಮ್ಮದ್ ಶಕೀಲ್ ಅವರು ಆದೇಶಿಸಿರುತ್ತಾರೆ.

# ಹೊಸ ವರ್ಷ ಸ್ವಾಗತಕ್ಕೆ ನಮ್ಮ ಸಂಸ್ಕೃತಿ ಮರೆಯದಿರಿ

(ಮಲ್ಲಪ್ಪಾ ಟಿ ಹಾಸಗೊಂಡ)



ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ: 2025ರ ಹೊಸ ವರ್ಷ ಆಗಮನಕ್ಕೆ ದಿನಗಣನೇ ಶುರುವಾಗಿದ್ದು ಯುವಕರಲ್ಲಿ ಅತ್ಯಂತ ಹರ್ಷ, ಉಲ್ಲಾಸ, ಉತ್ಸಾಹ ತುಂಬಿರುತ್ತದೆ. ಆದರೆ ಹೊಸ ವರ್ಷದ ಸ್ವಾಗತಕ್ಕೆ ನಮ್ಮ ಸಂಸ್ಕೃತಿ ಪರಂಪರೆಯನ್ನು ಮರೆಯಬಾರದು ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ತಿಳಿಸಿದ್ದಾರೆ.

ಭಾರತೀಯ ಸಂಸ್ಕೃತಿಯ ಮಹಾಪುರುಷರು ಮತ್ತು 12ನೇ ಶತಮಾನದ ಬಸವಾದಿ ಶರಣರು ದೇಹವೇ ದೇವಾಲಯವೆಂದು ಹೇಳಿದ್ದಾರೆ. ಹೊಸ ವರ್ಷದ ಹರ್ಷದಲ್ಲಿ ನಾವು ನಮ್ಮ ದೇಹಕ್ಕೆ ಕೆಡಾಗುವ ಹಾಗೆ ನಡೆದುಕೊಳ್ಳುವುದು ಮತ್ತು ನಮ್ಮ ಪರಂಪರೆ ಇಲ್ಲದ ಆಚರಣೆಗಳನ್ನು ಮಾಡುವುದು ನಮಗೆ ಅನೇಕ ಅರ್ಥದಿಂದ ನಷ್ಟಗಳನ್ನು ಉಂಟು ಮಾಡುತ್ತವೆ. ಶರಣರ ದೃಷ್ಟಿಯಲ್ಲಂತು ಪ್ರತಿ ದಿನವೂ, ಪ್ರತಿ ಕ್ಷಣವು ಹೊಸತನದಿಂದಲೇ ಕೂಡಿರುತ್ತದೆ. ಈ ಕ್ಷಣ, ಈ ದಿನ ಮತ್ತೊಮ್ಮೆ ಬರುವುದಿಲ್ಲ. ಪಾಶ್ಚಾತ್ಯಯ ಸಂಸ್ಕೃತಿಯ ಅನುಕರಣೆಯಿಂದ ನಾವು 1ನೇ ಜನೆವರಿ ಹೊಸ ವರ್ಷ ಆಚರಿಸುತ್ತವೆ. ಆದರೆ ಭಾರತೀಯ ಸಂಸ್ಕೃತಿಯ ಪ್ರಕಾರ ಯುಗಾದಿ ನಮಗೆ ಹೊಸ ವರ್ಷದ ಆಚರಣೆಯನ್ನು ತಿಳಿಸುತ್ತದೆ.

ಅದಕ್ಕಾಗಿ ನಾವು ಹೊಸ ವರ್ಷದ ನೆಪದಲ್ಲಿ ಇಲ್ಲಸಲ್ಲದ ಆಚರಣೆಗಳನ್ನು ಮಾಡದೇ ನಮ್ಮಲ್ಲಿ ಜೀವನುತ್ಸಾಹ ತುಂಬುವ ರಚನಾತ್ಮಕ ಕಾರ್ಯಗಳನ್ನು ಮಾಡುವ ಮೂಲಕ ಹೊಸ ವರ್ಷಕ್ಕೆ ಸ್ವಾಗತ ಮಾಡಿದರೆ ಅದು ನಮಗೂ ಮತ್ತು ಸಮಾಜಕ್ಕೂ ಹಿತಕರವಾಗಿ ಪರಿಣಮಿಸುತ್ತದೆ. ಆ ದಿಶೆಯಲ್ಲಿ ವಿಶೇಷವಾಗಿ ಯುವಕರು ಹೊಸ ವರ್ಷದ ಹರ್ಷಕ್ಕೆ ನಮ್ಮ ಸಂಸ್ಕೃತಿಯ ಸ್ಪರ್ಶ ನೀಡುವ ಮೂಲಕ ಆಚರಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾಜಿ ಪ್ರಧಾನಮಂತ್ರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಡಿ.28 :- ನವ ಭಾರತ ಎನ್‌ಜಿಓ ವತಿಯಿಂದ ಇಲ್ಲಿಯ ಪಾಪನಾಶ ಗೇಟ್ ಸಮೀಪ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಿ ಗೌರವಿಸಲಾಯಿತು. ಅವರ ಆತ್ಮಕ್ಕೆ ಶಾಂತಿ ಕೋರಿ ಎರಡು ನಿಮಿಷಗಳ ಮೌನ ಆಚರಿಸಲಾಯಿತು.

ನಗರಸಭೆ ಮಾಜಿ ಅಧ್ಯಕ್ಷ ಮಹಮ್ಮದ್ ಗೌಸ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ರಾಜಶ್ರೀ ಸ್ವಾಮಿ, ಮುಖಂಡ ಶ್ರೀಕಾಂತ ಸ್ವಾಮಿ, ನವ ಭಾರತ ಎನ್‌ಜಿಓ ಅಧ್ಯಕ್ಷ ಡಾ. ಸಂತೋಷಕುಮಾರ, ಕಾರ್ಯದರ್ಶಿ ಸಂತೋಷ್ ಲದ್ದೆ, ಜಂಟಿ ಕಾರ್ಯದರ್ಶಿ ದಿನೇಶ್ ಪವಾರ್, ಖಜಾಂಚಿ ತಾನಾಜಿ ಸಗರ್ ಮತ್ತಿತರರು ಇದ್ದರು.

# ಅಮಿತ್ ಶಾ ಹೇಳಿಕೆಗೆ ಖಂಡನೆ; ಮುಸ್ಲಿಂ ಒಕ್ಕೂಟದಿಂದ ಪ್ರತಿಭಟನೆ




ಮಲ್ಲಮ್ಮ ನುಡಿ ವಾರ್ತೆ

ದಾವಣಗೆರೆ.ಡಿ.28; ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಬಿ.ಆರ್ ಅಂಬೇಡ್ಕರ್ ಅವರಿಗೆ ಅವಮಾನಕರ ಮಾತುಗಳನ್ನಾಡಿದ ಕೇಂದ್ರ ಸಚಿವ ಅಮಿತ್ ಶಾ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ದಾವಣಗೆರೆ ಮುಸ್ಲಿಂ ಒಕ್ಕೂಟದ ಸದಸ್ಯರು ಹಾಗೂ ಮುಖಂಡರು ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಈ ವೇಳೆ ಒಕ್ಕೂಟದ ಸಂಚಾಲಕರಾದ ಟಿ.ಅಸ್ಗರ್ ಮಾತನಾಡಿ ಸಂಸತ್ ಭವನದಲ್ಲಿ ರಾಜ್ಯಸಭಾ ಕಲಾಪ ನಡೆಯುತ್ತಿದ್ದ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಅಮಿತ್ ಶಾ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಬಿ.ಆರ್ ಅಂಬೇಡ್ಕರ್ ಅವರಿಗೆ ಅವಮಾನಕರ ಮಾತುಗಳನ್ನಾಡಿದ್ದಾರೆ ಇದರಿಂದ ನಮ್ಮ ಮನಸ್ಸಿಗೆ ನೋವು ಆಗಿದೆ. ಅಮಿತ್ ಶಾ ಅವರ ಈ ಹೇಳಿಕೆ ಯಿಂದ ಸಂವಿಧಾನ ಒಪ್ಪುವ ದೇಶದ ಬಹುಸಂಖ್ಯಾತ ಜನರ ಭಾವನೆಗಳಿಗೆ ಧಕ್ಕೆ ಉಂಟಾಗಿದೆ ಎಂದರು. ಅಮಿತ್ ಶಾ ಹೇಳಿಕೆಯಿಂದ ದೇಶದಾದ್ಯಂತ ಭಾರಿ ಪ್ರಮಾಣದಲ್ಲಿ ಜನರು ಖಂಡಿಸಿ ಪ್ರತಿಭಟನೆ ಮಾಡುತ್ತಿದ್ದಾರೆ ಅಮಿತ್ ಶಾ ಹೇಳಿಕೆ ದೇಶದ ಸ್ವಾಸ್ಥ್ಯ ಹಾಳು ಮಾಡುತ್ತಿದೆ ಆದ್ದರಿಂದ ಶಾ ಅವರನ್ನು ಕೂಡಲೇ ಕೇಂದ್ರ ಸಚಿವ ಸ್ಥಾನದಿಂದ ಹಾಗೂ ಲೋಕಸಭಾ ಸದಸ್ಯ ಸ್ಥಾನದಿಂದ ವಜಾಗೊಳಿಸಬೇಕೆಂದರು.

### ಭಾಲ್ಕಿ ತಾಲೂಕಿನ ಆಳಂದಿ ಗ್ರಾಮದಲ್ಲಿ ಜರುಗಿದ ಅಯ್ಯಪ್ಪ ಸ್ವಾಮಿ ಪಡಿಪೂಜಾ

# ಭಕ್ತಿ ಸಂಭ್ರಮದಿಂದ ಪಡಿಪೂಜಾ ನೆರವೇರಿಸಿದ ಅಯ್ಯಪ್ಪ ಮಾಲಾಧಾರಿಗಳು



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 28. ಭಾಲ್ಕಿ: ತಾಲೂಕಿನ ಹುಣಜಿ ಗ್ರಾಮದ ಶಾಸ್ತ್ರಕಲ್ಯಾಣ ಮಂಟಪದಲ್ಲಿ ಪ್ರತೀ ವರ್ಷದಂತೆ ಈ ವರ್ಷವೂ ಕೂಡಾ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಂದ ಅಯ್ಯಪ್ಪ ಸ್ವಾಮಿ ಪಡಿಪೂಜಾ ಕಾರ್ಯಕ್ರಮ ಸಂಭ್ರಮ ಮತ್ತು ಸಡಗರದ ಮಧ್ಯೆ ಜರುಗಿ-ತು. ಹಿರಿಯ ಹಾಗೂ ಕಿರಿಯ ಮಾಲಾಧಾರಿಗಳು ಕೂಡಿಕೊಂಡು ಮೆಟ್ಟಿಲುಗಳನ್ನು ನಿರ್ಮಿಸಿ, ಅದರ ಮೇಲೆ ದೀಪಗಳನ್ನು ಹಚ್ಚಿ, ಪ್ರಣತೆ ಬೆಳಗಿಸಿ, ಅಯ್ಯಪ್ಪ ಸ್ವಾಮಿಯ ಮೂರ್ತಿಗೆ ಫಲ ಪುಷ್ಪಗಳಿಂದ ಅಲಂಕಾರ ಮಾಡಿ ಭಕ್ತಿಯಿಂದ ಪೂಜೆಗೈದರು. ಈ ಕುರಿತು ಮಾತನಾಡಿದ ರವೀಂದ್ರ

ಶಾಸ್ತ್ರಿಯವರು ಮಾತನಾಡಿ ಅಯ್ಯಪ್ಪ ಸ್ವಾಮಿ ಪೂಜೆಯಿಂದ ಇಷ್ಟಾರ್ಥ ಸಿದ್ಧಿ ಸಿದ್ಧಿಸುತ್ತವೆ. ಇದರಿಂದ ಅವಗುಣ ತೊರೆದು ಶಿವಗುಣ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಯುವಕರು ಸನ್ಮಾರ್ಗದಲ್ಲಿ ಸಾಗಲು ಒಂದು ತಿಂಗಳುಗಳ ಕಾಲ ಪೂಜೆ, ಪ್ರಾರ್ಥನೆ, ಧ್ಯಾನ ಮತ್ತು ಶಿಸ್ತು ಸಂಯಮ ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಪಡಿಪೂಜೆಯಲ್ಲಿ ಪ್ರಮುಖರಾದ ರವೀಂದ್ರ ಶಾಸ್ತ್ರೀ, ಅಮರ ಶಾಸ್ತ್ರೀ, ಅರ್ಚಕರಾದ ಮಂಜುನಾಥ ಗುರುಸ್ವಾಮಿ, ಪ್ರಧಾನ ಅರ್ಚಕ ಮಣಿಕಂಠ ಗುರುಸ್ವಾಮಿ, ಹಲಬರ್ಗಾದ ಪೂಜ್ಯ ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರು, ಡಾ. ವೀರೇಂದ್ರ ಶಾಸ್ತ್ರೀ, ಏಕತಾ ಫೌಂಡೇಶನ್ ಅಧ್ಯಕ್ಷರಾದ ರವೀಂದ್ರ ಸ್ವಾಮಿ, ಮುಖಂಡರಾದಚ ಬಸವರಾಜ ವಂಕೆ, ಚಂದ್ರಶೇಖರ ವಂಕೆ, ಡಾ. ಬ್ರಹ್ಮಾನಂದ ಸ್ವಾಮಿ, ಹಿರಿಯ ಗುರುಸ್ವಾಮಿಗಳಾದ ರೇವಣಸಿದ್ದಯ್ಯ ಸ್ವಾಮಿ ಸೇರಿದಂತೆ ನೂರಾರು ಜನರು ಪೂಜೆಯಲ್ಲಿ ಪಾಲ್ಗೊಂಡಿದ್ದರು.

# ಮೌಲ್ಯಾಧಾರಿತ ಶಿಕ್ಷಣ ಇಂದಿನ ಅಗತ್ಯ



(ಮಲ್ಲಪ್ಪಾ ಟಿ ಹಾಸಗೊಂಡ)

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಇಂದಿನ ಆಧುನಿಕ ಯುಗದಲ್ಲಿ ಮಕ್ಕಳಿಗೆ ಮೌಲ್ಯಾಧಾರಿತ ಮತ್ತು ಸಂಸ್ಕಾರಯುತ ಶಿಕ್ಷಣ ಅತ್ಯಂತ ನೀಡುವುದು ಅತ್ಯಂತ ಜರೂ-ರಿಯಾಗಿದೆ ಎಂದು ನಾರಂಜಾ ಸಹಕಾರ ಸಕ್ಕರೆ ಕಾರಖಾನೆ ಅಧ್ಯಕ್ಷ ಡಿ.ಕೆ.ಸಿದ್ರಾಮ ಹೇಳಿದರು.

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಚನ್ನಬಸವೇಶ್ವರ ಪಬ್ಲಿಕ್ ಶಾಲೆಯ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ನಗರ, ಮಹಾನಗರ ಪ್ರದೇಶಗಳಲ್ಲಿ ಶಿಕ್ಷಣ ವ್ಯಾಪಾರೀಕರಣಗೊಳ್ಳುತ್ತಿದೆ. ಮೌಲ್ಯಯುತ ಶಿಕ್ಷಣ ಮರೆಯಾಗುತ್ತಿದೆ. ವಿದ್ಯಾರ್ಥಿಗಳು ಪಾಶ್ಚಿಮಾತ್ಯ ಸಂಸ್ಕೃತಿ, ಡ್ರಗ್ಸ್ ಸೇರಿ ವಿವಿಧ ಚಟಗಳಿಗೆ ಬಲಿಯಾಗುತ್ತಿರುವ ಉದಾಹರಣೆಗಳು ನಮ್ಮ ಮಧ್ಯೆ ಸಾಕಷ್ಟಿವೆ.

ಆದರೆ, ಗಡಿಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಧರ್ಮ ಪ್ರಚಾರ, ಪ್ರಸಾರದ ಜತೆಗೆ ಶೈಕ್ಷಣಿಕ ಸಂಸ್ಥೆಯನ್ನು ತೆರೆದು ಈ ಭಾಗದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ, ಸಂಸ್ಕಾರ ಕಲಿಸಿ ಕೊಡುತ್ತಿರುವುದು ಹೆಮ್ಮೆ ತರಿಸಿದೆ.

ಇಲ್ಲಿ ಕಲಿತ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತ ನಾಡು ಕಟ್ಟುವ ಕೆಲಸ ಮಾಡುತ್ತಿರುವುದು ಸಂತಸ ತರಿಸಿದೆ ತಂದು ತಿಳಿಸಿದರು.

ಸಾನ್ನಿಧ್ಯ ವಹಿಸಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ವಿದ್ಯಾರ್ಥಿಗಳು ಶಾರೀರಿಕ ಮತ್ತು ಮಾನಸಿಕವಾಗಿ ಸದೃಢರಾಗಲು ವಿದ್ಯೆಯ ಜತೆಗೆ ಕ್ರೀಡೆಗೂ ಆದ್ಯತೆ ನೀಡುವುದು ಅಗತ್ಯವಿದೆ. ಕ್ರೀಡೆಯಲ್ಲಿ ಸೋಲು ಗೆಲುವು ಎನ್ನದೇ ಕ್ರೀಡಾ ಮನೋಭಾವದಿಂದ ಭಾಗವಹಿಸಬೇಕು ಎಂದು ತಿಳಿಸಿದರು.

ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಆಡಳಿತಾಧಿಕಾರಿ ಮೋಹನ ರೆಡ್ಡಿ ಅಧ್ಯಕ್ಷತೆ ವಹಿಸಿದರು.

> ಗಡಿ ಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಧರ್ಮ ಸೇವೆ ಜತೆಗೆ ಅನಾಥ ಮಕ್ಕಳು, ನಿರ್ಗತಿಕರಿಗೆ ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ನಿಜವಾದ ದೇವರ ಸೇವೆ ಮಾಡುತ್ತಿದ್ದಾರೆ.
>
> **– ಡಿ.ಕೆ.ಸಿದ್ರಾಮ ಅಧ್ಯಕ್ಷರು ನಾರಂಜಾ ಸಹಕಾರ ಸಕ್ಕರೆ ಕಾರಖಾನೆ**

ಮುಖ್ಯಗುರು ಎನ್.ರಾಜು ವಾರ್ಷಿಕ ವರದಿ ಮಂಡಿಸಿದರು.

ಹಿರೇಮಠ ಸಂಸ್ಥಾನದ ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ ನೇತೃತ್ವ ವಹಿಸಿದರು. ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ, ಯುವ ಮುಖಂಡ ಆಕಾಶ ರಿಕ್ಕೆ, ವಿಲಾಸ ಬಕ್ಕಾ, ಪ್ರಶಾಂತ ರೆಡ್ಡಿ, ಶಶಿಕುಮಾರ ಸೇರಿದಂತೆ ಹಲವರು ಇದ್ದರು.


### ಭಾರತ ಆರ್ಥಿಕವಾಗಿ ಬೆಳೆಯಲು ಮನಮೋಹನ್ ಸಿಂಗ್ ಭದ್ರ ಬುನಾದಿ ಹಾಕಿದ್ದರು

# ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ನಿಧನಕ್ಕೆ ಸಂಸದ ಬಸವರಾಜ ಬೊಮ್ಮಾಯಿ ಸಂತಾಪ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಡಿಸೆಂಬರ್ 28- ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು ನಿಧನ ಹೊಂದಿರುವ ಸುದ್ದಿ ಕೇಳಿ ಅತ್ಯಂತ ದುಖ ಉಂಟು ಮಾಡಿದೆ. ಆರ್ಥಿಕ ತಜ್ಞರಾಗಿ, ಪ್ರಧಾನ ಮಂತ್ರಿಯಾಗಿ ಹತ್ತು ವರ್ಷಗಳ ಕಾಲ ದೇಶವನ್ನು ಮುನ್ನಡೆಸಿದ್ದರು. ದೇಶದ ಆರ್ಥಿಕತೆಗೆ ದೊಡ್ಡ ಬದಲಾವಣೆ ತಂದಿದ್ದರು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಮನಮೋಹನ್ ಸಿಂಗ್ ಅವರು ಅಂತಾರಾಷ್ಟ್ರೀಯ ಸಂಸ್ಥೆಗಳಾದ ವಿಶ್ವ ಸಂಸ್ಥೆ, ಐಎಂಎಫ್ ನಲ್ಲಿ ಒಳ್ಳೆಯ ಸಂಪರ್ಕ ಇಟ್ಟುಕೊಂಡಿದ್ದರಿಂದ ಈ ದೇಶವನ್ನು ಉಳಿಸಲು ಸಾಧ್ಯವಾಯಿತು. ರಿಸರ್ವ್ ಬ್ಯಾಂಕ್ ಗೌರ್ನರ್ ಆಗಿ ಕೆಲಸ ಮಾಡಿದ್ದು, ಈ ದೇಶದಲ್ಲಿ ಹಲವಾರು ಯೋಜನೆಗಳನ್ನು ಜಾರಿಗೆ ತರಲು ಕಾರಣವಾಗಿದೆ.



ದೇಶ ಆರ್ಥಿಕವಾಗಿ ಇಷ್ಟು ದೊಡ್ಡ ಮಟ್ಟದಲ್ಲಿ ಬೆಳೆಯಲು ಮನಮೋಹನ್ ಸಿಂಗ್ ಭದ್ರ ಬುನಾದಿ ಹಾಕಿದ್ದಾರೆ ಎಂದು ತಿಳಿಸಿದ್ದಾರೆ.

ಮನಮೋಹನ್ ಸಿಂಗ್ ಅವರು ಅತ್ಯಂತ ಸಜ್ಜನ ರಾಜಕಾರಣಿ ಆಗಿದ್ದರು. ಒಬ್ಬ ಮುತ್ಸದ್ದಿ ರಾಜಕಾರಣಿಯನ್ನು ದೇಶ ಕಳೆದುಕೊಂಡಿದೆ. ಅವರು ದೇಶಕ್ಕಾಗಿ ಸದಾ ಚಿಂತನೆ ಮಾಡುತ್ತಿದ್ದರು. ಹಲವಾರು ದೂರದೃಷ್ಟಿಯ ನಿರ್ಣಯಗಳನ್ನು ತೆಗೆದುಕೊಂಡಿದ್ದರು. ಅದರ ಲಾಭ ಈಗ ದೇಶಕ್ಕೆ ಆಗುತ್ತಿದೆ. ಅವರು ಪ್ರಚಾರ ಪ್ರಿಯ ರಾಜ-ಕಾರಣ ಮಾಡಿರಲಿಲ್ಲ, ವಾಸ್ತವ ರಾಜಕಾರಣ ಮಾಡಿದ್ದರು. ಕೆಲವು ಅಪ್ರೀಯವಾದ ನಿರ್ಣಯಗಳನ್ನು ದೇಶದ ಹಿತ ದೃಷ್ಟಿಯಿಂದ ತೆ-ಗೆದುಕೊಂಡಿದ್ದರು. ಅವರ ಗಟ್ಟಿ ನಿಲುವು, ಧಿಮಂತಿಕೆಯ ಗುಣ ಹಲವಾರು ಸಂದರ್ಭಗಳಲ್ಲಿ ಗೊತ್ತಾಗುತ್ತದೆ. ಭಾರತ ಚೀನಾ, ಅಮೇರಿಕಾ, ಯುರೋಪ್ ದೇಶಗಳಿಗೆ ಪೈಪೋಟಿ ಕೊಡಲು ಮನಮೊಹನ್ ಸಿಂಗ್ ಅವರು ಭದ್ರ ಬುನಾದಿ ಹಾಕಿದ್ದರು ಎಂದು ತಿಳಿಸಿದ್ದಾರೆ.

ಅವರ ಅಗಲಿಕೆ ದೇಶಕ್ಕೆ ತುಂಬಲಾರದ ನಷ್ಟವುಂಟು ಮಾಡಿದೆ.

ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದುಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ಹಾಗೂ ಅವರ ಅಭಿಮಾನಿಗಳಿಗೆ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಸಂತಾಪದಲ್ಲಿ ತಿಳಿಸಿದ್ದಾರೆ.

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy. Office Ph. No: +91 9449732000.